for Animal Husbandory which is illegal, Notice is well in time. Meeting held correctly, but it was suspended". First Week ಅಂದರೆ ಯಾವುದು? There are seven days in aweek ಇದನ್ನೆಲ್ಲಾ ನೋಡಿ ಮೀಟಿಂಗ್ ನಡೆದಿರುವುದು ಸರಿಯಾಗಿದೆ, ಏನೂ ಮಿಸ್ಟೇಕ್ ಇಲ್ಲ, ತಪ್ಪಾಗಿದೆ ಎನ್ನುವುದನ್ನು ತಿದ್ದಿ, ಸರಿಯಾಗಿದೆ ಎಂದು ಹೇಳಿದ ಮೇಲೂ ಮಾನ್ಯ ಸದಸ್ಯರು ಈ ರೀತಿ ಹೇಳಿದರೆ ಏನು ಮಾಡುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಯಾರು ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೋ, ಅವರೇ ಇಲ್ಲಿ ಹೇಳಲಿ.

ಶ್ರೀ ಕೆ. ಮಲ್ಲಪ್ಪ.— ಮಾನ್ಯ ಸದಸ್ಯರು ಮಾತನಾಡುವಾಗ, ಮಂತ್ರಿಗಳು ವಿನಾ ಕಾರಣ ತೊಂದರೆ ಕೊಡುತ್ತಿದ್ದಾರೆ ಎಂದು ಹೇಳಿದ್ದಾರೆ, ಇದು ನಿಜವಾಗಿಯೂ ಅರ್ಥಗರ್ಭಿತವಾಗಿದೆ. ಜನತೆಯ ಪ್ರೀತಿ ವಿಶ್ವಾಸವನ್ನು ಗೆದ್ದುಕೊಂಡು ಸರ್ಕಾರ ರಚನೆ ಮಾಡಿದಂಥ ಪಕ್ಷ ಜನತಾ ಪಕ್ಷ. ಮಾನ್ಯ ಸದಸ್ಯರು ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆನ್ನುವುದು ತಾವೇ ಅರ್ಥ ಮಾಡಿಕೊಂಡರೆ ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಮಂತ್ರಿಗಳನ್ನು ಚುನಾವಣೆಗೆ ಕರೆದುಕೊಂಡು ಬನ್ನಿ.

8. Legislative Business

The Karnataka Educational Institution (Prohibition of Capitation Fee) Bill, 1984........passed.

(Motion to Consider)

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಹುಲಿಯೂರು ದುರ್ಗ).— ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕಂಥ ಮಸೂದೆಯ ವಿಷಯದಲ್ಲಿ ನಾವು ಆಲೋಚನೆ ಮಾಡಬೇಕಾದುದು ಬಹಳ ಅಗತ್ಯ. ಇಲ್ಲಿ ತೀವ್ರವಾದಂಥ ಆಲೋಚನೆ ಮಾಡಬೇಕಾದುದು ಇದೆ. ಏಕೆಂದರೆ ಇಂಜನಿಯರಿಂಗ್ ಕಾಲೇಜುಗಳಿಗೆ ಮತ್ತು ಮೆಡಿಕಲ್ ಕಾಲೇಜುಗಳಿಗೆ ಮಾತ್ರ ಅಲ್ಲ ಈಗ ಶಿಶು ವಿಹಾರಗಳಿಗೂ ಸಹ ಕ್ಯಾಪಿಟೇಷನ್ ಫೀಯನ್ನು ವಸೂಲ್ಮಾಡತಕ್ಕ ಪರಿಸ್ಥಿತಿ ಬಂದಿದೆ. ಇಂಥ ಪರಿಸ್ಥಿತಿಯಲ್ಲಿ ನಾವು ಅದನ್ನು ತಪ್ಪಿಸುವುದು ಹೇಗೆ ಎನ್ನುವುದು ನಮ್ಮ ಮುಂದಿರತಕ್ಕ ಪ್ರಶ್ನೆಯಾಗಿದೆ. ಬಹಳ ಜನ ಸದಸ್ಯರು ಇವನ್ನು ತಪ್ಪಿಸುವುದು ಸೂಕ್ತ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇದಕ್ಕೆ ಸ್ವಲ್ಪ ಕಾಲಾವಧಿ ಬೇಕಾಗುತ್ತದೆ. ಇದನ್ನು ತಪ್ಪಿಸಿದರೆ ಕೆಲವು ತೊಂದರೆ ಇದೆಯೆಂದು ಹೇಳಿ, ಸರ್ಕಾರದವರು ಈಗ ನಮ್ಮ ಮುಂದೆ ಮಂಡಿಸಿರತಕ್ಕ ಮಸೂದೆಯಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ ನನ್ನ ಅಭಿಪ್ರಾಯವಾದರೂ ಏನೆಂದರೆ, ಈಗ ಮೆಡಿಕಲ್ ಕಾಲೇಜುಗಳಲ್ಲೇ ಆಗಲೀ, ಇಂಜನಿಯರಿಂಗ್ ಕಾಲೇಜುಗಳಲ್ಲೇ ಆಗಲೀ ಸೀಟುಗಳನ್ನು ಹಂಚಿಕೆ ಮಾಡುವಾಗ ಯಾವುದು ಮುಖ್ಯವಾಗಿ ಆಧಾರ? ಕ್ಯಾಪಿಟೇಷನ್ ಫೀ ಒಂದು, ಅದರ ಜೊತೆಗೆ ಅವರಿಗೆ ಇರತಕ್ಕಂಥ ಮೆರಿಟ್. ಇವೆರಡನ್ನೂ ಆಧಾರವಾಗಿ ಇಟ್ಟುಕೊಂಡು ಸೀಟುಗಳನ್ನು ಹಂಚುತ್ತಿರುವುದನ್ನು ನಾವು ನೋಡಬಹುದು. ಕ್ಯಾಪಿಟೇಷನ್ ಫೀಯನ್ನು ವಜಾ ಮಾಡಬೇಕು ಎನ್ನುವುದರ ಉದ್ದೇಶವೇನು? ಮೂಲತಃ ಸೀಟುಗಳ ಹಂಚಿಕೆಯನ್ನು ಮೆರಿಟ್ ಮೇಲೆ ಮಾಡಬೇಕೆನ್ನುವ ಉದ್ದೇಶ ಇಲ್ಲಿ ಇದೆಯೆಂದು ನಾನು ಭಾವಿಸುತ್ತೇನೆ. ಇವೊತ್ತಿನ ದಿವಸ ಮೆರಿಟ್‌ಗೆ ಇರತಕ್ಕಂಥ ಪರಿಸ್ಥಿತಿ ಏನು? ಅಂದರೆ ಕೇವಲ ಅವರ ಜ್ಞಾನ ಸಂಪಾದನೆಯನ್ನು ಪ್ರದರ್ಶನ ಮಾಡತಕ್ಕಂಥ ಪರಿಸ್ಥಿತಿ ಇಲ್ಲಿ ಇಲ್ಲ. ಪ್ರಶ್ನೆ ಪತ್ರಿಕೆಗಳನ್ನು ಕದ್ದು, ಮಾರಾಟ ಮಾಡಿ, ಉತ್ತರವನ್ನು ಮೊದಲೇ ಸಿದ್ಧತೆ ಮಾಡಿಕೊಂಡು ಪರೀಕ್ಷೆಗೆ ಹೋಗುವ ಪರಿಸ್ಥಿತಿ ಇದೆ. ಇಷ್ಟು ಮಾತ್ರ ಅಲ್ಲ, ಪರೀಕ್ಷೆ ಬರೆದಾದ ಮೇಲೂ ಕೂಡ ಯಾರು ಎಕ್ಸಾಮಿನರ್ಸ್ ಎಂದು ಹುಡುಕಿಕೊಂಡು ಅವರ ಸಹಾಯ ಪಡೆದು, ಮೆರಿಟ್ಟನ್ನು ಗಳಿಸತಕ್ಕ ಪರಿಸ್ಥಿತಿ ಇದೆ. ಇದನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡು ಆಲೋಚನೆ ಮಾಡಿದರೆ. ಮೆರಿಟ್ ಎನ್ನುವುದಕ್ಕೆ ಅರ್ಥವಿಲ್ಲದ ಪರಿಸ್ಥಿತಿ ಬಂದಿದೆ. ಮೆರಿಟ್ ಯಾರಿಗೆ ಸಿಗುತ್ತದೆ? ಕ್ಯಾಪಿಟೇಷನ್ ಫೀಸ್ ಕೊಡತಕ್ಕಂಥ ಶಕ್ತಿ ಯಾರಿಗೆ ಇದೆ? ಹಳ್ಳಿಗಾಡಿನಲ್ಲಿರತಕ್ಕ ರೈತರಿಗಾಗಲೀ, ರೈತ ಕೂಲಿಗಾರರಿಗಾಗಲೀ, ಸಾಮಾನ್ಯ ಜನರಿಗಾಗಲೀ ಇವೆರಡಕ್ಕೂ ಶಕ್ತಿ ಇಲ್ಲ. ಕ್ಯಾಪಿಟೇಷನ್ ಫೀ ಕೊಡುವುದಕ್ಕೂ ಶಕ್ತಿ ಇಲ್ಲ. ಮೆರಿಟ್ ಪಡೆಯುವುದಕ್ಕೂ ಶಕ್ತಿ ಇಲ್ಲ. ಇವರಿಗೆ ಮೆರಿಟ್ ಪಡೆಯುವುದಕ್ಕೂ ಅವಕಾಶವೂ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ಸೀಟುಗಳ ಹಂಚಿಕೆ ಅನುಕೂಲಸ್ಥರಿಗೆ ಮತ್ತು ಪಟ್ಟಣಗಳಲ್ಲಿ ವಾಸ ಮಾಡತಕ್ಕಂಥ ಜನರಿಗೆ ಎಲ್ಲಾ ಸೌಲಭ್ಯಗಳೂ ಇರತಕ್ಕಂಥ ಜನಕ್ಕೆ ಈ ಸೀಟುಗಳು ಸಿಗತಕ್ಕಂಥ ಪರಿಸ್ಥಿತಿ ಇದೆ. ಇದನ್ನೆಲ್ಲಾ ನಾವು ಆಲೋಚನೆ ಮಾಡಬೇಕಾದುದು ಸೂಕ್ತವೆಂದು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ ಹಳ್ಳಿಗಾಡಿನಲ್ಲಿ ಇರತಕ್ಕಂಥ ಜನಗಳ ಪರಿಸರ ಅವರಿಗೆ ಇರತಕ್ಕಂಥ ಅವಕಾಶ, ಇದನ್ನು ನೋಡಿದಾಗ ಈ ರೀತಿ ಮೆರಿಟ್ ಪಡೆಯುವುದಕ್ಕೆ ಅವಕಾಶವಿಲ್ಲ? ಆದುದರಿಂದ ಈ ಸೀಟುಗಳ ಹಂಚಿಕೆಯಾಗುವಾಗ ಬಹು

ಮುಖ್ಯವಾಗಿ ನನ್ನ ದೃಷ್ಟಿಯಲ್ಲಿ ಪಟ್ಟಣಗಳಿಗೆ ಮತ್ತು ಹಳ್ಳಿಗಾಡಿಗೆ ಇರತಕ್ಕಂಥ ಪರಿಸ್ಥಿತಿಯನ್ನು ಆಲೋಚನೆ ಮಾಡಿ ಹಳ್ಳಿಗಾಡಿನ ಜನಕ್ಕೆ ಸೀಟುಗಳನ್ನು ರಿಸರ್ವ್ ಮಾಡಬೇಕು ಎನ್ನುವುದು ನನ್ನ ಉದ್ದೇಶ ರಿಸರ್ವೇಷನ್ ಮಾಡುವುದಾದರೂ ಎಷ್ಟು ಎನ್ನುವುದನ್ನು ಆಲೋಚನೆ ಮಾಡಬೇಕು, ಹಳ್ಳಿಗಾಡುಗಳಲ್ಲಿ ಇರತಕ್ಕಂಥ ಜನಸಂಖ್ಯೆ ಎಷ್ಟು? ಪಟ್ಟಣಗಳಲ್ಲಿ ಇರತಕ್ಕಂಥ ಜನಸಂಖ್ಯೆ ಎಷ್ಟು? ಎನ್ನುವುದನ್ನು ಆಧಾರವಾಗಿ ಇಟ್ಟುಕೊಂಡು ಹಳ್ಳಿಗಾಡಿನ ಜನರಿಗೆ ಈ ಒಂದು ಅನುಕೂಲವನ್ನು ಜಾರಿಗೆ ತರತಕ್ಕಂಥಾದ್ದು ಅತ್ಯಾವಶ್ಯಕವಾಗಿದೆ. ಹಳ್ಳಿಗಾಡಿನ ಜನಕ್ಕೆ ನಾನು ಈಗಾಗಲೇ ಅರಿಕೆ ಮಾಡಿಕೊಂಡ ಹಾಗೆ, ಮೆರಿಟ್ ಪಡೆಯುವುದಕ್ಕೆ ಶಕ್ತಿ ಇಲ್ಲ, ಕ್ಯಾಪಿಟೇಶನ್ ಫೀ ಕೊಡುವುದಕ್ಕೆ ಶಕ್ತಿ ಇಲ್ಲ. ಆದಕ್ಕಾಗಿ ಹಳ್ಳಿಗಾಡಿನ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಇಷ್ಟು ಸೀಟು ಎಂದು ಗೊತ್ತು ಮಾಡಬೇಕು. ಕಡೆಯ ಪಕ್ಷ ಶೇಕಡಾ ಎಪ್ಪತ್ತರಷ್ಟನ್ನಾದರೂ ಸ್ಥಾನಗಳನ್ನು ಹಳ್ಳಿಗಾಡಿನ ಜನಕ್ಕಾಗಿ ಮೀಸಲಿಡಬೇಕು. 35 ವರ್ಷಗಳ ಹಿಂದೆ ಸ್ವಾತಂತ್ರ್ಯ ಬಂದ ಮೇಲೆ ಈ ಘನ ಉದ್ದೇಶ ಏನು ಇದೆ, ಇದನ್ನು ಸರ್ಕಾರಕ್ಕೆ ಹೇಳಿಕೊಂಡರೂ, ಇದರ ಲಾಭ ಹಳ್ಳಿಗಾಡಿನ ಜನರಿಗೆ ಸಿಕ್ಕುತ್ತಾ ಇಲ್ಲ. ಈ ಕ್ಯಾಪಿಟೇಷನ್ ಫೀ ಜಾರಿಗೆ ಬಂದಾಗ ಹಳ್ಳಿಗಾಡಿನ ಮಕ್ಕಳಿಗೆ ಸ್ಥಾನ ಸಿಕ್ಕದೆ, ಯಾರಿಗೆ ದುಡ್ಡು ಕೊಡಲು ಶಕ್ತಿ ಇದೆಯೋ, ಅವರಿಗೆ ಸಿಗುತ್ತದೆ. ಪ್ರಾರಂಭದಲ್ಲಿ ಈ ಪಿಡುಗು ಉಂಟಾದಾಗ ಯಾರು ಯಾರು ಕ್ಯಾಪಿಟೇಶನ್ ಫೀ ವಸೂಲ್ಮಾಡುತ್ತಿದ್ದಾರೋ, ಅವರೆಲ್ಲರೂ ಇವೊತ್ತು ಯಾವ ಪರಿಸ್ಥಿತಿಯಲ್ಲಿದ್ದಾರೆ? ಸರ್ಕಾರದಿಂದ ಯಾವ ಸಹಾಯವನ್ನು ಪಡೆದುಕೊಳ್ಳದೆ, ಮೆಡಿಕಲ್ ಕಾಲೇಜುಗಳನ್ನಾಗಲೀ, ಇಂಜನಿಯರಿಂಗ್ ಕಾಲೇಜುಗಳನ್ನಾಗಲೀ ನಡೆಸತಕ್ಕಂಥ ಪರಿಸ್ಥಿತಿಗೆ ಅವರು ಬಂದಿದ್ದಾರೆ.

ಇವತ್ತು ಹೊಸದಾಗಿ ಪ್ರಾರಂಭ ಮಾಡಿದವರಿಗೆ ಈ ಕಷ್ಟ ಒದಗಿರುವುದು. ಆ ಕಷ್ಟವನ್ನು ದೃಷ್ಟಿಯಲ್ಲಿಟ್ಟುಕೊಂಡು ಸರಕಾರ ಈ ವಿಧವಾದಂಥ ಒಂದು ಮಸೂದೆಯನ್ನು ತಂದಿದೆಯೆಂದು ನಾನು ಭಾವಿಸುತ್ತೇನೆ. ಎಷ್ಟೇ ನೀವು ಅವರಿಗೆ ಸಹಾಯ ಮಾಡಿ, ಹಿಂದುಳಿದಿರತಕ್ಕಂಥ ಜನಾಂಗದ ಮಕ್ಕಳಿಗೆ ಸಹಾಯ ದೊರಕಿಸಿಕೊಡಬೇಕೆಂಬ ಘನ ಉದ್ದೇಶ ಸರಕಾರಕ್ಕಿದ್ದರೂ ಕೂಡಾ, ಇವತ್ತು ಇರತಕ್ಕಂಥ ಪರಿಸ್ಥಿತಿಯನ್ನು ನೋಡಿದರೆ ಆ ಸಹಾಯ ಸಿಗುವುದಿಲ್ಲ. ನಾನು ತಮ್ಮ ಮೂಲಕ ವಿದ್ಯಾಮಂತ್ರಿಗಳನ್ನು ಕೇಳುತ್ತೇನೆ. ಕಳೆದ ವರ್ಷ ಮೆಡಿಕಲ್ ಕಾಲೇಜಿಗೆ ಕೊಟ್ಟಿರತಕ್ಕಂಥ ಸೀಟುಗಳ ಪೈಕಿ ಶೇಕಡಾ 93 ಕ್ಕಿಂತ ಹೆಚ್ಚು ಸಂಖ್ಯೆಯ ಅಂಕಗಳನ್ನು ಪಡೆದವರಿಗೆ, ಪಟ್ಟಣದವರಿಗೆ, ಮೆಡಿಕಲ್ ಕಾಲೇಜು ಸೀಟುಗಳು ಸಿಕ್ಕಿವೆ ಪಟ್ಟಿ ಇದೆ, ಅದನ್ನು ತರಿಸಿ ನೋಡಲಿ. ಆ ಲಿಸ್ಟನಲ್ಲಿ ಎಷ್ಟು ಜನ ಹಳ್ಳಿಗಾಡಿನ ಮಕ್ಕಳಿಗೆ ಸಿಕ್ಕಿದೆ. ಎಷ್ಟು ಜನ ಪಟ್ಟಣದವರಿಗೆ ಸಿಕ್ಕಿದೆ? ನಾನು ಜಾತಿ ಹೆಸರನ್ನು ಹೇಳುವುದಕ್ಕೆ ಇಷ್ಟ ಪಡದೇ ಇದ್ದರೂ ಯಾವ ಯಾವ ಜಾತಿಗೆ ಎಷ್ಟೆಷ್ಟು ಸೀಟು ಇದರಲ್ಲಿ ಸಿಕ್ಕಿದೆ ಎಂಬುದನ್ನೂ ನೋಡಬಹುದು. ಏಕೆಂದರೆ ಕೋಟಿಗಟ್ಟಲೆ ಹಣವನ್ನು ಸರಕಾರ ಖರ್ಚು ಮಾಡತಕ್ಕಂಥ ಈ ಒಂದು ಉದ್ಯಮದಲ್ಲಿ ಸಾಮಾನ್ಯ ಜನಕ್ಕೆ ಯಾರಿಗೆ ಇಲ್ಲಿಯವರೆಗೆ ಸಿಕ್ಕಿಲ್ಲವೋ. ಆ ಜನಕ್ಕೆ ಸಹಾಯ ಆಗುವುದಕ್ಕೆ ಸಾಧ್ಯವೇ ಇಲ್ಲ ಎನ್ನುವುದಾದರೆ ಕೋಟಿಗಟ್ಟಲೆ ಹಣ ಯಾರಿಗಾಗಿ ನಾವು ಖರ್ಚು ಮಾಡಬೇಕು? ಇಷ್ಟು ವರ್ಷಗಳ ಮೇಲಾದರೂ ಹಳ್ಳಿಗಾಡಿನಲ್ಲಿರತಕ್ಕಂಥ ಮಕ್ಕಳಿಗೆ ಆ ಸ್ಥಾನಗಳನ್ನು ಮೀಸಲಾಗಿಟ್ಟಾದರೂ ದೊರಕಿಸಿಕೊಡುವುದು ಸರಕಾರದ ಕರ್ತವ್ಯವಾಗಿತ್ತು. ಆದುದರಿಂದ ಈ ವಿಷಯದಲ್ಲಿ ಮಾನ್ಯ ಮಂತ್ರಿಗಳು ಮತ್ತು ಸರಕಾರ ಆಲೋಚನೆ ಮಾಡಬೇಕಾದುದು ಅವಶ್ಯಕ. ಶೇಕಡಾ 70ರಷ್ಟು ಸೀಟುಗಳನ್ನು ಹಳ್ಳಿಗಾಡಿನ ಜನ ಸಾಮಾನ್ಯರಿಗೆ ಮೀಸಲಾಗಿಡಬೇಕು. ಇದು ಕಾನೂನು ಪ್ರಕಾರ ಸರಿ ಹೋಗುತ್ತದೋ ಇಲ್ಲವೋ ಎಂಬ ಅನುಮಾನವನ್ನು ಕೆಲವರು ವ್ಯಕ್ತಪಡಿಸಿದ್ದಾರೆ. ಅಗ್ರಿಕಲ್ಚರಲ್ ಕಾಲೇಜಿನಲ್ಲಿ ಇವತ್ತು ವ್ಯವಸಾಯಗಾರರ ಮಕ್ಕಳಿಗೆ 10-15 ಮಾರ್ಕ್ಸ್ ಹೆಚ್ಚಾಗಿ ಕೊಡುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಂಡಿದ್ದಾರೆ. ಅದನ್ನು ಕೂಡ ತಪ್ಪಿಸುವುದಕ್ಕೆ ಪ್ರಯತ್ನಗಳು ನಡೆದಿವೆ. ರಾಜ್ಯಾಂಗ ಶಾಸನದತ್ತವಾಗಿ ಕೊಡುವುದಕ್ಕೆ ಸಾಧ್ಯವೇ ಇಲ್ಲ ಎನ್ನುವುದನ್ನು ನಾನು ಒಪ್ಪಲಾರೆ. ಒಂದೊಂದು ಪ್ರದೇಶಕ್ಕೆ ಆಗತಕ್ಕ ತೊಂದರೆಗಳನ್ನು ತಿಳಿದು ಇದನ್ನು ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಆಲೋಚನೆ ಮಾಡುವುದು ಅವಶ್ಯಕ. ಒಂದು ಪಕ್ಷ ಸಾಧ್ಯವಿಲ್ಲ ಎನ್ನುವುದಾದರೆ ಇನ್ಯಾವ ರೂಪದಲ್ಲಾದರೂ ಅಗ್ರಿಕಲ್ಚರಲ್ ಕಾಲೇಜಿನಲ್ಲಿ ಕೊಡುವ ಹಾಗೆ ಹೆಚ್ಚು ಮಾರ್ಕ್ಸ್‌ಗಳನ್ನಾದರೂ ಕೊಟ್ಟು ಹಳ್ಳಿಗಾಡಿನಿಂದ ಬರತಕ್ಕಂಥ ಮಕ್ಕಳಿಗೆ ಸಹಾಯ ಆಗುವ ರೀತಿಯಲ್ಲಿ ಈ ಕಾನೂನನ್ನು ತರಬೇಕು. ಯಾವ ರೀತಿಯಲ್ಲಾದರೂ ಹಳ್ಳಿಗಾಡಿನ ಜನರಿಗೆ ಸಹಾಯ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಕೆ. ಜಿ. ಮಹೇಶ್ವರಪ್ಪ. – ಸುಪ್ರೀಂ ಕೋರ್ಟ್‌ನಲ್ಲಿ ಅಗ್ರಿಕಲ್ಚರಿಸ್ಟ್ ಕ್ಲಾಸ್‌ಗೆ ಪರ್ಸೆಂಟೇಜ್ ರಿಸರ್ವೇಷನ್ ಮಾಡಿದುದನ್ನು ಸ್ಟ್ರಕ್ ಡೌನ್ ಮಾಡಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದಕ್ಕೆ ನಾನು ಹೇಳಿದ್ದು. ಯಾವ ರೀತಿ ರಿಸರ್ವೇಷನ್ ಮಾಡಿದರೆ ಅದಕ್ಕೆ ಪ್ರತಿಬಂಧಕವೇ, ಇಲ್ಲವೇ ಎಂಬುದನ್ನು ಆಲೋಚನೆ ಮಾಡಿ ಎಂದು. ಆದರೆ ರೀಜನ್‌ವೈಸ್ ಮಾಡುವುದಕ್ಕೆ ಅಡ್ಡಿ ಇಲ್ಲ ಎಂದು ನನ್ನ ಭಾವನೆ. ನನಗೆ ತಿಳಿದ ಮಟ್ಟಿಗೆ ಅದಕ್ಕೆ ಪ್ರತಿಬಂಧಕ ಇಲ್ಲ. ನನಗೆ ಗೊತ್ತಾಗಿರುವ ಮಟ್ಟಿಗೆ ನಾನು ತಿಳಿಸುತ್ತಿದ್ದೇನೆ. ಆದುದರಿಂದ ಹಳ್ಳಿಗಾಡು ಎಂದರೆ ಪಟ್ಟಣ

ಗಳನ್ನು ಬಿಟ್ಟು, ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ನ್ನು ನಾವು ಸ್ವಲ್ಪ ಮಟ್ಟಿಗೆ ಹಳ್ಳಿ ಎಂದು ತಿಳಿಯಬೇಕಾಗುತ್ತದೆ. ಅದನ್ನು ಪಟ್ಟಣ ಎಂದು ಹೇಳುವುದಕ್ಕೆ ಆಗುವುದಿಲ್ಲ. ಏತಕ್ಕೆಂದರೆ, ಒಂದು ತಾಲ್ಲೂಕು ಕೇಂದ್ರದ ಸುತ್ತಮುತ್ತ ಇರತಕ್ಕ ಮಕ್ಕಳೆಲ್ಲಾ ಅಲ್ಲಿ ಬಂದು ಓದಬೇಕಾಗುತ್ತದೆ. ಹೈಸ್ಕೂಲಿಗೆ ಅಲ್ಲಿಗೆ ಬರಬೇಕು. ಪಿ.ಯು.ಸಿ.ಗೆ ಒಂದು ಕಾಲೇಜಿದ್ದರೆ ಅಲ್ಲಿಗೆ ಬರಬೇಕು. ಅವುಗಳನ್ನೂ ಕೂಡ ನಾವು ಪಟ್ಟಣ ಎಂದು ತಿಳಿಯದೇ, ಆ ಹಳ್ಳಿಗಾಡಿನ ಮಕ್ಕಳು ಮತ್ತು ತಾಲ್ಲೂಕು ಕೇಂದ್ರದ ಸಂಸ್ಥೆಗಳಲ್ಲಿ ಓದ ತಕ್ಕಂಥವರಿಗೆ ತೊಂದರೆ ಆಗದ ಹಾಗೆ ನಾವು ನೋಡಿಕೊಳ್ಳಬೇಕಾಗುತ್ತದೆ.

ಡಾ. ವಿ. ಎಸ್. ಆಚಾರ್ಯ.— ಹಳ್ಳಿಗಾಡಿನ ಡೆಫಿನಿಷನ್ ಏನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಪಟ್ಟಣ ಎಂದರೆ ಏನು ಡೆಫಿನಿಷನ್ ?

ಡಾ. ವಿ. ಎಸ್. ಆಚಾರ್ಯ.— ಗವರ್ನಮೆಂಟ್ ಆಫ್ ಇಂಡಿಯಾ ನೋಟಿಫಿಕೇಷನ್ ಇದೆ, ಅದರ ಪ್ರಕಾರ ಡೆಫಿನಿಷನ್ ಇದೆ

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಹಾಗಾದರೆ ಪಟ್ಟಣ ಬಿಟ್ಟು ಉಳಿದುವೆಲ್ಲಾ ಹಳ್ಳಿಗಾಡು ಎಂದು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು.

ಡಾ. ವಿ. ಎಸ್. ಆಚಾರ್ಯ.— ಅದನ್ನು ಅಮೆಂಡ್‌ಮೆಂಟ್‌ನಲ್ಲಿ ಸ್ಪಷ್ಟವಾಗಿ ಹೇಳಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಈ ರೀತಿ ಮಾಡುವುದಕ್ಕೆ ಸಾಧ್ಯ ಇದೆ. ಹಳ್ಳಿಗಾಡಿನ ವಿವರಣೆ ಕೊಡುವಾಗ, ಹಳ್ಳಿಗಾಡು ಎಂದು ಹೇಳುವುದಾದರೆ, ಯಾವ ಮಕ್ಕಳು ಪಿ. ಯು. ಸಿ. ವರೆಗೆ ಎಲ್ಲಿ ಹಳ್ಳಿಯ ಶಾಲೆಗಳಲ್ಲಿ ಓದಿರುತ್ತಾರೋ, ಅವರನ್ನು ನಾವು ಹಳ್ಳಿಗಾಡಿನವರು ಎಂದು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಹಳ್ಳಿಗಾಡಿನಲ್ಲಿರತಕ್ಕ ನಾನು ಹಳ್ಳಿಯವನಾದರೂ ನನ್ನ ಮಗ ಬೆಂಗಳೂರಿನಲ್ಲಿ ಓದಿದರೆ ಅವನನ್ನು ಹಳ್ಳಿಗಾಡಿನಲ್ಲಿ ಓದಿದವನು ಎಂದು ಪರಿಗಣಿಸಬೇಕಾದ ಅವಶ್ಯಕತೆ ಇಲ್ಲ. ಎಲ್ಲಿ ಓದಿರಬೇಕು ಎಂದರೆ ಹಳ್ಳಿಗಾಡಿನ ಶಾಲೆಗಳಲ್ಲಿ ಓದಿರಬೇಕು. ಅಲ್ಲಿನ ಪರಿಸರ ಸುತ್ತಮುತ್ತ ಅವರಿಗಿರತಕ್ಕ ಸನ್ನಿವೇಶಗಳು ಎಲ್ಲವನ್ನೂ ನೋಡಿದರೆ, ಅವರಿಗಿರತಕ್ಕಂಥ ಅನಾನುಕೂಲತೆಯನ್ನು ನೋಡಿದರೆ ಅವರು ಪಟ್ಟಣಗಳಲ್ಲಿರತಕ್ಕ ಮಕ್ಕಳ ಮೇಲೆ ಅಂಕಗಳನ್ನು ತೆಗೆದುಕೊಳ್ಳುವುದರಲ್ಲಿ ಪೈಪೋಟಿ ಮಾಡುವುದಕ್ಕೆ ಸಾಧ್ಯವಿಲ್ಲ, ಅವಕಾಶವೂ ಇರುವುದಿಲ್ಲ. ಹಳ್ಳಿಗಾಡಿನ ಮಕ್ಕಳು ಎಂದು ಚೆನ್ನಾಗಿ ವಿವರಣೆ ಕೊಟ್ಟು ಅವರಿಗಾಗಿ ಶೇಕಡಾ 70ರಷ್ಟು ಸ್ಥಾನಗಳನ್ನು ಮೀಸಲಿಟ್ಟರೆ ಮಾತ್ರ ನಾವು ಕೋಟಿಗಟ್ಟಲೆ ಖರ್ಚು ಮಾಡಿದುದಕ್ಕೆ ಸಾರ್ಥಕವಾಗುತ್ತದೆ ಮತ್ತು ಅವರಿಂದ ನಾವು ನಾನಾ ವಿಧವಾದ ತೆರಿಗೆಯನ್ನು ವಸೂಲು ಮಾಡಿದ್ದಕ್ಕೆ ಸ್ವಲ್ಪ ಮಟ್ಟಿಗಾದರೂ, ಪ್ರತಿಯಾಗಿ ಅವರಿಗೆ ಸಹಾಯ ಮಾಡಿದ ಹಾಗಾಗುತ್ತದೆ. ಆ ದೃಷ್ಟಿಯಿಂದ ಮಾನ್ಯ ವಿದ್ಯಾಮಂತ್ರಿಗಳು ಎಚ್ಚರಿಕೆ ವಹಿಸಬೇಕು. ಈಗಿರುವ ಹಾಗೆ ಇದಕ್ಕೆ ನಾವು ಒಪ್ಪಿಗೆ ಕೊಟ್ಟರೆ ಪ್ರಯೋಜನ ಸಿಗುವುದಿಲ್ಲ. ಇದು ಎರಡು ಮೂರು ವರ್ಷಗಳಿಂದ ಕ್ಯಾಪಿಟೇಷನ್ ಫೀ ಬಗ್ಗೆ ಹೇಳುತ್ತಾ ಹಿಂದೆ ಅನೇಕ ವೇಳೆ ಕ್ಯಾಪಿಟೇಷನ್ ಫೀ ತಗೆದುಕೊಳ್ಳಕೂಡದು ಅದನ್ನು ತಪ್ಪಿಸಬೇಕು ಎನ್ನುವ ವಾದ ಇದ್ದರೂ ಕೂಡಾ ಇದಕ್ಕೆ ಒಂದು ರೂಪ ಕೊಡತಕ್ಕ ಪ್ರಯತ್ನವನ್ನು ಈ ಸರ್ಕಾರದವರು ಮಾಡಿದ್ದಾರೆ. ಆದರೆ ಇದರ ಉದ್ದೇಶ ನೆರವೇರುವುದಿಲ್ಲ. ಇದರ ಉದ್ದೇಶ ನೆರವೇರಬೇಕಾದರೆ, ಹಳ್ಳಿಗಾಡು, ಪಟ್ಟಣ ಎಂಬ ವ್ಯತ್ಯಾಸ ಮಾಡಿ ಅಲ್ಲಿಂದ ಬಂದ ಮಕ್ಕಳಿಗೆ ಹೆಚ್ಚು ಸ್ಥಾನಗಳು ದೊರಕುವ ಹಾಗೆ ಮಾಡುವುದು ಅತ್ಯಾವಶ್ಯಕ. ಆ ದೃಷ್ಟಿಯಿಂದ ಇದಕ್ಕೆ ತಿದ್ದುಪಡಿ ತರಬೇಕೆಂದು ನನ್ನ ಸಲಹೆ. ಇಷ್ಟು ಮಾತ್ರ ಹೇಳಿ. ಅವಸರದಲ್ಲಿ ಇದನ್ನು ತರುವುದಕ್ಕೆ ಆಗುವುದಿಲ್ಲ ಎಂದು, ನಮ್ಮ ಶಾಸಕ ಮಿತ್ರರು ಸಲಹೆ ಮಾಡಿದ್ದಾರೆ. ಇದನ್ನು ನೀವು ಜಾಯಿಂಟ್ ಸೆಲೆಕ್ಟ್ ಕಮಿಟಿಗಾಗಲೀ, ಸೆಲೆಕ್ಟ್ ಕಮಿಟಿಗಾಗಲೀ, ತೆಗೆದುಕೊಂಡುಹೋಗಿ, ಕೂಲಂಕುಷವಾಗಿ ಪರಿಶೀಲನೆ ಮಾಡಿ. ಎಲ್ಲೆಲ್ಲಿ ಏನೇನು ತೊಡಕುಗಳಿವೆ, ಆ ತೊಡಕುಗಳನ್ನು ನಿವಾರಣೆ ಮಾಡಿ, ಶಾಸನವನ್ನಾಗಿ ಇದನ್ನು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇದಕ್ಕೆ ಮಾನ್ಯ ವಿದ್ಯಾಮಂತ್ರಿಗಳು ಮತ್ತು ಸರಕಾರ ಸಾಕಷ್ಟು ಗಮನ ಕೊಡುತ್ತಾರೆಂದು ನಂಬಿ, ನಾನು ಈ ಸಲಹೆಯನ್ನು ಮಾಡುತ್ತೇನೆ.

ಶ್ರೀ ಕೆ. ಜಿ. ಮಹೇಶ್ವರಪ್ಪ — ಮಾನ್ಯ ಅಧ್ಯಕ್ಷರೇ, ಈ ಬಿಲ್ಲನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕು, ಇಲ್ಲವೇ, ಸಾರ್ವಜನಿಕ ಅಭಿಪ್ರಾಯಕ್ಕೆ ಕಳುಹಿಸಬೇಕೇ ಎನ್ನುವ ವಾದವನ್ನು ಮಾನ್ಯ ರಂಗನಾಥ್ ಅವರು ಹೇಳಿದರು. ಸ್ವಾಮಿ, ಈಗಾಗಲೇ ಆರ್ಡಿನೆನ್ಸ್ ಜಾರಿಯಲ್ಲಿದೆ, ಮೊದಲಿನ ಆರ್ಡಿನೆನ್ಸ್ ಅವಧಿ ಮುಗಿದಿದ್ದು, ಎರಡನೇ ಆರ್ಡಿನೆನ್ಸ್ ಈಗ ಜಾರಿಯಲ್ಲಿದೆ. ಇದು ಕಾನೂನು ಆಗದೇ ಇದ್ದರೆ ಆ ಆರ್ಡಿನೆನ್ಸ್ ವಿಸ್ತರಿಸುವುದಕ್ಕೆ ಮತ್ತೊಂದು ಆರ್ಡಿನೆನ್ಸ್ ತರತಕ್ಕಂಥಾದ್ದು ಸಂವಿಧಾನಕ್ಕೆ ವಿರುದ್ಧವಾದುದು.

ಶ್ರೀ ಕೆ. ಹೆಚ್. ರಂಗನಾಥ್.— ಅದೇ ಈಗ ಆಗಿರುವುದು.

ಶ್ರೀ ಕೆ. ಜಿ. ಮಹೇಶ್ವರಪ್ಪ.— ಇಂತಹ ಒಂದು ಪರಂಪರೆ ನಮ್ಮ ಕರ್ನಾಟಕದಲ್ಲಿ ಇಲ್ಲ ಸ್ವಾಮಿ. ತಾವು ಆಲೋಚನೆ ಮಾಡಬೇಕು, ಇದನ್ನು ಪಬ್ಲಿಕ್ ಒಪೀನಿಯನ್‌ಗೆ ಕಳುಹಿಸಿದರೆ, ಜಾಯಿಂಟ್ ಸೆಲೆಕ್ಟ್

ಕಮಿಟಿಗೆ ಕಳುಹಿಸಿದರೆ, ಮತ್ತೊಂದು ಆರ್ಡಿನೆನ್ಸ್ ತರಬೇಕಾಗುತ್ತದೆ. To extend ordinance by an another ordinance is a bad precedent. ಕರ್ನಾಟಕದಲ್ಲಿ ನನಗೆ ತಿಳಿದಮಟ್ಟಿಗೆ ಬಹುಶಃ ಇದೊಂದೇ ಇರಬಹುದು. Extension of the validity of an ordinance by proclaiming another ordinance. ಕರ್ನಾಟಕದಲ್ಲಿ ಬಹಳ ಕಡಿಮೆ. ಬಿಹಾರದಲ್ಲಿ ಇಂತಹ 40-50 ಆರ್ಡಿನೆನ್ಸ್‌ಗಳು ಆಗಿರುವ ಸಂದರ್ಭಗಳೂ ಇವೆ. To renew an ordinance by another ordinance in Karnataka, there is no other instance except this. It is a very inevitable thing that has happened. ಈಗ ಆರ್ಡಿನೆನ್ಸ್ ಜಾರಿಯಲ್ಲಿದೆ. ಬಹುಶಃ ಈ ಆರ್ಡಿನೆನ್ಸ್ ಅವಧಿ ಮುಗಿದ ಮೇಲೆ ಮತ್ತೊಂದು ಆರ್ಡಿನೆನ್ಸ್ ತಂದು ಇದನ್ನು ಮುಂದುವರಿಸಬೇಕೆಂದು ಅವರ ಅಭಿಪ್ರಾಯವೇ ಅಥವಾ ಇದನ್ನು ಕಾನೂನು ಮಾಡಬೇಕೆಂದು ಅಭಿಪ್ರಾಯವೇ ? ಇದನ್ನು ಕಾನೂನು ಮಾಡದಿದ್ದರೆ ಇದರ ಪರಿಣಾಮ ಏನಾಗುತ್ತದೆ ಎಂದು ತಾವು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಈಗ ಟೆಕ್ನಿಕಲ್ ಗ್ರೌಂಡ್ ಮೇಲೆ ನೋಡಿದರೆ, ಇದು ಹೊಸದಾಗಿ ನಡೆಯುತ್ತಿದೆ ಎನ್ನುವ ಕಾರಣ ಮೇಲೆ ನಮ್ಮ ಉದ್ದೇಶ ಯಾವುದು ಇದೆ ಅದರ ಕಡೆ ದೃಷ್ಟಿ ಇಟ್ಟುಕೊಂಡು ಮಾಡಿದರೆ ತಪ್ಪಾಗುವುದಿಲ್ಲ, ಎಂದು ನನ್ನ ಭಾವನೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.— ಉದ್ದೇಶಕ್ಕೆ ಆಮೇಲೆ ಬರುತ್ತೇನೆ. ಇದನ್ನು ಸಾರ್ವಜನಿಕ ಅಭಿಪ್ರಾಯಕ್ಕೆ ಕಳುಹಿಸುವುದರಿಂದ, ಅಥವಾ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸುವುದರಿಂದ ಆಗತಕ್ಕ ಪರಿಣಾಮ ಏನು ಎಂಬುದನ್ನು ಯೋಚನೆ ಮಾಡಬೇಕು. ಪುನಃ ಮತ್ತೊಂದು ಆರ್ಡಿನೆನ್ಸ್ ತಂದು ಆ ಆರ್ಡಿನೆನ್ಸ್‌ನಿಂದ ಅಧಿಕಾರವನ್ನು ಚಲಾಯಿಸಿಕೊಂಡು ಹೋಗತಕ್ಕ ನೀತಿ ನಮ್ಮ ಸರ್ಕಾರಕ್ಕೆ ಇಲ್ಲ. ಇದನ್ನೇನಾದರೂ ಮತ್ತೆ ತಡೆಹಿಡಿಯುವುದಾದರೆ ಅಥವಾ ಉದ್ದೇಶಪೂರ್ವಕವಾಗಿ ಈ ಬಿಲ್ಲು ಪಾಸಾಗದ ರೀತಿಯಲ್ಲಿ ನೋಡಿಕೊಳ್ಳಬೇಕು ಎಂಬ ಅಭಿಪ್ರಾಯ ನಿಮಗೆ ಇದ್ದಹಾಗೆ ಇದೆ ಎಂದು ನನಗನ್ನಿಸುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.— ನೀವು ತಂದಿರುವ ಆರ್ಡಿನೆನ್ಸ್ ಬೇಡ ಅಂತ ಒಂದು ರೆಸಲ್ಯೂಷನ್ ತರುವುದಕ್ಕೆ ರೂಲ್ಸ್‌ನಲ್ಲಿ ಅವಕಾಶ ಇದೆ. ನಿಮ್ಮ ಉದ್ದೇಶ ಘನವಾದ ಉದ್ದೇಶ. ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡುವುದು ....

ಶ್ರೀ ಕೆ. ಜಿ. ಮಹೇಶ್ವರಪ್ಪ.— 2 ಸಾರಿ ಆರ್ಡಿನೆನ್ಸ್ ಅನ್ನು ತರಬಾರದಾಗಿತ್ತು.

ಶ್ರೀ ಕೆ. ಹೆಚ್. ರಂಗನಾಥ್.— ತಾವು ಹೇಳುವುದನ್ನು ಹೇಳಿ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಈಗಾಗಲೇ 2 ಸಾರಿ ಆರ್ಡಿನೆನ್ಸ್‌ನ್ನು ತಂದಿದ್ದಾರೆ. ಮತ್ತೊಂದು ಆರ್ಡಿನೆನ್ಸ್ ಅನ್ನು ತರಬಹುದೇ ? ಸಂವಿಧಾನಾತ್ಮಕವಾಗಿ ಸುಪ್ರೀಂ ಕೋರ್ಟಿನಲ್ಲಿ ಇಂತಹದರ ಬಗ್ಗೆ ಸಂವಿಧಾನಾತ್ಮಕತೆಯ ಬಗ್ಗೆ ಕೆಲವರು ಕೇಸ್ ಹಾಕಿದ್ದಾರೆ. ಬಿಹಾರ್‌ನಲ್ಲಿ ಇದೇ ಪದೇ ಪದೇ ಆರ್ಡಿನೆನ್ಸ್‌ಗೆ ಮತ್ತೊಂದು ಆರ್ಡಿನೆನ್ಸ್ ತಂದಿದ್ದಕ್ಕೆ ಆ ರೀತಿ ಆಗಿದೆ. ಆದರೆ ನಮ್ಮ ಸರ್ಕಾರದವರು ಆರ್ಡಿನೆನ್ಸ್‌ನ್ನು ತಕ್ಷಣ ಕಾನೂನು ಆಗಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿರುವುದಕ್ಕೆ ತಾವುಗಳೆಲ್ಲರೂ ಅಭಿನಂದಿಸಬೇಕಾಗಿತ್ತು. ಮಾನ್ಯ ರಂಗನಾಥ್‌ರವರ, ಮತ್ತು ಇತರೇ ಮಾನ್ಯ ಸದಸ್ಯರು ಈ ಬಿಲ್ಲಿನ ಪ್ರಿಯಾಂಬಲ್‌ನಲ್ಲಿ ಏನು ಹೇಳಲಾಗಿದೆ, ಅದಕ್ಕಿಂತ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಏನು ಹೇಳಿದ್ದಾರೆ, ಅದು ಬಹಳ ಮುಖ್ಯವಾದುದು ಅಂತ ಹೇಳಿದ್ದಾರೆ. ತಮ್ಮ ಅನುಭವದಲ್ಲಿ ಹೇಳುವುದಾದರೆ,

ಶ್ರೀ ಕೆ. ಹೆಚ್. ರಂಗನಾಥ್.— ಕ್ಲಾಸ್ 3ರಲ್ಲಿ ಏನು ಹೇಳಿದ್ದಾರೆ ಅದನ್ನು ನೋಡಿ.

ಶ್ರೀ ಕೆ. ಜಿ. ಮಹೇಶ್ವರಪ್ಪ.— ರಾಜ್ಯಾಂಗದ ಪ್ರಿಯಾಂಬಲ್‌ನಲ್ಲಿ ಘನವಾದ ಉದ್ದೇಶವನ್ನೇ ಹೇಳಿದ್ದೇವೆ. ಫಂಡಮೆಂಟಲ್ ಲಾ. ಸಂವಿಧಾನದ ಪ್ರಿಯಾಂಬಲ್‌ನಲ್ಲಿ ಏನು ಹೇಳಿದ್ದಾರೆ, ಎಲ್ಲರಿಗೂ ಸಮಾನ ಅವಕಾಶ, ಮತ್ತೆ ಎಲ್ಲರನ್ನೂ ಸಮಾನ ದೃಷ್ಟಿಯಿಂದ ಕಾನೂನಿನ ಎದುರು ನೋಡಿಕೊಳ್ಳಬೇಕೆಂದು ಇದೆ. ಆದರೆ ಆರ್ಟಿಕಲ್ 14, 15, 16 ರಲ್ಲಿ ಮತ್ತು ಡೈರೆಕ್ಟೀವ್ ಪ್ರಿನ್ಸಿಪಲ್ ಬಗ್ಗೆ ಮಾತನಾಡಿದ್ದಾರೆ. ಬೇಕಾದಷ್ಟು ಹೇಳಿದ್ದಾರೆ. ಉದಾತ್ತ ತತ್ವವನ್ನು ಹೇಳಿದ್ದಾರೆ. ಆದರೆ ಅದನ್ನು ಕಾರ್ಯಗತ ಮಾಡತಕ್ಕಂತಹದ್ದರಲ್ಲಿ ಎಡರುತೊಡರುಗಳು ಬರತಕ್ಕ ಸಂದರ್ಭದಲ್ಲಿ ಪ್ರಾವಿಸ್ಯೋ ರಿಸ್ಟ್ರಿಕ್ಷನ್ಸ್ ಇರುತ್ತವೆ. ಅವರಲ್ಲೂ ರೀಜನೆಬಲ್ ರಿಸ್ಟ್ರಿಕ್ಷನ್ಸ್ ಇರುತ್ತವೆ. ಅದರಂತೆ ಇಲ್ಲೂ ತರಬೇಕಾಗುತ್ತವೆ. ಪ್ರಿಯಾಂಬಲ್‌ನಲ್ಲಿ ಹೇಳಿರತಕ್ಕ ವಿಚಾರ, ಮತ್ತೆ ಸೆಕ್ಷನ್‌ನಲ್ಲಿ ಹೇಳಿರತಕ್ಕ ವಿಚಾರದ ಬಗ್ಗೆ, ಕೋರ್ಟಿನ ಮುಂದೆ ವಾದ ವಿವಾದ ಬಂದಾಗ ಸೆಕ್ಷನ್ ಹಾಗೂ ಪ್ರಾವಿಸೋವನ್ನು ವ್ಯಾಖ್ಯಾನ ಮಾಡುತ್ತಾರೆಯೇ ಹೊರತು ಪ್ರಿಯಾಂಬಲ್‌ನಲ್ಲಿರುವುದನ್ನು ವ್ಯಾಖ್ಯಾನ ಮಾಡಿ ಕೋರ್ಟಿನಲ್ಲಿ ತೀರ್ಪು ಕೊಡುವುದಿಲ್ಲ. ಉದಾತ್ತ ತತ್ವವನ್ನು ಹೇಳಿದ್ದಾರೆ. ಯಾವುದೇ ಕಾನೂನನ್ನು ತೆಗೆದುಕೊಳ್ಳಿ, ಪ್ರಿಯಾಂಬಲ್‌ನಲ್ಲಿ ಹೇಳುವುದನ್ನೆಲ್ಲಾ ಹೇಳಲೇಬೇಕು. ಇದಕ್ಕೆ ಒಂದು ಉದಾಹರಣೆಯನ್ನು ಕೊಡುವುದಾದರೆ,

ಡಾ॥ ರಾಮ್‌ಮನೋಹರ್ ಲೋಹಿಯಾರವರು ಸಮಾಜವಾದದ ಬಗ್ಗೆ, ಸಮಾಜವಾದ ಅಂದರೆ ಏನು ಎಂಬುದಾಗಿ ವ್ಯಾಖ್ಯಾನ ಮಾಡುತ್ತಾ, ಸಮಾನಾಂತರ ಅವಕಾಶವನ್ನು ಕಲ್ಪಿಸುವುದು ಅದರ ಗುರಿ ಅದರ ಗರಿಷ್ಟ ಮಟ್ಟವನ್ನು ಮುಟ್ಟಿ ಎಂಬುದಾಗಿ ಹೇಳಿದ್ದಾರೆ. ಆದರೆ ತಾವು ಈಗ ಗರಿಷ್ಟ ಮಟ್ಟವನ್ನು ಏತಕ್ಕಾಗಿ ಮುಟ್ಟುತ್ತೀರಿ ಎಂದು ಕೇಳಿದ ಹಾಗೆ ಆಗುತ್ತದೆ. ಆದ್ದರಿಂದ ಪ್ರಿಯಾಂಬಲ್‌ನಲ್ಲಿ ಏನೇ ಹೇಳಿದರೂ ಕೂಡ ಪ್ರಾಕ್ಟಿಕಲ್ ಆಸ್ಪೆಕ್ಟನ್ನು ಗಣನೆಗೆ ತೆಗೆದುಕೊಂಡು ಮಾತನಾಡಬೇಕಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.— ಹಾಗಾದರೆ ಪ್ರೊಹಿಬಿಷನ್ ಅಂತ ಏಕೆ ಮಾಡಿದ್ದೀರಿ ?

ಶ್ರೀ ಕೆ. ಜಿ. ಮಹೇಶ್ವರಪ್ಪ.—ಅದು ನಮ್ಮ ಗುರಿ. ಸಾಮಾನ್ಯವಾದ ಕಾನೂನಾಗಲಿ, ಅಥವಾ ಫಂಡಮೆಂಟಲ್ ಕಾನೂನಾಗಲಿ, ಅದರಲ್ಲಿ ನಮ್ಮ ಉದ್ದೇಶವನ್ನು ಹೇಳಲೇಬೇಕಾಗುತ್ತದೆ.

ಡಾ. ವಿ. ಎಸ್ ಆಚಾರ್ಯ.— ಇದನ್ನು ಅಬಾಲಿಷ್ ಮಾಡುತ್ತೇವೆಂದು ಹೇಳಿದ್ದರೂ ಗುರಿಯನ್ನು ಸಾಧಿಸುವುದಕ್ಕೆ ಎಷ್ಟು ಸಾಧ್ಯವೋ ಅಷ್ಟನ್ನು ಮಾಡುತ್ತೇವೆ ಎಂಬುದಾಗಿ ತಮ್ಮ ಚರ್ಚೆಯನ್ನು ಇದರೊಳಗೆ ತರುವುದಕ್ಕೆ ಯಾವ ರೀತಿ ಪ್ರಯತ್ನ ಮಾಡುತ್ತಿದ್ದೀರಿ, ಅದಕ್ಕೆ ಅಭಿನಂದಿಸಬೇಕಾಗಿದೆ.

ಶ್ರೀ ಕೆ. ಜಿ. ಮಹೇಶ್ವರಪ್ಪ — ಡಿರೆಕ್ಟಿವ್ ಪ್ರಿನ್ಸ್‌ಪಲ್‌ನಲ್ಲಿ ಕಡ್ಡಾಯವಾಗಿ ಹಾಗೂ ಉಚಿತವಾಗಿ 3ನೇ ವರ್ಷದ ನಂತರ 14 ವರ್ಷದವರೆಗೆ ಶಿಕ್ಷಣವನ್ನು ಕೊಡಬೇಕೆಂದು ಆದರೂ ಕಳೆದ 35 ವರ್ಷಗಳಿಂದಲೂ ಆ ರೀತಿ ಕೊಡುವುದಕ್ಕೆ ಸಾಧ್ಯವಾಯಿತೆ ? ಹಾಗಾದರೆ ಡೈರೆಕ್ಟಿವ್ ಪ್ರಿನ್ಸ್‌ಪಲ್‌ನಲ್ಲಿ ಅದು ಏಕೆ ಬರಬೇಕು ಎಂದು ಕೇಳಿದ ಹಾಗೆ ಆಗುತ್ತದೆ. ಪ್ರಿಯಾಂಬಲ್‌ನಲ್ಲಿ ಸಮಾನ ಅವಕಾಶ ಮತ್ತು ಸಮಾನ ದೃಷ್ಟಿಯಿಂದ ಕಾನೂನಿನ ದೃಷ್ಟಿಯಲ್ಲಿ ನೋಡಬೇಕು ಅಂತ ಇದೆ. ಆದರೆ ಆರ್ಟಿಕಲ್ 15ರ ಪ್ರಕಾರ :— You cannot discriminate against any citizen on the grounds of religion, race, caste, sex, place of birth etc., ಎಂದು ಇದೆ. ಅಂದರೆ ಪ್ರಾವಿಸೋ ಮೂಲಕ ರಿಸ್ಟ್ರಿಕ್ಷನ್ ಇದೆ. ಇದೇ ರೀತಿ ಸ್ಪೆಷಲ್ ಪ್ರಾವಿಸೋ ಅನ್ನೂ ಕೂಡ ಮಾಡಿದ್ದಾರೆ. ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡು ಈ ರೀತಿಯ ವಿಶೇಷ ಪ್ರಾವಿಸೋ ಅನ್ನು 14, 15, ಹಾಗೂ 16ರ ಕೆಳಗೆ ತಂದಿದ್ದು ಏಕೆ ಎಂಬುದಾಗಿ ಪ್ರಶ್ನೆ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ನನ್ನ ಉದ್ದೇಶವೇನೆಂದರೆ, ಪ್ರಿಯಾಂಬಲ್‌ನಲ್ಲಿ ಏನು ಹೇಳಬೇಕೋ ಅದನ್ನು ಹೇಳಬೇಕು ಬೇರೆ ವಿಧಿಯಿಲ್ಲ. ಆದರೆ ಅದನ್ನು ನಾವು ಕಾರ್ಯಗತ ಮಾಡುವಾಗ ವಾಸ್ತವಿಕ ಪರಿಸ್ಥಿತಿಯನ್ನು ನೋಡಿಕೊಂಡು ಅದಕ್ಕೆ ಸರಿಯಾದಂತಹ ಪ್ರೊವಿಜನ್ಸ್ ಅನ್ನು ಮಾಡತಕ್ಕಂತಹದ್ದು ಯಾವುದೇ ಒಂದು ಕಾನೂನಿನಲ್ಲಿ ಇರತಕ್ಕಂತಹದ್ದು. ಆದ್ದರಿಂದ ಪ್ರಿಯಾಂಬಲ್‌ನಲ್ಲಿ ಏನು ಹೇಳಿದ್ದೇವೆ ? ಹೌದು ಕ್ಯಾಪಿಟೇಷನ್ ಶುಲ್ಕ ಅಬಾಲಿಷ್ ಮಾಡುತ್ತೇವೆಂದು ಒಪ್ಪಿಕೊಂಡಿದ್ದೇವೆ. ನಿಜ. ನಮ್ಮ ಚುನಾವಣಾ ಪ್ರಣಾಳಿಕೆಯಲ್ಲೂ ಇದನ್ನು ತಂದೇ ತರುತ್ತೇವೆಂದು ಹೇಳಿದ್ದೇವೆ. ಆದರೆ ನಾವು ಹಿಂದೆ ಹೋಗಿದ್ದೇವೆಯೋ ! ವಾದಕ್ಕೋಸ್ಕರ ಈ ಮಾತನ್ನು ಹೇಳುವುದಿಲ್ಲ. 5ನೇ ವರ್ಷದವರೆಗೂ ಸುಮ್ಮನೆ ಕುಳಿತು ಕೊಳ್ಳುವುದಿಲ್ಲ. 5ನೇ ವರ್ಷದಲ್ಲಿ ಕ್ಯಾಪಿಟೇಷನ್ ಫೀಯನ್ನು ರದ್ದು ಮಾಡತಕ್ಕ ಅವಶ್ಯಕತೆಯೇ ಬರುವುದಿಲ್ಲ. 4ನೇ ವರ್ಷದಲ್ಲಿ ಮಾಡಿದರೂ ಮಾಡುತ್ತೇವೆ. ಆವಾಗ ಏನು ಹೇಳುತ್ತೀರಿ ? 3ನೇ ವರ್ಷದಲ್ಲೇ ಮಾಡಿದರೂ ಮಾಡುತ್ತೇವೆ ನಮಗೆ ಅಧಿಕಾರ ಇದೆ. ತಕ್ಷಣ ಎಲ್ಲಾ ಕ್ಯಾಪಿಟೇಷನ್ ಫೀಯನ್ನು ರದ್ದು ಮಾಡಿ ಅಂತ ಹೇಳತಕ್ಕಂಥಹದ್ದು ಸರಿಯಾದುದೇ? ವಾಸ್ತವಿಕವಾಗಿ ಅದು ಸಾಧ್ಯವಿಲ್ಲದ ಮಾತು. ಖಾಸಗಿ ಸಂಸ್ಥೆಯವರು ನಡೆಸುತ್ತಿರುವ 8 ಕಾಲೇಜುಗಳಲ್ಲಿ ಒಬ್ಬ ವೈದ್ಯಕೀಯ ವಿದ್ಯಾರ್ಥಿಯನ್ನು ತಯಾರು ಮಾಡುವುದಕ್ಕೆ ಒಂದು ವರ್ಷಕ್ಕೆ ಆಗತಕ್ಕ ಖರ್ಚು ಒಂದು ಲಕ್ಷ ರೂಪಾಯಿಗಳಾಗುತ್ತವೆ. ಈ ಎಲ್ಲಾ ಭಾರವನ್ನು ಸರ್ಕಾರವೇ ಹೊತ್ತು, ಖಾಸಗಿ ಸಂಸ್ಥೆಯವರು ನಡೆಸುವಂತಹ ಈ 8 ಕಾಲೇಜುಗಳನ್ನು ಸರ್ಕಾರವೇ ತೆಗೆದುಕೊಳ್ಳಬೇಕೆಂಬ ತೀರ್ಮಾನಕ್ಕೆ ಬರುವುದಾದರೆ, ಈ 5 ವರ್ಷಗಳ ಅವಧಿಯಲ್ಲಿ ಈ ಖಾಸಗಿ ಸಂಸ್ಥೆಗಳವರು ತಮ್ಮದೇ ಸಂಪನ್ಮೂಲಗಳಿಂದ, ತಮ್ಮದೇ ಆದ ಶಕ್ತಿಯಿಂದ, ಯೂನಿವರ್ಸಿಟಿಯ ಕಂಡೀಷನ್‌ಗೆ, ಅಥವಾ ಮೆಡಿಕಲ್ ಕೌನ್ಸಿಲ್‌ನ ಕಂಡೀಷನ್‌ಗೆ ಒಪ್ಪತಕ್ಕ ಸ್ಟ್ಯಾಂಡರ್ಡ್‌ಗೆ ರೀಚ್ ಆಗಿ ಕ್ಯಾಪಿಟೇಷನ್ ಫೀ ಇಲ್ಲದೆ ನಡೆಸುವುದಾದರೆ, ನಿಜವಾಗಿಯೂ ರಾಜ್ಯಕ್ಕೆ ಅದೊಂದು ಸ್ವತ್ತು ಆಗುತ್ತದೆ, ಆ ತರಹ ಈ 8 ಕಾಲೇಜುಗಳು ಬರುವುದಾದರೆ, ಅವುಗಳನ್ನು ರಾಷ್ಟ್ರೀಕರಣ ಮಾಡುವಂತಹ ಅಗತ್ಯವೇ ಇಲ್ಲವೆಂದು ನನ್ನ ಅಭಿಪ್ರಾಯದಲ್ಲಿ ಹೇಳುತ್ತೇನೆ.

ಶ್ರೀ ಎನ್ ಹುಚ್ಚಮಾಸ್ತಿಗೌಡ.— ಹಿಂದೆಯೂ ಕೂಡ ಈ ರೀತಿ ಕ್ಯಾಪಿಟೇಷನ್ ಶುಲ್ಕವನ್ನು ತೆಗೆದುಕೊಂಡು ಸ್ವತಂತ್ರವಾಗಿ ನಡೆಸತಕ್ಕಂತಹ ಸಂಸ್ಥೆಯ ದೊಡ್ಡವರೊಬ್ಬರು ಏನು ಹೇಳಿದರು ಅಂದರೆ, ನಾನು ದುಡ್ಡನ್ನು ತೆಗೆದುಕೊಳ್ಳುತ್ತೇನೆ. ನಿಮ್ಮನ್ನು ನಡೆಸುವುದಕ್ಕೆ ಖರ್ಚನ್ನು ಕೊಡಿ ಎಂದು ಕೇಳುವುದಿಲ್ಲ. ವಿದ್ಯಾಭ್ಯಾಸವನ್ನು ಕೊಡುತ್ತೇನೆ, ಅಡ್ಡಿ ಮಾಡುವುದಕ್ಕೆ ನೀವು ಯಾರು ಅಂತ ಕೇಳಿದರು. ನೀವು ಮಾಡುತ್ತಿರುವ ವಾದವು ಹಾಗೇ ಆಗುತ್ತದೆ. ತಮ್ಮ ತೀರ್ಮಾನವನ್ನು ನಾವು ಪ್ರಶ್ನೆ ಮಾಡುವುದಿಲ್ಲ. ಆದರೆ ಅದನ್ನು ಕಾರ್ಯಗತ ಮಾಡುವಾಗ ನಿಮ್ಮ ಉದ್ದೇಶ ಸಫಲವಾಗುವುದಿಲ್ಲ ಅಂತ

ಮಾತ್ರ ನಾನು ಹೇಳಿದೆ ಅಷ್ಟೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಅದನ್ನು ಹೇಗೆ ನಿರ್ವಹಿಸಬೇಕೆಂಬುದರ ಬಗ್ಗೆ ತಾವು ಸಲಹೆ ಕೊಡಬಹುದು. ಆದರೆ ಇದುವರೆವಿಗೂ ಕಳೆದ ಮೂವತ್ತೈದು ವರ್ಷಗಳಿಂದ ಯಾವುದೇ ಪ್ರಯತ್ನವನ್ನು ಈ ಕಡೆ ಮಾಡಿಲ್ಲ. ಖಾಸಗಿ ತಾಂತ್ರಿಕ ಕಾಲೇಜುಗಳು ಸ್ಥಾಪನೆಯಾಗಿ ಎಷ್ಟು ವರ್ಷವಾಯಿತು ? ಆ ಬಗ್ಗೆ ಚಿಂತನೆಯನ್ನು ಹಿಂದೆ ಎಂದೂ ಮಾಡಿಲ್ಲ. ಆದರೆ ನಾವು ಇದರ ಬಗ್ಗೆ ಬಹಿರಂಗವಾಗಿ ಚರ್ಚೆ ಮಾಡಿದ್ದೇವೆ ತುಂದಿರುವಂತಹ ಆರ್ಡಿನೆನ್ಸ್ ಬಗ್ಗೆ ದಿವಸಗಟ್ಟಲೆ ಚರ್ಚೆ ಮಾಡುತ್ತಿದ್ದೇವೆ.

ಒಬ್ಬ ಮಾನ್ಯ ಸದಸ್ಯರು.— ಹಿಂದೆಯೂ ಈ ಬಗ್ಗೆ ಆಲೋಚನೆ ಮಾಡಿದ್ದಾರೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಮಾನ್ಯ ವಿದ್ಯಾಮಂತ್ರಿಗಳು ಹೇಳಿದ ಹಾಗೆ ಈಗಾಗಲೇ ನಿರ್ಮಾಣವಾಗಿರುವಂತಹ ತಾಂತ್ರಿಕ ಶಾಲೆಗಳನ್ನು ನಾವು ಮುಚ್ಚುವುದಿಲ್ಲ. ಅವುಗಳನ್ನು ಉಳಿಸಿ ಬೆಳೆಸತಕ್ಕ ಕಾರ್ಯ ವಿಧಾನವನ್ನು ನಾವು ರೂಪಿಸುತ್ತಿದ್ದೇವೆ. ಅದನ್ನಾದರೂ ತಾವು ಯೋಚನೆ ಮಾಡಬೇಕು. ಈ 5 ವರ್ಷಗಳ ಅವಧಿಯಲ್ಲಿ ಆ ವಿಚಾರವನ್ನು ಮಾಡಬಿಟ್ಟರೆ ಪ್ರಶ್ನೆ ಬೇರೆ. ಅಂತಹವುಗಳನ್ನು ತೆಗೆದುಕೊಳ್ಳುವುದಕ್ಕೆ ಮತ್ತು ಅಂತಹವುಗಳನ್ನು ನಿಯಂತ್ರಣದಲ್ಲಿಡುವುದಕ್ಕೆ ಸಂಪೂರ್ಣವಾದ ಅಧಿಕಾರವನ್ನು ಇಟ್ಟುಕೊಂಡಿದ್ದೇವೆ. ಅದರ ಬಗ್ಗೆ ತಾವು ಸಲಹೆಗಳನ್ನು ಕೊಡಬಹುದು. ಈ ಒಂದು ವಿಚಾರವನ್ನು ತಿಳಿಸಿದ ಮೇಲೂ ಅವರು ಮುಟ್ಟಬೇಕಾದ ಸ್ಟ್ಯಾಂಡರ್ಡ್‌ನ್ನು ಮುಟ್ಟದಿದ್ದರೆ, ಅಂದರೆ ಅವರಿಗೆ ಕ್ಲಿನಿಕಲ್ ಫೆಸಿಲಿಟೀಸ್, ಅಲ್ಲಿ ಸರಿಯಾದಂತಹ ಸಿಬ್ಬಂದಿ ಇಲ್ಲದಿದ್ದರೆ, ಅಲ್ಲಿಂದ ಬರತಕ್ಕ ಗ್ರಾಜುಯೇಟ್ಸ್‌ಗಳಿಗೆ ರೆಕಗ್ನಿಷನ್ ಇಲ್ಲದಿದ್ದರೆ, ವಿಚಾರ ಬೇರೆ. ಅಂತರಾಷ್ಟ್ರೀಯ ಮಟ್ಟದಲ್ಲೂ ಈ ಖಾಸಗಿ ಕಾಲೇಜುಗಳಿಂದ ಬರತಕ್ಕಂತಹ ಗ್ರ್ಯಾಜುಯೇಟ್ಸ್‌ಗಳಿಗೆ ರೆಕಗ್ನಿಷನ್ ಇದೆ. ಅವು ಬೆಳೆದು ನಿಂತುಬಿಟ್ಟಿವೆ. ಈ 8 ಮೆಡಿಕಲ್ ಕಾಲೇಜುಗಳು ಹಾಗೂ 23 ಇಂಜಿನಿಯರಿಂಗ್ ಕಾಲೇಜುಗಳು ಸಂಪೂರ್ಣವಾಗಿ ಎಕ್ವಿಪ್‌ಮೆಂಟ್‌ನಿಂದ ಕೂಡಿದ್ದು ಆ ಒಂದು ಸ್ಟ್ಯಾಂಡರ್ಡ್‌ಗೆ ರೀಚ್ ಆಗಿದೆ. ಅಂತಹವುಗಳನ್ನು ರಾಷ್ಟ್ರೀಕರಣ ಮಾಡುವುದರಲ್ಲಿ ಅರ್ಥ ಇಲ್ಲ.

ಶ್ರೀ ಭೀಮಣ್ಣ ಖಂಡ್ರೆ.— ಖಾಸಗಿ ಸಂಸ್ಥೆಗಳವರು ತಮ್ಮ ಕಾಲ ಮೇಲೆ ತಾವು ನಿಂತುಕೊಂಡು, ಯಾವುದೇ ರೀತಿಯ ಕ್ಯಾಪಿಟೇಷನ್ ಫೀಯನ್ನು ತೆಗೆದುಕೊಳ್ಳದೆ ನಡೆಸಿಕೊಂಡು ಹೋಗುವಂತಹವುಗಳನ್ನು ರಾಷ್ಟ್ರೀಕರಣ ಮಾಡಬಾರದು ಅಂತ ಏನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ............

ಉಪಾಧ್ಯಕ್ಷರು. — ಅದು ಅವರ ಅಭಿಪ್ರಾಯ ಬಿಡಿ.

ಶ್ರೀ ಭೀಮಣ್ಣ ಖಂಡ್ರೆ.— ಆದರೆ ಆ ಒಂದು ಮಟ್ಟಕ್ಕೆ ಬಂದು ನಿಲ್ಲಬೇಕಾದರೆ, ಅಲ್ಲಿಯವರೆಗಾದರೂ ಆ ಖಾಸಗಿ ಸಂಸ್ಥೆಗಳವರು ನಡೆಸುತ್ತಿರತಕ್ಕಂತಹ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಫೀಯಿಂದ ಅವರಿಗೆ ಹಣ ಬರಬೇಕು. ಅಥವಾ ಬೇರೆ ಕಾಂಟ್ರಿಬ್ಯೂಷನ್‌ನಿಂದ ಅವರಿಗೆ ಹಣ ಬರಬೇಕು. ಇಲ್ಲ ಸರ್ಕಾರ ಕಾಂಟ್ರಿಬ್ಯೂಷನ್ ಅನ್ನು ಆ ಕಾಲೇಜುಗಳಿಗೆ ಕೊಡಬೇಕು. ಆದರೆ ಇತ್ತೀಚೆಗೆ ಅಂದರೆ ಹೋದ ವರ್ಷ, ಅದರ ಹಿಂದಿನ ವರ್ಷ, ಪ್ರಾರಂಭವಾದಂತಹ ಕಾಲೇಜುಗಳು ತಮ್ಮ ಕಾಲ ಮೇಲೆ ನಿಲ್ಲುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಅಂತಹವುಗಳ ಬಗ್ಗೆ ತಮ್ಮ ವಿಚಾರ ಏನು ಎಂಬುದರ ಬಗ್ಗೆ ಹೇಳಿ.

ಶ್ರೀ ಕೆ ಜಿ. ಮಹೇಶ್ವರಪ್ಪ. — ವಾರ್ಷಿಕ ಫೀ 5 ಸಾವಿರ ರೂಪಾಯಿಗಳೆಂದು ಖಾಸಗಿ ಸಂಸ್ಥೆಗಳಲ್ಲಿ ತೆಗೆದುಕೊಳ್ಳುತ್ತಾರೆ. ಸರ್ಕಾರಿ ಕಾಲೇಜುಗಳಲ್ಲಿ ಫೀಸು ಕಡಿಮೆಯಾಯಿತು ಎಂದು ಕೆಲವರ ಪ್ರಶ್ನೆ. ಮೆರಿಟ್ಸ್‌ನಲ್ಲಿರತಕ್ಕ ಅಭ್ಯರ್ಥಿಗಳು ಅಂದರೆ ಶೇಕಡ 80 ರಿಂದ 98ರ ವರೆಗೆ ಅಂಕ ಪಡೆದಂತಹವರಿಗೆ, ಸರ್ಕಾರಿ ಕಾಲೇಜುಗಳಲ್ಲೇ ಸ್ಥಳಾವಕಾಶ ಸಿಕ್ಕುತ್ತದೆ ಅದರಿಂದ ಅದಕ್ಕಿಂತ ಕಡಿಮೆ ತೆಗೆದುಕೊಂಡವರಿಗೆ, ಅಂದರೆ 90 ಪರ್ಸೆಂಟ್‌ಗಿಂತ ಕೆಳಗಡೆ ಅಂಕ ಪಡೆದವರಿಗೆ ಅಂತಹವರು 50 ಸಾವಿರ, 60 ಸಾವಿರ ಹಣವನ್ನು ಕ್ಯಾಪಿಟೇಷನ್ ಫೀಯಾಗಿ ಮೊದಲು ಕೊಡಬೇಕಾಗಿತ್ತು. ಸರ್ಕಾರಿ ಕಾಲೇಜುಗಳಲ್ಲಿ ಸೀಟು 95 ಪರ್ಸೆಂಟೇಜಿಗೆ ಬಂದು ನಿಂತುಕೊಳ್ಳುತ್ತದೆ ಅಂತ ತಿಳಿದುಕೊಳ್ಳೋಣ. ಅವರು ಕರ್ನಾಟಕದ ವಿದ್ಯಾರ್ಥಿಗಳಾಗಿದ್ದರೂ ಅವರು ಎಲ್ಲಿಯವರೆಗೆ ಹೋಗಬೇಕಾಗಿತ್ತು ಅಂದರೆ, 65 ಸಾವಿರ, 70 ಸಾವಿರ 1 ಲಕ್ಷ, ಕೊನೆಗೆ 2 ಲಕ್ಷ ರೂಪಾಯಿಗಳನ್ನು ಕ್ಯಾಪಿಟೇಷನ್ ಫೀಯಾಗಿ, ಮೇಲ್ಗಡೆ, ಒಳಗಡೆ ಕೊಟ್ಟು ಈ ಹಿಂದೆ ಸೀಟುಗಳನ್ನು ಪಡೆದುಕೊಳ್ಳುತ್ತಿದ್ದರು. ಅವರೆಲ್ಲ ಡಾಕ್ಟರುಗಳು ಆಗುತ್ತಾರೆ. ಇನ್ನು ಮುಂದೆ ಅವರಿಗೆ ಇದೊಂದು ಉಚಿತವಾದ ಅವಕಾಶ. ಅವರಿಗೆ ಉಚಿತವಾಗಿ ಖಾಸಗೀ ಕಾಲೇಜುಗಳಲ್ಲಿ ಸೀಟು ಸಿಗುತ್ತದೆ. ಇದು ಸಂಪೂರ್ಣವಾಗಿ ಆಲೋಚನೆ ಮಾಡಿ ಇಟ್ಟಂತಹ ಹೆಜ್ಜೆ ಎಂದು ತಿಳಿದುಕೊಳ್ಳುವುದಕ್ಕೆ ತಯಾರಿಲ್ಲವೆಂದರೆ ಹೇಗೆ ? 80 ರಿಂದ 90 ಪರ್ಸೆಂಟ್ ಇರುವವರಿಗೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟು ಸಿಗುತ್ತಿರಲಿಲ್ಲ. ಖಾಸಗೀ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಫೀ ಕೊಡಲೇ ಬೇಕಾಗಿತ್ತು. ಹಿಂದೆ ಈ ಬಗ್ಗೆ ಯಾರಾದರೂ ಚಕಾರ ಎತ್ತುತ್ತಿದ್ದರೆ ? ರಂಗನಾಥ್‌ರವರು ಖಾಸಗೀ ಕಾಲೇಜುಗಳನ್ನು ನೋಡಿದ್ದಾರೆ. ಹಿಂದೆ ಅಲ್ಪಸಂಖ್ಯಾತರಿಗಾಗಲೀ, ಹಿಂದುಳಿದವರಿಗಾಗಲೀ ಮೆರಿಟ್ ಮೇಲೆ ಸೀಟು ಸಿಗುತ್ತಿರಲಿಲ್ಲ. ಈಗ ಕೆಲವು ಭಾಗವಾದರೂ ಮೆರಿಟ್ ಇರುವ ವಿದ್ಯಾರ್ಥಿಗಳಿಗೆ ಸೀಟು ಸಿಗತಕ್ಕ ವ್ಯವಸ್ಥೆ ಆಗಿದೆ.

ಡಾ. ವಿ. ಎಸ್. ಆಚಾರ್ಯ.— ಹಿಂದೆ 7 ವರ್ಷದ ಸ್ಕೀಂ ಮಾಡಿದಾಗ ಮೆರಿಟ್ ಇದ್ದ ವಿದ್ಯಾರ್ಥಿಗಳಿಗೆ ಎಂದು ಸೀಟು ಕೊಟ್ಟಿದ್ದರು.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಅಡ್ಮಿನಿಸ್ಟ್ರೇಟೀವ್ ಆರ್ಡರ್‌ನಿಂದ ಮಾಡಿದ್ದರೇ ಹೊರತು ಪೂರ್ಣ ಮನಸ್ಸಿನಿಂದ ಮಾಡಿರಲಿಲ್ಲ. ಮೇಲಿನಿಂದ ಆದೇಶ ಬಂದು ಮಾಡಿದ್ದಾರೆಯೋ ಹೊರತು ರಾಜ್ಯ ಸರ್ಕಾರವೇ ಇನಿಷಿಯೇಟ್ ತೆಗೆದುಕೊಂಡು ಮಾಡಿದ್ದಲ್ಲ, ಈ ವಿಚಾರ ಇಲ್ಲಿರತಕ್ಕ ಹಿರಿಯ ಸದಸ್ಯರಿಗೆ ಗೊತ್ತಿದೆ. ಕೇಂದ್ರದಿಂದ ಶ್ರೀಮತಿ ಇಂದಿರಾಗಾಂಧಿಯವರು ಇವರಿಗೆ ಆದೇಶ ಕಳುಹಿಸಿದ ಮೇಲೆ ಈ ಒಂದು ಕೆಲಸವನ್ನು ಮಾಡಿದರು. ಅದು ಎಂತಹದ್ದು ಎಂದರೆ, ಎಕ್ಸಿಕ್ಯೂಟೀವ್ ಆರ್ಡರ್‌ನಿಂದ ಈ ರೀತಿ ಕ್ಯಾಪಿಟೇಷನ್ ಫೀ ರೆಗ್ಯುಲೇಟ್ ಮಾಡಬೇಕೆಂದು ಪ್ರಯತ್ನ ಮಾಡಿದ್ದನ್ನು ಹೈ ಕೋರ್ಟ್ ಈಗ..................

ಡಾ. ವಿ. ಎಸ್. ಆಚಾರ್ಯ.— ಈ ಬಗ್ಗೆ ನಿನ್ನೆಯಿಂದ ಚರ್ಚಿಸುತ್ತಿದ್ದೇವೆ. ನಾವು ಕಾಯಿದೆ ಮಾಡಿ ರೂಲ್ಸ್ ಪ್ರಕಾರ ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. 7 ವರ್ಷ ಇದ್ದುದನ್ನು 5 ವರ್ಷ ಎಂದು ಮಾಡಿರುವುದನ್ನು ಒಪ್ಪಿಕೊಳ್ಳೋಣ. 1982ನೇ ಜೂನ್‌ಗೂ ಮತ್ತು 1983ನೇ ಜೂನ್‌ಗೂ ಅಂದರೆ ಸರ್ಕಾರದ ಬದಲಾದ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಬಂದ ಮೇಲೆ, ವಿದ್ಯಾರ್ಥಿಗಳು ಮೆಡಿಕಲ್ ಕಾಲೇಜಿಗೆ ಸೇರತಕ್ಕ ಪರಿಸ್ಥಿತಿ ಹೇಗಿತ್ತು, ಶೇಕಡ 92ರಷ್ಟು ಅಂಕಗಳನ್ನು ಪಡೆದವನ ಪರಿಸ್ಥಿತಿ 1982ರಲ್ಲಿ ಹೇಗಿತ್ತು ಮತ್ತು 1983ರಲ್ಲಿ ಜನತಾ ಸರ್ಕಾರ ಬಂದ ಮೇಲೆ ಏನಾಗಿದೆ ಎಂಬುದರ ಬಗ್ಗೆ ಮಾತನಾಡಿದರೆ ಹೆಚ್ಚು ಉಪಯೋಗವಾಗುತ್ತದೆ. 1982ರಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ರಾಜ್ಯದ 7 ಕಾಲೇಜುಗಳ ಪೈಕಿ 6 ಕಾಲೇಜುಗಳಲ್ಲಿ 17 ರಿಂದ 25 ಸಾವಿರ ರೂಪಾಯಿ 5 ವರ್ಷದ ಟ್ಯೂಷನ್ ಫೀ ಇತ್ತು. ಮಂಗಳೂರಿನಲ್ಲಿ ಟ್ಯೂಷನ್ 27 ಸಾವಿರ ರೂಪಾಯಿ ಇದೆ ಎಂಬ ಪ್ರಶ್ನೆ ಬಂದು ವಿದ್ಯಾರ್ಥಿಗಳಿಗೆ ಮತ್ತು ಮ್ಯಾನೇಜ್‌ಮೆಂಟಿಗೆ ವಾದವಿವಾದ ನಡೆದಾಗ ಮಾನ್ಯ ಸಚಿವರಾದ ಸಿಂಧ್ಯ ಅವರು ಹೋಗಿ ಅದನ್ನು 15 ಸಾವಿರ ರೂಪಾಯಿಗಳಿಗೆ ಇಳಿಸಿದರು ಮತ್ತೆ ಈ ವರ್ಷ ಅಂದರೆ 1983ನೇ ಜೂನ್‌ನಲ್ಲಿ ಅದನ್ನು 17 ಸಾವಿರಕ್ಕೆ ಮತ್ತು 6 ಕಾಲೇಜುಗಳಲ್ಲಿ 25 ಸಾವಿರಕ್ಕೆ ಏರಿಸಿದ್ದಾರೆ. ಆದ್ದರಿಂದ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ.

ಉಪಾಧ್ಯಕ್ಷರು.— ಆ ಬಗ್ಗೆ ವಿದ್ಯಾಮಂತ್ರಿಗಳು ಹೇಳುತ್ತಾರೆ. ಅವರ ಅಭಿಪ್ರಾಯ ಹೇಳುವುದಕ್ಕೆ ಬಿಡಿ.

ಶ್ರೀ ಕೆ. ಜಿ ಮಹೇಶ್ವರಪ್ಪ.— ಕ್ಯಾಪಿಟೇಷನ್ ಶುಲ್ಕ ಇಲ್ಲದೆ ಫೀಸಿನಲ್ಲಿ ಜಾಸ್ತಿಯಾಗಿದೆ.

ಶ್ರೀ ಬಿ. ರಾಚಯ್ಯ.— ಯಾರು ಮೆರಿಟ್‌ನಲ್ಲಿ ಬರುವುದಿಲ್ಲವೋ ಅವರಿಗೆ ಕ್ಯಾಷ್ ಡಿಪಾಸಿಟ್ ಸೀಟ್ಸ್ ಎಂದು ಕರ್ನಾಟಕದವರಿಂದ 50 ಸಾವಿರ ರೂಪಾಯಿಗಳ ಡಿಪಾಸಿಟ್ ತೆಗೆದುಕೊಂಡು ಸೀಟು ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ. ಇದಕ್ಕೆ ಮೊದಲು ಕ್ಯಾಪಿಟೇಷನ್ ಫೀ ಕೊಟ್ಟೇ ಸೇರಬೇಕಾಗಿತ್ತು.

ಡಾ. ವಿ ಎಸ್. ಆಚಾರ್ಯ.— ಕ್ಯಾಪಿಟೇಷನ್ ಫೀ ಇಲ್ಲದೆಯೂ ಸೀಟು ಸಿಗುತ್ತಿತ್ತು. ಮೆರಿಟ್ ಮೇಲೆ ಆಯ್ಕೆ ಮಾಡಿದವರಿಗೆ..... ....

ಶ್ರೀ ಕೆ. ಜಿ. ಮಹೇಶ್ವರಪ್ಪ.— ನಾವು ಕೆಲವು ತಿದ್ದುಪಡಿಗಳನ್ನು ಕಳುಹಿಸಿದ್ದೇವೆ. ಸೆಕ್ಷನ್ 3ರ ಕೆಳಗಿರತಕ್ಕ ಪ್ರಾವಿಸೋ ಅನ್ನು ತೆಗೆಯಬೇಕೆಂದು ಸೂಚಿಸಿದ್ದೇವೆ. ಅದನ್ನು ತೆಗೆದು ಹಾಕುವುದರಿಂದ ಸೆಕ್ಷನ್ ಮೂರು ಮಾತ್ರ ಉಳಿಯುತ್ತದೆ. ಅದರಿಂದ ಎಲ್ಲ ವರ್ಗದ ಜನರಿಗೆ ನ್ಯಾಯ ದೊರಕುತ್ತದೆ. ಈ ಪ್ರಾವಿಸೋ ಪ್ರಕಾರ 5 ವರ್ಷದವರೆಗೆ ಕ್ಯಾಪಿಟೇಷನ್ ಫೀ ಇಟ್ಟುಕೊಳ್ಳುತ್ತೇವೆಂದು ಅಲ್ಲ. ಐದು ವರ್ಷದವರೆಗೆ ಪ್ರತಿ ವರ್ಷ ಎಷ್ಟು ಕ್ಯಾಪಿಟೇಷನ್ ಫೀ ತೆಗೆದುಕೊಳ್ಳುತ್ತೇವೆಂಬುದನ್ನು ಯೋಚನೆ ಮಾಡಬೇಕು ಅನುಕೂಲವಾದರೆ ಮುಂದಿನ ವರ್ಷವೇ ಎಲ್ಲವನ್ನೂ ರದ್ದು ಮಾಡುವುದಕ್ಕೆ ಅವಕಾಶ ಇದೆ ಬೇಕಾದರೆ ಆ ಪ್ರಾವಿಸೋ ಅನ್ನು ಓದುತ್ತೇನೆ ಕೇಳಿ.

'Provided.......... .... to receive such capitation fee or cash deposits in such manner, to such extent and for such period as the Government may, by order, specify, so however that such period shall not in any case extend beyond five years from such date' ನೀವೆಲ್ಲ ಸಹಕರಿಸುವುದಾದರೆ ಎರಡೇ ವರ್ಷದಲ್ಲಿ ತೆಗೆದುಹಾಕೋಣ.

ಡಾ॥ ವಿ. ಎಸ್. ಆಚಾರ್ಯ.— ಈಗಲೇ ಸಹಕರಿಸುತ್ತಾರೆ.

ಶ್ರೀ ಕೆ ಜೆ. ಮಹೇಶ್ವರಪ್ಪ.— ಎಲ್ಲಿ ಸಹಕರಿಸುತ್ತಾರೆ ? ಎರಡು ವರ್ಷ ಆದಮೇಲೆ ಮೂರು ಆರ್ಡಿನೆನ್ಸ್ ಬರಬೇಕು. ಅದನ್ನು ಈಗಲೇ ಕೈಬಿಟ್ಟರೆ ಗತಿ ಏನು ? ಹಿಂದೆ ಇದ್ದಂತೆ ಲೂಟಿ ಹೊಡೆಯುವುದಕ್ಕೆ ಅವಕಾಶ ಕೊಡುವುದಿದ್ದರೆ ಆ ನಿಲುವು ತೆಗೆದುಕೊಳ್ಳೋಣ. ಇನ್ನು 20 ಪರ್ಸೆಂಟ್ ಎಂದು ಇದೆಯಲ್ಲ ಅದಕ್ಕಿಂತ ಜಾಸ್ತಿ ಕಿತ್ತುಕೊಳ್ಳಿ ಎಂದು ಹೇಳಿದರೆ ಒಪ್ಪುತ್ತೀರಾ ? ವಿದ್ಯಾ

ಮಂತ್ರಿಗಳು ಸಮತೋಲನ ನಿಯಮ ಎಂದು ಹೇಳುತ್ತಾರೆ. ಅದಕ್ಕೆ ಒಪ್ಪುತ್ತೀರಾ ? We are abolishing it to that extent. You must compliment the Government....... ....ದೇಶಕ್ಕೇನೋ ಹೇಳಿದ್ದೀರಿ ಅದರಂತೆ ನಡೆದುಕೊಳ್ಳಿ ಎಂದರೆ ಏತಕ್ಕೆ ಭಯಪಡುತ್ತೀರಿ ? ಆದ್ದರಿಂದ ಇವತ್ತು ಹಂಚಿಕೆ ವಿಚಾರದಲ್ಲಿ ಆರ್ಬಿಟ್ರರಿಯಿಂದ ನಡೆಯುವುದಕ್ಕೆ ಸಾಧ್ಯವಿಲ್ಲ. ಅದರಲ್ಲಿ ಸರ್ಕಾರದ ಮತ್ತು ವಿಶ್ವವಿದ್ಯಾನಿಲಯದ ಸಾಮಿನಿ ಇರುತ್ತಾರೆ. ಕ್ಯಾಪಿಟೇಷನ್ ಫೀ ಮತ್ತು ಡಿಪಾಸಿಟ್ ತೆಗೆದುಕೊಳ್ಳುವುದರಲ್ಲಿ ಅವ್ಯವಹಾರ ನಡೆದರೆ ಎಂತಹ ಬಿಗಿಯಾದ ನಿಯಂತ್ರಣ ಮಾಡಿದ್ದೇವೆಂಬುದನ್ನು ಆಲೋಚನೆ ಮಾಡಬೇಕು. ನಾವು ಮಾಡಿರುವುದಕ್ಕಿಂತ ಬಿಗಿಯಾಗಿ ಮಾಡುವುದಾದರೆ ಒಪ್ಪುತ್ತೇನೆ. ಆಡಳಿತ ಅಥವಾ ಡಿಪಾಸಿಟ್ ವಿಚಾರದಲ್ಲಿ ಏನಾದರೂ ಸಲಹೆ ಕೊಡುವುದಾದರೆ ಒಪ್ಪುತ್ತೇನೆ. ಅದನ್ನು ಸ್ವಲ್ಪ ಸಡಿಲಪಡಿಸತಕ್ಕದರ ಬಗ್ಗೆ ತಿದ್ದುಪಡಿ ಕೊಟ್ಟಿದ್ದರು. ಅನುಮತಿ ಇಲ್ಲದೆ ಇನ್ಸ್‌ಪೆಕ್ಷನ್ ಮಾಡುವುದನ್ನು ಕೈಬಿಟ್ಟು ಪೂರ್ವಭಾವಿಯಾಗಿ ಅನುಮತಿ ಪಡೆದು ಇನ್ಸ್‌ಪೆಕ್ಷನ್‌ಗೆ ಹೋಗಬೇಕೆಂದು ಹೇಳಿದ್ದರು. ಟ್ಯೂಷನ್ ಫೀ ಜಾಸ್ತಿಯಾಗಿದೆ ಎಂದು ಹೇಳಿದ್ದರು. ಅದನ್ನು ಒಪ್ಪಿಕೊಳ್ಳುತ್ತೇವೆ. ಡಿಪಾಸಿಟ್ ಸ್ಕೀಂ ಏನಿದೆ ಅದನ್ನು ಕೈಬಿಡಬೇಕೆಂದು ಹೇಳಿದ್ದಾರೆ. ಎಲ್ಲವನ್ನು ಸಮಗ್ರವಾಗಿ ಆಲೋಚನೆ ಮಾಡಿದರೆ ಇದಕ್ಕಿಂತ ಉತ್ತಮವಾದ ಕ್ರಮವನ್ನು ತರುವುದು ಕಷ್ಟವೆಂದು ಹೇಳುತ್ತೇನೆ. ಅಡ್ಮಿನಿಸ್ಟ್ರೇಟೀವ್ ಆರ್ಡರ್ ಮಾಡಿ ಅಥವಾ ಎಕ್ಸಿಕ್ಯೂಟೀವ್ ಆರ್ಡರ್ಸ್ ಮಾಡಿ ಏನು ಬೇಕಾದರೂ ಮಾಡಬಹುದು. ಹಿಂದೆ ನನಗೆ ಗೊತ್ತಿದ್ದ ಹಾಗೆ 5 ವರ್ಷದ ನಿಯಂತ್ರಣ ಆಜ್ಞೆ ಮಾಡಿದಾಗ ಹೈಕೋರ್ಟಿಗೆ ಹೋಗಿ ಅಡ್ವೊಕೇಟ್ ಜನರಲ್‌ರೊಡನೆಶಾಮೀಲಾಗಿ ಸ್ಟೇ ಆರ್ಡರ್ ಮಾಡಿಸಿದರು. ಆ ಬಗ್ಗೆ ಹೈಕೋರ್ಟಿನಲ್ಲಿ ಕೇಸು ನಡೆಯುತ್ತಿದ್ದದನ್ನು ನಾನು ನೋಡಿದ್ದೇನೆ. ಆ ಆರ್ಡರನ್ನು ವೆಕೇಟ್ ಮಾಡಿಸಿದ್ದು ಜನತಾ ಸರ್ಕಾರ ಬಂದಮೇಲೆ ಅಂದರೆ 1983ನೇ ಏಪ್ರಿಲ್–ಮೇ ತಿಂಗಳಲ್ಲಿ. ಹೈಕೋರ್ಟಿನಲ್ಲಿ 4–5 ವರ್ಷ ರಿಟ್ ಪಿಟಿಷನ್ ಪೆಂಡಿಂಗ್ ಇರುತ್ತದೆ. ಅದರ ಮೇಲೆ ಸುಪ್ರೀಂ ಕೋರ್ಟಿಗೆ ಬೇರೆಯವರನ್ನು ಕಳುಹಿಸಿ ಸುಪ್ರೀಂ ಕೋರ್ಟಿನೊಡನೆ ಶಾಮೀಲಾಗಿ ಅದನ್ನು ನಾಯಿಕೊಡೆಗಳಂತೆ ಬೆಳೆಸಿಕೊಂಡು ಬಂದಿದ್ದರು. ಅದನ್ನು ಸುಧಾರಿಸುವ ಪ್ರಯತ್ನವನ್ನು ಮಾಡುವುದಕ್ಕೆ ಹೋಗುವಾಗ ಅದಕ್ಕೆ ವಿರೋಧ ಪಕ್ಷದವರು ಸಹಕಾರ ಕೊಡದಿದ್ದರೆ, ವಿರೋಧ ಮಾಡಿದರೆ ನಾವು ಏನು ಹೇಳಬೇಕು? ನಿಜವಾಗಿಯೂ ವಿದ್ಯಾ ಸಂಸ್ಥೆಗಳ ಸಚ್ಚೀಕರಣಕ್ಕೆ ಅಥವಾ ಉನ್ನತ ಮಟ್ಟದಲ್ಲಿ ಖಾಸಗಿ ತಾಂತ್ರಿಕ ಕಾಲೇಜುಗಳು ನಡೆಯುವುದಕ್ಕೆ ನಾವು ಮಾಡಿರತಕ್ಕ ಸಾಧನೆಯನ್ನು ಅವರು ಮಾಡಿಲ್ಲ ಎಂದು ಹೇಳುತ್ತೇನೆ. ಖಾಸಗಿ ಇಂಜನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಲ್ಲದೆ ಬೇರೆ ಬೇರೆ ಡಿಪ್ಲೊಮಾ, ಬಿ.ಎಡ್., ಮುಂತಾದ ಕಾಲೇಜುಗಳನ್ನೂ ಈ ಕಾನೂನಿನ ಕೆಳಗೆ ತರುವುದಕ್ಕೆ ಅವಕಾಶ ಇದೆ ಕ್ಯಾಪಿಟೇಷನ್ ಶುಲ್ಕವನ್ನು ತೆಗೆದುಕೊಳ್ಳುತ್ತಾ ಸಾಮಾಜಿಕ ಅನ್ಯಾಯವನ್ನು ಮಾಡುವ ಇತರ ಕಾಲೇಜುಗಳನ್ನೂ ಈ ಕಾನೂನಿನ ಕೆಳಗೆ ತಂದು ನಿಯಂತ್ರಿಸುವುದಕ್ಕೆ ಅವಕಾಶವಿದೆ. ಅದನ್ನು ಈ ಮಸೂದೆಯಲ್ಲಿ ಅಳವಡಿಸಲಾಗಿದೆ. ಆ ಭಾಗವನ್ನು ನಾನು ಓದುತ್ತೇನೆ.

"2(c) "educational institution" means any institution by whatever name called whether managed by Government, privated body, local authority, trust, University or any other person carrying on the activity of imparting education in medicine or engineering leading to a degree conferred by an University established under the Karnataka and State Universities Act, 1976 and any other educational institution, or class or classes of such institution, as the Government may, by notification specify".

So, if the public pressure comes we may notify There is a provision to control the educational institutions under the Act. ಈ ಮೊದಲು ಈ ಕಾನೂನು ಇರಲಿಲ್ಲ. ಅದನ್ನು ತಾವು ಗಮನಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೈನಾರಿಟಿ ಇನ್‌ಸ್ಟಿಟ್ಯೂಷನ್‌ಗಳ ಬಗ್ಗೆಯೂ ಸೆಕ್ಷನ್ 10ರಲ್ಲಿ ಕೊಟ್ಟಿದೆ. ಆದ್ದರಿಂದ ಇದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಕ್ಕೆ ಅವಕಾಶವಿಲ್ಲ. ಮಸೂದೆಯಲ್ಲಿ ಇದರ ಬಗ್ಗೆ ಏನು ಹೇಳಿದೆ ಯೆಂಬುದನ್ನು ಇಲ್ಲಿ ಓದುತ್ತೇನೆ.

"10. Nothing in this Act or the rules or orders made thereunder shall apply to any minority educational institution to the extent to which they are inconsistent with the rights guaranteed under Act 30 of the Constitution of India',.

So there is a restriction. It is not a clause giving scope to all minority institutions to run their educational institutions as they like. A reasonable restriction is there. ಆದ್ದರಿಂದ ಈ ಸಂಸ್ಥೆಗಳನ್ನು ನಿಯಂತ್ರಿಸುವುದಕ್ಕೆ ಸಾಕಷ್ಟು ಅವಕಾಶವಿದೆ ಎಂದು ಹೇಳುತ್ತಾ ಈ ವಿಚಾರದಲ್ಲಿ ವಿರೋಧಪಕ್ಷದವರು ಸಲಹೆ ಕೊಡುವುದಾದರೆ ಸರ್ಕಾರ ಅದನ್ನು ಪರಿಶೀಲಿಸಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ. ಇವತ್ತಿನ ಪರಿಸ್ಥಿತಿಯಲ್ಲಿ ಈ ಕಾನೂನಿನ ಹೊರತು ಬೇರೆ ಯಾವುದೇ ಕ್ರಮ ತೆಗೆದು ಕೊಂಡರೂ ಈ ಸಂಸ್ಥೆಗಳಿಗೆ ಧಕ್ಕೆ ಬರುವುದಲ್ಲದೆ ಅಲ್ಲಿರತಕ್ಕ ವಿದ್ಯಾರ್ಥಿಗಳಿಗೆ ವ್ಯಾಸಂಗಕ್ಕೆ ಧಕ್ಕೆ ಬಂದು ತಾಂತ್ರಿಕ ಶಿಕ್ಷಣಕ್ಕೆ ತೊಂದರೆ ಕೊಟ್ಟಂತಾಗುತ್ತದೆ. ಇದನ್ನು ಗಮನಿಸಿ ನಿರ್ಣಯ ತೆಗೆದುಕೊಳ್ಳ ಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮೈಕೇಲ್ ಫರ್ನಾಂಡೀಸ್ (ಭಾರತೀನಗರ).— ಮಾನ್ಯ ಅಧ್ಯಕ್ಷರೆ, ಮಾನ್ಯ ವಿದ್ಯಾ ಮಂತ್ರಿಗಳು ಕ್ಯಾಪಿಟೇಷನ್ ಶುಲ್ಕ ರದ್ದು ಮಾಡುವ ಬಗ್ಗೆ ಬಿಲ್ ಏನು ತಂದಿದ್ದಾರೆ ಇದರ ಬಗ್ಗೆ ಮೊನ್ನೆ ನಡೆದ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡದಿರುವುದು ಶೋಚನೀಯವಾದುದು. ಏತಕ್ಕೆಂದರೆ ವಿಶೇಷವಾದ ಹೆಜ್ಜೆಯನ್ನು ಈ ಹೊಸ ಸರ್ಕಾರ ತೆಗೆದುಕೊಂಡಿದೆ. ಚುನಾವಣಾ ಪ್ರಣಾಳಿಕೆ ಯಲ್ಲಿ ಹೇಳಿರುವಂತೆ ಇದನ್ನು ಈ ಸರ್ಕಾರ ಮಾಡಿದೆ. ಕೆಲವು ದಶಕಗಳ ಹಿಂದೆ ಇಂಥ ವಿದ್ಯಾಭ್ಯಾಸ ವನ್ನು ಕೊಡುವ ಸಂಸ್ಥೆಗಳು ಸ್ಥಾಪನೆಯಾಗುವಾಗ ಜನರಿಗೆ ಸೇವೆ ಸಲ್ಲಿಸುವ ಮುಖ್ಯ ಉದ್ದೇಶವನ್ನು ಅವುಗಳು ಇಟ್ಟುಕೊಂಡಿದ್ದವು. ಆದರೆ ಇತ್ತೀಚೆಗೆ ಕೆಲವು ವರ್ಷಗಳಲ್ಲಿ ಇಂಥ ಸಂಸ್ಥೆಗಳು ವ್ಯಾಪಾರದ ರೀತಿಯಲ್ಲಿ ವ್ಯವಹಾರ ನಡೆಸುತ್ತಿವೆ. ವಿದ್ಯೆಯನ್ನು ಕೊಡುವ ದೃಷ್ಟಿಯಿಂದ ಮುಂದೆ ಬಂದರೂ ಹೆಚ್ಚು ಆದಾಯ ಬರುವ ರೀತಿಯಲ್ಲಿ ವ್ಯವಹಾರ ಮಾಡುವುದು ರೂಢಿಯಾಗಿದೆ. ಹೆಚ್ಚಿನ ಮಟ್ಟದ ವಿದ್ಯಾಭ್ಯಾಸ ಪಡೆದುಕೊಳ್ಳಲು ಸೀಟು ಸಿಗುವುದಕ್ಕೆ ಇರುವ ಕಷ್ಟವನ್ನು ದುರುಪಯೋಗಿಸಿ ಲಾಭ ಪಡೆಯಲು ಹೊರಟಿದ್ದಾರೆ. ಹೀಗೆ ದೊಡ್ಡ ಭೂತ ಬೆಳೆದಿದ್ದು ಈ ಸರ್ಕಾರ ಇದನ್ನು ಹತೋಟಿಗೆ ತರಬೇಕಾಗಿದೆ. ಒಂದೇ ಸಾರಿ ಇದನ್ನು ಮಾಡುವುದಕ್ಕಾಗುವುದಿಲ್ಲ ಎಂಬುದು ಎಲ್ಲರೂ ಒಪ್ಪುವ ಮಾತು. ಈ ಸದನ ಒಪ್ಪಿಕೊಳ್ಳುವುದಾದರೆ ಮತ್ತು ಮುಖ್ಯವಾಗಿ ವಿರೋಧಪಕ್ಷದವರು ಒಪ್ಪಿ ಕೊಳ್ಳುವುದಾದರೆ ಸರ್ಕಾರಕ್ಕೆ ಬೇಕಾಗಿರುವ 19ಕೋಟಿ ರೂಪಾಯಿಗಳನ್ನು ಜನರ ಮೇಲೆ ತೆರಿಗೆ ಹಾಕಿ ಪಡೆಯುವುದಕ್ಕೆ ಅವಕಾಶ ಮಾಡಿಕೊಟ್ಟರೆ ಈ ವರ್ಷವೇ ಒಂದೇ ಹಂತದಲ್ಲಿ ಇದನ್ನು ರದ್ದು ಮಾಡ ಬಹುದು ಆದರೆ ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಕ್ಯಾಪಿಟೇಷನ್ ಶುಲ್ಕವನ್ನು ಪೂರ್ಣ ವಾಗಿ ರದ್ದು ಮಾಡಿ ಈ ಸಂಸ್ಥೆಗಳನ್ನು ನಡೆಸುವುದಕ್ಕೆ ಬೇಕಾದ 19 ಕೋಟಿ ರೂಪಾಯಿಗಳನ್ನು ಜನರು ಸರ್ಕಾರಕ್ಕೆ ಸಲ್ಲಿಸುವುದಾದರೆ...............

ಶ್ರೀ ಕೆ.ಹೆಚ್. ರಂಗನಾಥ್.— ಈ ಮಾತು ತಮ್ಮಿಂದ ಬರಬೇಕೆ?

ಶ್ರೀ ಮೈಕೇಲ್ ಫರ್ನಾಂಡೀಸ್.— ತಾವು ಹೇಳುವುದನ್ನು ತಪ್ಪು ತಿಳಿದುಕೊಂಡಿದ್ದೀರಿ. ನಾವು ಯಾರೂ ಇದನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳುತ್ತಾ ಇದ್ದೇನೆ. ಏತಕ್ಕೆ ಒಂದೇ ಸಲ ರದ್ದು ಮಾಡುವುದಕ್ಕಾಗುವುದಿಲ್ಲ ಎಂಬ ಬಗ್ಗೆ ನಾನು ಹೇಳುತ್ತಿದ್ದೇನೆ. 19ಕೋಟಿ ರೂಪಾಯಿಗಳ ಹಣವನ್ನು ಬೇರೆ ರೀತಿಯಿಂದ ಸಂಪಾದಿಸುವುದಕ್ಕಾಗದಿರುವುದರಿಂದ ಇದನ್ನು ಮಾಡುವುದಕ್ಕಾಗುವು ದಿಲ್ಲ. ಒಂದು ವೇಳೆ ತೆರಿಗೆ ಮೂಲಕ ಸಂಪಾದಿಸುವುದಕ್ಕೆ ಹೋದರೆ ಅದನ್ನು ನಾವೂ ಒಪ್ಪುವುದಿಲ್ಲ ನೀವೂ ಒಪ್ಪುವುದಿಲ್ಲ. ಅಥವಾ ಕೇಂದ್ರ ಸರ್ಕಾರದವರು ಈ ಹಣ ಕೊಟ್ಟರೂ ಮಾಡಬಹುದು. ಆದರೆ ಅವರು ಕೊಡುವುದಿಲ್ಲ. ಹೀಗಿರುವುದರಿಂದ ಹಂತ ಹಂತವಾಗಿ ಈ ಭೂತವನ್ನು ಸಾಯಿಸಬೇಕಾಗಿದೆ. ಒಂದೇ ಸಾರಿ ರದ್ದು ಮಾಡುತ್ತೇವೆ ಎಂದು ಹೇಳಿ 5ವರ್ಷ ಏತಕ್ಕೆ ಸಮಯ ತೆಗೆದುಕೊಳ್ಳುತ್ತಿದ್ದೀರಿ ಎಂದು ವಿರೋಧ ಪಕ್ಷದವರು ಸರ್ಕಾರದ ಮೇಲೆ ಆಪಾದನೆ ಹೊರಿಸಬಾರದು ಎಂದು ಹೇಳುವುದಕ್ಕೋಸ್ಕರ ಇದನ್ನು ಹೇಳುತ್ತಿದ್ದೇನೆ. ಈ ಸಂಸ್ಥೆಗಳನ್ನು ನಡೆಸುವುದಕ್ಕೆ ಕಷ್ಟವಿದೆ ಎಂಬುದನ್ನು ಒಪ್ಪಿ ಕೊಳ್ಳೋಣ. ವಿದ್ಯಾಸಂಸ್ಥೆಗಳಾಗಲೀ, ಅಥವಾ ಬೇರೆ ಯಾವುದೇ ಸೇವಾ ಸಂಸ್ಥೆಗಳಾಗಲೀ ಅವುಗಳಿಗೆ ಕಷ್ಟಗಳಿರುತ್ತವೆ. ಆರ್ಥಿಕ ಮತ್ತು ಬೇರೆ ಬೇರೆ ರೀತಿಯ ಕಷ್ಟಗಳಿರುತ್ತವೆ. ಆದರೆ ಕಷ್ಟದ ಹೆಸರಿನಲ್ಲಿ ದುರ್ಲಾಭ ಪಡೆಯುವ ಪ್ರವೃತ್ತಿ ಇರಬಾರದು. ಈಗ ದುರ್ಲಾಭ ಪಡೆಯುವ ಪ್ರವೃತ್ತಿ ಬೆಳೆದು ಬಂದಿರುವುದರಿಂದ ಇದನ್ನು ಹೋಗಲಾಡಿಸುವುದು ವಿಶೇಷವಾದ ಕೆಲಸ. ಇಂಥ ಕೆಲಸವನ್ನು ಜನತಾ ಸರ್ಕಾರ ಮಾಡುತ್ತಿರುವಾಗ ಇದಕ್ಕೆ ಸಹಾಯ ಮಾಡಬೇಕೇ ವಿನಹ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಡಿ ಎಂದು ಹೇಳುವುದು ಅಥವಾ ನಾನಾ ತರಹದ ತಿದ್ದುಪಡಿಗಳನ್ನು ಕಳುಹಿಸಿ ಕೊಟ್ಟು ತೊಂದರೆ ಮಾಡುವಂಥದ್ದು ನನ್ನ ಅಭಿಪ್ರಾಯದಲ್ಲಿ ಸರಿಯಲ್ಲ. ಕ್ಯಾಪಿಟೇಷನ್ ಶುಲ್ಕದಿಂದ ಆಗುತ್ತಿ ರುವ ಅನ್ಯಾಯದ ಬಗ್ಗೆ ಎರಡು ಸಣ್ಣ ಉದಾಹರಣೆಗಳನ್ನು ನಾನು ಕೊಡಬಯಸುತ್ತೇನೆ. ಒಬ್ಬ ಮೆರಿಟ್ ಇರತಕ್ಕಂಥ ವಿದ್ಯಾರ್ಥಿ 1ಲಕ್ಷ 60 ಸಾವಿರ ರೂಪಾಯಿಗಳನ್ನು ಕೊಟ್ಟು ಒಂದು ಸೀಟನ್ನು ಖಾಸಗಿ ಮೆಡಿಕಲ್ ಕಾಲೇಜಿನಲ್ಲಿ ಪಡೆದುಕೊಂಡ. ಆದರೆ ಬೇರೆ ಯಾವುದೋ ಮೆಡಿಕಲ್ ಕಾಲೇಜಿನಲ್ಲಿ

ಸೀಟು ಸಿಕ್ಕದ್ದರಿಂದಲೋ ಅಥವಾ ಅವನಿಗೆ ಇಂಜಿನಿಯರಿಂಗ್‌ನಲ್ಲಿ ಆಸಕ್ತಿ ಇದ್ದುದರಿಂದಲೋ ಮೊದಲಿನ ಕಾಲೇಜು ಬಿಟ್ಟು ಹೋದ. ಆದರೆ ಆತನು ಕೊಟ್ಟ ರೂ. 1ಲಕ್ಷ 60ಸಾವಿರ ಅವನು ವಾಪಸ್ಸು ಕೇಳಿದರೂ ಅದನ್ನು ಪಡೆದುಕೊಳ್ಳಲಿಕ್ಕಾಗಲಿಲ್ಲ. ನಂತರ ಅವನು ಬಿಟ್ಟುಕೊಟ್ಟ ಸೀಟು ಬೇರೆಯವನಿಗೆ ಹೋಯಿತು. ಬೇರೆಯವನಿಗೆ ಸೀಟು ಕೊಡುವಾಗಲೂ ಅವನಿಂದ 1ಲಕ್ಷ 60 ಸಾವಿರ ರೂಪಾಯಿಗಳನ್ನು ಆ ಸಂಸ್ಥೆಯವರು ಪುನಃ ತೆಗೆದುಕೊಂಡರು. ಹೀಗೆ ಒಂದು ಸೀಟಿನ ಮೇಲೆ 3 ಲಕ್ಷ 20 ಸಾವಿರ ರೂಪಾಯಿಗಳನ್ನು ಪಡೆದಿರುವ ಇದೊಂದು ನಿದರ್ಶನ ಇದೆ. ಇದು ಬೇರೆಕಡೆ ನಡೆದಿದ್ದು. ಬೆಂಗಳೂರಿನಲ್ಲೇ ಕಳೆದ ವರ್ಷ ಇಂಡಿಯನ್ ಆರಿಜನ್ ಇರುವ ಮಲೇಶಿಯನ್ ವಿದ್ಯಾರ್ಥಿಯೊಬ್ಬನಿಂದ ಹಣ ಪಡೆದುಕೊಂಡ ಪ್ರಕರಣ ನಡೆದಿದೆ. ಆತನ ತಾತನೋ ಯಾರೋ ಮಲೇಶಿಯಾಕ್ಕೆ ಹೋಗಿದ್ದು ಅವರು ಭಾರತೀಯರೇ ಆಗಿದ್ದರು. ನಮ್ಮ ಭಾಷೆ ಮಾತನಾಡುತ್ತಾರೆ. ಆತ ಇಲ್ಲಿ ಸೀಟು ಪಡೆಯಲು 2ಲಕ್ಷ 75 ಸಾವಿರ ರೂಪಾಯಿಗಳನ್ನು ಕೊಟ್ಟ. ಆದರೆ ಅಷ್ಟು ಹಣವನ್ನು ಪಡೆದರೂ ಅವನಿಗೆ ಸೀಟು ಸಿಗಲಿಲ್ಲ. ಅವರು ಹಣ ಕೊಡಬೇಕಾದರೆ ಮನೆ ಮಾರಿ ಕೊಟ್ಟಿದ್ದರು ಎಂದು ಅವರು ಹೇಳುತ್ತಾರೆ. ಹಣವನ್ನು ಪಡೆದುಕೊಂಡ ವ್ಯಕ್ತಿ ಸೀಟನ್ನು ಕೊಡಿಸಲಿಲ್ಲ, ಹಣವನ್ನೂ ವಾಪಸ್ ಕೊಡಲಿಲ್ಲ. ಈ ವಿಚಾರ ಪತ್ರಿಕೆಯಲ್ಲೂ ಬಂದಿದ್ದು ಸರ್ಕಾರಕ್ಕೂ ಪೋಲೀಸಿನವರಿಗೂ ದೂರನ್ನೂ ಕೊಟ್ಟಿದ್ದಾರೆ. ಈ ಸರ್ಕಾರ ಕೂಡ ಆ ವ್ಯಕ್ತಿಯನ್ನು ಅರೆಸ್ಟ್ ಮಾಡುವುದರಲ್ಲಿ ಮತ್ತು ಜೈಲಿಗೆ ಕಳು ಹಿಸುವುದರಲ್ಲಿ ವಿಫಲವಾಗಿದೆ ಎಂದು ನಾನು ದೂಷಿಸಬೇಕಾಗಿದೆ. ಅವನನ್ನು ಅರೆಸ್ಟ್ ಮಾಡಿ ಜೈಲಿಗೆ ಹಾಕಬೇಕೆಂದು ಹೇಳುತ್ತೇನೆ. ಹೀಗೆ ಇದು ಮುಂದುವರಿದರೆ ಜನರಿಗೆ ತೊಂದರೆಯಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್. ಹಣವನ್ನು ಕೊಟ್ಟಿರುವವನನ್ನು ಜೈಲಿಗೆ ಹಾಕಬೇಕೋ ಅಥವಾ ತೆಗೆದುಕೊಂಡಿರುವವನಿಗೆ ಜೈಲಿಗೆ ಹಾಕಬೇಕೋ ?

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.— ಪಾಪ, ಕೊಟ್ಟಿರುವವನಿಗೆ ಇದೆಲ್ಲಾ ಏನು ಗೊತ್ತು ಸ್ವಾಮಿ ? ಕ್ಯಾಪಿಟೇಷನ್ ಫೀ ಎಂದು ಹೇಳಿ ಕೊಟ್ಟಿದ್ದಾನೆ. ಆದರೆ ತೆಗೆದುಕೊಂಡಂತಹ ದಳ್ಳಾಳಿ ಯಾರು ಇದ್ದಾರೆ ....

ಶ್ರೀ ಪಿ.ಜಿ.ಆರ್. ಸಿಂಧ್ಯಾ.— ಈ ಘಟನೆಗೆ ಸಂಬಂಧಪಟ್ಟ ಹಾಗೆ ನಡೆದಿರತಕ್ಕ ವಿಷಯ ನನ್ನ ಗಮನಕ್ಕೆ ಬಂದಿದೆ. ಇದನ್ನು ಕಾಲೇಜಿನ ಮೇನೇಜ್‌ಮೆಂಟ್‌ನವರು ತೆಗೆದುಕೊಂಡಿರತಕ್ಕದ್ದಲ್ಲ. ಯಾರೋ ಮಧ್ಯಸ್ಥಿಕೆ ವಹಿಸಿಕೊಂಡು ವಿದೇಶೀ ವಿದ್ಯಾರ್ಥಿಯನ್ನು ಮಂತ್ರಿಗಳ ಮನೆಯ ಹತ್ತಿರಕ್ಕೆ ದೊಡ್ಡ ಕಾರಿನಲ್ಲಿ ಕರೆದುಕೊಂಡು ಹೋಗಿ ನಂತರ ಆತನನ್ನು ಹೊರಗಡೆ ಇರಿಸಿ ಇವರು ಒಳಗೆ ಹೋಗಿ ಬಂದು ಈತನಿಂದ ಒಂದೂವರೆ ಲಕ್ಷ ರೂಪಾಯಿ ಪಡೆದುಕೊಂಡು ಸೀಟು ಕೊಡಿಸುತ್ತೇವೆಂದು ಹೇಳಿ ದ್ದಾರೆ. ಸೀಟು ಕೊಡಿಸುತ್ತೇವೆಂದು ಹೇಳಿ 6 ತಿಂಗಳು ಮುಂದೆ ಹಾಕಿದ್ದಾರೆ. 2 ವರ್ಷಗಳ ಹಿಂದೆ ಈ ಪ್ರಕರಣ ನಡೆದಿದೆ ನಾನು ಈ ಬಗ್ಗೆ ಪರಿಶೀಲನೆ ನಡೆಸುತ್ತಿದ್ದೇನೆ.

ಶ್ರೀ ಮೈಕೇಲ್ ಬಿ ಫರ್ನಾಂಡೀಸ್ — 2 ವರ್ಷಗಳ ಹಿಂದಿನದು ಹೌದು. ಆ ವಿದ್ಯಾರ್ಥಿಯ ಹೆಸರ ನಾಂಬಿ ಎಂದು. ಕೆಂಪೇಗೌಡ ಮೆಡಿಕಲ್ ಕಾಲೇಜು ಹೆಸರಿನಲ್ಲಿ ಯಾರೋ ಒಬ್ಬರು ಗೌಡರು ಇದರಲ್ಲಿ ಮಧ್ಯಸ್ಥಿಕೆ ವಹಿಸಿದ್ದಾರೆ. ಅವರು ಹುಡುಗನ ಮುಂದೆ ಪ್ರಧಾನ ಮಂತ್ರಿಯವರ ಹತ್ತಿರ ಮಾತ ನಾಡುತ್ತೇನೆಂದು ಹೇಳಿ ಟೆಲಿಫೋನ್ ಮೇಲೆ ಎಸ್ ಟಿ.ಡಿ ಮೂಲಕ ಮಾತನಾಡಿದ್ದಾರೆ. ಆದರೆ ಅವರು ನಿಜವಾಗಿಯೂ ಪ್ರಧಾನ ಮಂತ್ರಿಯವರ ಜೊತೆ ಮಾತನಾಡಿಲ್ಲ. ಅವರು ಎಷ್ಟು ಮಟ್ಟಿಗೆ ನಾಟಕವನ್ನು ಆಡಿದ್ದಾರೆಂಬುದನ್ನು ನೀವೇ ತಿಳಿದುಕೊಳ್ಳಬಹುದು. ಇಂತಹವರನ್ನು ಅರೆಸ್ಟ್ ಮಾಡಿ ಜೈಲಿಗೆ ಹಾಕು ವುದು ಸರ್ಕಾರದ ಕರ್ತವ್ಯ.

ಶ್ರೀ ಪಿ.ಜಿ.ಆರ್ ಸಿಂಧ್ಯಾ.—ಹೋದ ಸರ್ಕಾರವೇ ಅವರನ್ನು ಅರೆಸ್ಟ್ ಮಾಡಿ ಜೈಲಿಗೆ ಹಾಕಿದೆ. ಅವರ ಮೇಲೆ ಕ್ರಿಮಿನಲ್ ಕೇಸ್ ಕೂಡಾ ಹಾಕಲಾಗಿದೆ

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.— ನಾನು ಆ ರೀತಿ ಆಗಿಲ್ಲ ಎಂದು ಹೇಳುತ್ತಿದ್ದೇನೆ ಒಂದು ಪಕ್ಷ ಆ ರೀತಿ ಜೈಲಿಗೆ ಹಾಕಿದ್ದರೆ ಸಂತೋಷ ಎಂದು ನಾನು ಹೇಳುತ್ತೇನೆ. ಇಂತಹ ವಿಚಾರಗಳೆಲ್ಲಾ ನಡೆದಿದೆ ಸ್ವಾಮಿ. ಈ ಸರ್ಕಾರ ಈ ಒಂದು ಪದ್ಧತಿಯನ್ನು ರದ್ದು ಮಾಡುವುದರ ಜೊತೆ, ಇಷ್ಟರವರೆಗೆ ಏನು ಕೋಟ್ಯಾಂತರ ರೂಪಾಯಿಗಳನ್ನು ಈ ಬಾಬಿಗೆ ಪಡೆದುಕೊಳ್ಳಲಾಗಿದೆ ಇದರ ಉಪಯೋಗ ಯಾವ ರೀತಿ ಆಗಿದೆ ಎಂಬುದನ್ನು ನೋಡಬೇಕಾಗುತ್ತದೆ. ಇವತ್ತು ಲ್ಯಾಬೊರೇಟರಿ ಸ್ಥಾಪಿಸುವುದಕ್ಕೆ, ಸಂಸ್ಥೆಯ ಉಪಕರಣಗಳನ್ನು ಪಡೆದುಕೊಳ್ಳುವುದಕ್ಕೆ, ಹೆಚ್ಚಿನ ಕಟ್ಟಡಗಳಿಗೆ, ಕಾಲೇಜಿನ ಎಕ್ಸ್‌ಪ್ಯಾಂಷನ್‌ಗೆ ಈ ಹಣವನ್ನು ತೊಡಗಿಸಬೇಕಾಗುತ್ತದೆ ಇಷ್ಟು ಅವರಿಗೆ ಬಂದ ಮೇಲೆ ಉಳಿದ ಹಣ ಅವರಿಗೆ ಏಕೆ ಬೇಕು ? ಇಷ್ಟು ವರ್ಷ ತೆಗೆದುಕೊಂಡಿರುವ ಹಣವನ್ನು ಯಾವ ರೀತಿ ಉಪಯೋಗ ಮಾಡಿಕೊಂಡಿದ್ದಾರೆ ಎಂಬುದನ್ನೆಲ್ಲಾ ಕೇಳತಕ್ಕ ಹಕ್ಕು ಯಾವತ್ತೂ ಇರುವ ಸರ್ಕಾರಕ್ಕೆ ಇದೆ. ಮಾನ್ಯ ಮಂತ್ರಿಗಳು ಏನು ನಿಯಮ ಮಾಡಿ 20 ಪರ್ಸೆಂಟನ್ನು ಒಂದೊಂದು ವರ್ಷದಲ್ಲಿ ರದ್ದು ಮಾಡುತ್ತೇವೆಂದು, ಫೇಸ್ ಔಟ್ ಮಾಡುತ್ತೇವೆಂದು ಹೇಳುತ್ತಿದ್ದಾರೆ ಇದರ ಬದಲಾಗಿ ಕೆಲವರಿಗೆ ಕೂಡಲೇ ರದ್ದು ಮಾಡಬೇಕು. ಇವರಲ್ಲಿ

ಹೆಚ್ಚು ಹಣ ಇದೆ; ಇವರು ಬೇಜಾನ್ ಹಣ ಮಾಡಿ ಇಟ್ಟುಕೊಂಡಿದ್ದಾರೆ. ಇವರು ಇವತ್ತು ಈ ಹಣದಿಂದ ಸ್ವಂತ ಕಟ್ಟಡಗಳನ್ನು, ಬಂಗಲೆಗಳನ್ನು ಕಟ್ಟಿಕೊಂಡು ಮತ್ತಿತರ ಉದ್ದಿಮೆಗಳನ್ನು ರಚಿಸುತ್ತಿದ್ದಾರೆ. ಈ ದಿನ ಯಾರು 1 ಲಕ್ಷ 60 ಸಾವಿರ ರೂ.ಗಳನ್ನು ಕೊಟ್ಟು ಮೆಡಿಕಲ್ ಸೀಟ್ ಪಡೆದುಕೊಳ್ಳುತ್ತಿದ್ದಾರೆ ಅವರು ಡಾಕ್ಟರುಗಳಾದ ಮೇಲೆ ಬಡವರ ಸೇವೆ ಮಾಡುವಂತಹವರೇ ಆಗಿರುವುದಿಲ್ಲ. ಹಾಗೂ ಅವರು ಮಾಡುವ ಸೇವೆಗೆ ಕಡಿಮೆ ಹಣವನ್ನು ಪಡೆದು ಬಡವರ ಸೇವೆಯನ್ನು ಮಾಡಲು ಹೋಗುವುದಿಲ್ಲ. ತಾವು ಸೀಟು ಪಡೆದುಕೊಳ್ಳುವುದಕ್ಕೆ ಕಾಲೇಜಿಗೆ ಏನು ಹಣವನ್ನು ಕೊಟ್ಟು ಬಂದಿದ್ದಾರೆ ಅದನ್ನು ಜನರಿಂದ ಬಡ್ಡಿ ಸಮೇತ ವಾಪಸ್ಸು ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದುದರಿಂದ ಈ ಕ್ಯಾಪಿಟೇಷನ್ ಶುಲ್ಕ ಪದ್ಧತಿ ಪ್ರಾರಂಭವಾದ ಸಮಯದಿಂದ ಈ ಹಣವನ್ನು ಶೇಖರಿಸಿದುದರ ಬಗ್ಗೆ ತನಿಖೆಯಾಗಬೇಕಾಗಿದೆ. ಇವತ್ತು ಯಾವ ಯಾವ ಸಂಸ್ಥೆಗಳಲ್ಲಿ ಸಾಕಷ್ಟು ಹಣ ಇದೆ ಅಂತಹವರಿಗೆ ಕೂಡಲೇ ದಾಕ್ಷಿಣ್ಯ ಇಲ್ಲದೇ ಕ್ಯಾಪಿಟೇಷನ್ ಶುಲ್ಕ ವಿಧಿಸುವ ಪದ್ಧತಿಯನ್ನು ರದ್ದು ಮಾಡಬೇಕೆಂದು ಹೇಳುತ್ತೇನೆ. ಯಾವ ಕಾಲೇಜುಗಳು ಇತ್ತೀಚೆಗೆ ಪ್ರಾರಂಭವಾಗಿದ್ದು ಅವರಿಗೆ ಹಣದ ಅವಶ್ಯಕತೆ ಇದೆ ಅಂತಹವರಿಗೆ ಈ ಹಣ ಪಡೆದುಕೊಳ್ಳಲು ಅವಕಾಶವನ್ನು ಮಾಡಿಕೊಡಿ ಎಂದು ಹೇಳಿ ಮತ್ತೊಂದು ವಿಚಾರವನ್ನು ಹೇಳಬಯಸುತ್ತೇನೆ. ಈಗ ಕರ್ನಾಟಕದ ವಿದ್ಯಾರ್ಥಿಗಳಿಗೆ ಏನು ಶೇಕಡಾ 50 ರಷ್ಟು ಸೀಟುಗಳು ಕೊಡುವ ನಿಯಮ ಮಾಡಲಾಗಿದೆ ಇವರಲ್ಲಿ ಕರ್ನಾಟಕದ ವಿದ್ಯಾರ್ಥಿ ಎಂದರೆ ಯಾರು ಎಂದು ಹೇಳಿದ್ದೀರಿ? ಎಂದರೆ ಕರ್ನಾಟಕದಲ್ಲಿ ಓದಿದವರು ಎಂದು ಹೇಳಿದ್ದೀರಿ. ಕರ್ನಾಟಕದವರು, ಕನ್ನಡ ತಾಯಿ ಭಾಷೆ ಆಗಿರುವವರು ಕೂಡಾ ಕರ್ನಾಟಕದ ಹೊರಗಡೆ ಕೆಲಸ ಮಾಡುತ್ತಿದ್ದು ಅಂತಹವರ ಮಕ್ಕಳು ಅಲ್ಲಿ ಓದುತ್ತಿರುತ್ತಾರೆ. ಅಂತಹವರು ಕರ್ನಾಟಕಕ್ಕೆ ವಾಪಸ್ ಬಂದರೆ ಅವರು ಕರ್ನಾಟಕದವರು ಅಲ್ಲ ಎನ್ನುವ ಪರಿಸ್ಥಿತಿ ಇವತ್ತು ಅನೇಕ ಮಕ್ಕಳಿಗೆ ಬಂದಿದೆ. ಆದುದರಿಂದ ಏನು ಒಂದು "ಕರ್ನಾಟಕದ ವಿದ್ಯಾರ್ಥಿಗಳು" ಎಂದು ಡೆಫನೇಷನ್‌ನಲ್ಲಿ ವಿವರಿಸಲಾಗಿದೆ, ಅದರಲ್ಲಿ ಹೊರಗಡೆ ವ್ಯಾಸಂಗ ಮಾಡುತ್ತಿರುವ ಕನ್ನಡ ಮಾತೃಭಾಷೆ ಇರುವವರೆಲ್ಲರೂ ಕೂಡಾ ಕನ್ನಡದವರು ಎಂದು, ಹಾಗೂ ಕರ್ನಾಟಕದಲ್ಲಿ ಹುಟ್ಟಿ ಬೆಳೆದು ಹೊರಗಡೆ ಸ್ವಲ್ಪ ಸಮಯ ವಿದ್ಯಾಭ್ಯಾಸ ಮಾಡಿರುವವರು ಕೂಡಾ ಕರ್ನಾಟಕದವರು ಎಂದು ಪರಿಗಣಿಸಬೇಕು ಎಂದು ಹೇಳುತ್ತೇನೆ. ಇವತ್ತಿನ ದಿವಸ ಕರ್ನಾಟಕದವರಿಗೆ ಹೆಚ್ಚಿನ ಸೀಟುಗಳು ಸಿಕ್ಕಿವೆ ಹಾಗೂ ಇವರಿಗೆ ಏನು ಹೆಚ್ಚು ಪ್ರಪೋರ್ಷನೇಟ್ ಸೀಟ್‌ಗಳು ಸಿಕ್ಕಿವೆ ಅದು ಶ್ಲಾಘನೀಯವಾದುದಾಗಿದೆ. ಇನ್ನು ಇವತ್ತು ಪಿ.ಯು.ಸಿ. ಮಾರ್ಕ್ಸ್ ಮೇಲೆ ಮೆರಿಟ್ ಲಿಸ್ಟನ್ನು ಮಾಡುತ್ತೀರಿ ಇವತ್ತಿನ ದಿವಸ ಪಿ.ಯು.ಸಿ.ನಲ್ಲಿ ಮಾರ್ಕ್ಸ್ ಮಾರಾಟವಾಗುತ್ತಿದೆ ಎಂದು ಕೆಲವು ಪ್ರಕರಣಗಳಿಂದ ತಿಳಿದುಬಂದಿದೆ. ಬುದ್ಧಿವಂತಿಕೆ ಇಲ್ಲದಿದ್ದರೂ ಸಹ ಒಂದು ಕುತಂತ್ರ ನಡೆಸಿ, ಪಾಠವನ್ನು ಹೆಚ್ಚು ತಿಳಿದುಕೊಳ್ಳುವುದಕ್ಕೂ ಹೋಗದೇ ಯಾರಿಗೆ ಎಷ್ಟು ಹಣ ಕೊಟ್ಟರೆ ಎಷ್ಟು ಮಾರ್ಕ್ಸ್ ಸಿಗುತ್ತದೆಂದು ತಿಳಿದುಕೊಂಡು, ಆ ರೀತಿ ಮಾಡಿ ಹೆಚ್ಚು ಅಂಕಗಳನ್ನು ಪಡೆದು ಎಂಜಿನಿಯರಿಂಗ್ ಹಾಗೂ ಮೆಡಿಕಲ್ ಸೀಟ್‌ಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಆದುದರಿಂದ ನಾನು ಈ ಬಗ್ಗೆ ಒಂದು ಸಲಹೆ ಮಾಡುತ್ತೇನೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್ ಇರಬಹುದು ಅಥವಾ ಯೂನಿವರ್ಸಿಟಿಯವರು ಇರಬಹುದು, ಮೆಡಿಕಲ್ ಕಾಲೇಜಿಗೆ ಒಂದು ಸೆಟಪ್ ಇಟ್ಟುಕೊಂಡು ಒಂದು ಎಂಟ್ರೆನ್ಸ್ ಎಕ್ಸಾಮಿನೇಷನ್ ಮಾಡಬೇಕೆಂದು ಹೇಳುತ್ತೇನೆ. ಮತ್ತು ಇನ್ನೊಂದು ಸೂಚನೆ ಎಂದರೆ, ಇವತ್ತು ಒಬ್ಬ ಕೆಮಿಸ್ಟ್ರಿ ಅಥವಾ ಫಿಸಿಕ್ಸ್ ಅಥವಾ ಬಯಾಲಜಿಯಲ್ಲಿ ಹೆಚ್ಚಿನ ಅಂಕ ತೆಗೆದುಕೊಂಡಿರಬಹುದು. ಆದರೆ ಅವನಿಗೆ ಮೆಡಿಕಲ್ ಎಜ್ಯುಕೇಷನ್ ಬಗ್ಗೆ ಆಕ್ಕರೆ ಇದೆಯೋ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಏಕೆಂದರೆ ಆತನು ಮೆಡಿಕಲ್ ಹಾಗೂ ಎಂಜಿನಿಯರಿಂಗ್ ಕಾಲೇಜುಗಳಿಗೆ ಒಟ್ಟಿಗೆ ಅರ್ಜಿ ಹಾಕಿರುತ್ತಾನೆ. ಡಾಕ್ಟರು ಆಗಬೇಕಾದವನು ಎಂಜಿನಿಯರ್ ಆಗುವುದಾಗಲೀ, ಅಥವಾ ಎಂಜಿನಿಯರ್ ಆಗುವವನು ಡಾಕ್ಟರು ಆಗುವುದಾಗಲೀ ಸರಿಯಲ್ಲ. Aptitudewise, a good doctor cannot be a good engineer and similarly a good engineer cannot be a good doctor. It is not as a matter of rule; there can be some exceptions; but normally one cannot be equally fit for becoming either a doctor or an engineer. Even as a principle of vocational guidance it is not done. Therefore, the aptitude of the applicants should be checked by holding suitable entrance examination etc. ಆದುದರಿಂದ ಈ ರೀತಿಯ ಒಂದು ಹೊಸ ಪದ್ಧತಿಯನ್ನು ಜಾರಿಗೆ ತರಬೇಕೆಂದು ನಾನು ಹೇಳುತ್ತೇನೆ. ಮತ್ತು ರೂರಲ್ ಸೈಡ್‌ಗೆ ರಿಸರ್ವೇಷನ್ ಕೊಡಬೇಕೆಂಬುದನ್ನು ನಾನು [illegible] ಸಮರ್ಥಿಸುತ್ತೇನೆ. ಅವರಿಗೆ 60 ಪರ್ಸೆಂಟ್ [illegible] ಅಥವಾ ಬೇರೆ ಯಾವ ಪ್ರಮಾಣ [illegible] ಬೇಕೆಂಬುದನ್ನು ಈಗಿನ ಪರಿಸ್ಥಿತಿಯನ್ನು ನೋಡಿಕೊಂಡು ಕಂಡುಹಿಡಿಯಬೇಕಾಗಿದೆ ಮತ್ತು [illegible] ದಾಗಿ ಸರ್ಕಾರಿ ಶಾಲೆಗಳಲ್ಲಿ ಪ್ರೈಮರಿ ತರಗತಿಗಳಿಂದ ಓದಿದು ಪೋಸ್ಟ್ ಗ್ರಾಜ್ಯುಯೇಟ್ ವರೆ[illegible]

ವರೆಗೆ ಸ್ಟಾಂಡರ್ಡ್ ಆಫ್ ಎಜ್ಯುಕೇಷನ್ ಸರಿಯಾಗಿದ್ದರೆ ಇವತ್ತಿನ ದಿವಸ ಯಾರೂ ಖಾಸಗೀ ಕಾಲೇಜುಗಳಿಗೆ ಹಣ ಕೊಟ್ಟು ಹೋಗುವುದಕ್ಕೆ ಕಾತುರಪಡುವುದಿಲ್ಲ. We must solve the problem at the source. Government institutions are not giving good quality education. ಇದರಿಂದಾಗಿ ಅನೇಕ ಜನ ಹಣ ಕೊಟ್ಟು ಖಾಸಗೀ ಕಾಲೇಜುಗಳಿಗೆ ಓದಲು ಹೋಗುತ್ತಿದ್ದಾರೆ. ಮೆರಿಟ್ ಇರುವವರು, ಇಲ್ಲದವರು ಎಲ್ಲರೂ ಅಲ್ಲಿಗೆ ಹೋಗುತ್ತಿದ್ದಾರೆ. ಇವತ್ತಿನ ದಿವಸ ಏನಾಗಿದೆಯೆಂದರೆ, ಅಂಬೇಡ್ಕರ್ ಕಾಲೇಜಿನಲ್ಲಿ ಒಬ್ಬ 22 ವರ್ಷದ ಯುವಕ ಮೆಡಿಕಲ್ ಸೀಟನ್ನು ವರದಕ್ಷಿಣೆ ರೂಪದಲ್ಲಿ ಪಡೆದುಕೊಂಡಿದ್ದಾನೆ. ಅದು ಹೇಗೆ ಎಂದರೆ, ಈತ 16-17 ವರ್ಷದ ಒಬ್ಬ ಹುಡುಗಿಯನ್ನು ಮದುವೆಯಾಗಿದ್ದಾನೆ. ಅದಕ್ಕೆ ವರೋಪಚಾರ ರೂಪದಲ್ಲಿ ಆತನಿಗೆ ಕ್ಯಾಪಿಟೇಷನ್ ಫೀಯನ್ನು ಹುಡುಗಿಯ ಕಡೆಯವರು ಕಟ್ಟಿಕೊಟ್ಟಿದ್ದಾರೆ. ಇವತ್ತಿನ ದಿವಸ ವಿದ್ಯಾಮಟ್ಟ ಸರಿಯಿದ್ದರೆ ಸರ್ಕಾರಿ ಕಾಲೇಜುಗಳಲ್ಲಿ ಓದಲು ಎಲ್ಲರೂ ಮುಂದೆ ಬರುತ್ತಾರೆ. ಆದ್ದರಿಂದ ಆರ್ಥಿಕ ಮತ್ತು ವಿದ್ಯಾ ಇಲಾಖೆಗಳು ಒಟ್ಟಿಗೆ ಸೇರಿ ಸರ್ಕಾರಿ ಸಂಸ್ಥೆಗಳ ಬೋಧನಾ ಮಟ್ಟವನ್ನು ಉತ್ತಮಪಡಿಸಿದರೆ ಎಲ್ಲ ವಿದ್ಯಾರ್ಥಿಗಳಿಗೂ ಅನುಕೂಲವಾಗುತ್ತದೆಂದು ಹೇಳಿ ಈ ಬಿಲ್ಲನ್ನು ಸದನ ಒಪ್ಪಿಕೊಳ್ಳಬೇಕೆಂದು ಹೇಳಿ ಹಾಗೂ ಈ ಬಗ್ಗೆ ನನ್ನ ಬೆಂಬಲವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ನಾರಾಯಣರಾವ್ (ಗಾಂಧಿನಗರ).—ಮಾನ್ಯ ಅಧ್ಯಕ್ಷರೆ, ಈ ಸದನದ ಮುಂದೆ ಏನು ಬಿಲ್ಲನ್ನು ತರಲಾಗಿದೆ ಇದನ್ನು ಎಲ್ಲರೂ ಸ್ವಾಗತಿಸಬೇಕೆಂದು ನಾನು ಹೇಳುತ್ತೇನೆ. ನಿನ್ನೆ ವಿರೋಧ ಪಕ್ಷದ ಅನೇಕ ಮಾನ್ಯ ಸದಸ್ಯರು ಮಾತನಾಡತಕ್ಕ ಕಾಲದಲ್ಲಿ, ಏನು ಜನತಾ ಪಕ್ಷ ತಮ್ಮ ಪ್ರಣಾಳಿಕೆಯಲ್ಲಿ ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಪೂರ್ತಿ ತೆಗೆದುಹಾಕುತ್ತೇವೆಂದು ಹೇಳಿತ್ತು ಅದನ್ನು ಮಾಡಿಲ್ಲವೆಂದು ಹಾಗೂ ಈ ಬಗ್ಗೆ ಸರಿಯಾದ ಬಿಲ್ಲನ್ನು ತರಲಿಲ್ಲವೆಂದು ಹೇಳಿದರು. ಆದರೆ ನನ್ನ ಅಭಿಪ್ರಾಯದಲ್ಲಿ ಇವತ್ತು ಏನು ಪ್ರಣಾಳಿಕೆಯಲ್ಲಿ ಹೇಳಲಾಗಿತ್ತೋ ಅದನ್ನು ಪೂರ್ತಿ ಜಾರಿಗೆ ತರುವುದಕ್ಕಾಗಿ ಇದನ್ನು ತಂದಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಮೂಲಕ ಸರ್ಕಾರ ಒಂದು ಧೋರಣೆಯನ್ನು ನಾನು ಸಭೆಯ ಮುಂದೆ ಇಡುತ್ತೇನೆ. ಇವತ್ತಿನ ದಿವಸ ಖಾಸಗೀ ಎಂಜಿನಿಯರಿಂಗ್ ಹಾಗೂ ಮೆಡಿಕಲ್ ಕಾಲೇಜುಗಳು ಏನಿವೆ ಅವನ್ನು ಸರ್ಕಾರ ವಹಿಸಿಕೊಂಡು ನಡೆಸುವುದಕ್ಕಾಗುವುದಿಲ್ಲ, ಹಾಗೂ ಇವನ್ನು ರಾಷ್ಟ್ರೀಕರಣ ಮಾಡುವುದಕ್ಕೆ ಆಗುವುದಿಲ್ಲ. ಈ ಒಂದು ಧೋರಣೆಯನ್ನು ಗಮನದಲ್ಲಿ ಇಟ್ಟುಕೊಂಡು ಈ ಬಿಲ್ಲಿನ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಈ ಒಂದು ಬಿಲ್ಲಿನಲ್ಲಿ ವಿವಾದಾಸ್ಪದವಾಗಿರತಕ್ಕದ್ದು ಕ್ಲಾಸ್-3 ಎಂದು ಹೇಳಿದರೆ ತಪ್ಪಾಗಲಾರದು. ಕ್ಲಾಸ್-3 ರಲ್ಲಿ ಮೊದಲನೆಯ ಕ್ಲಾಸ್‌ನಲ್ಲಿ ಕ್ಯಾಪಿಟೇಷನ್ ಫೀಸನ್ನು ಅಬಾಲಿಷ್ ಮಾಡುತ್ತೇವೆಂದು ಹೇಳಲಾಗಿದೆ. ಆದರೆ ಮುಂದೆ ಕೆಲವು ಕಂಡೀಷನ್‌ಗಳಿಗೆ ಒಳಪಟ್ಟು ಕ್ಯಾಪಿಟೇಷನ್ ಫೀಸನ್ನು ತೆಗೆದುಹಾಕುವುದಕ್ಕೆ ಕೆಲವು ಸಂಸ್ಥೆಗಳಿಗೆ 5 ವರ್ಷಗಳ ಕಾಲ ಅವಕಾಶವನ್ನು ಮಾಡಿಕೊಡಲಾಗಿದೆ. ಇದು ಬಹಳ ಸಮಂಜಸವಾದ ಪ್ರಾವಿಸೋ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರೆ, ಈಗ ಸರ್ಕಾರ ತೆಗೆದುಕೊಂಡಿರತಕ್ಕ ಧೋರಣೆ ಹಣಕಾಸಿನ ಪರಿಸ್ಥಿತಿಯಿಂದ ನೋಡಿದರೆ ಸಮಂಜಸವಾಗಿದೆ ಎಂದು ನಾನು ಅಂದುಕೊಂಡಿದ್ದೇನೆ. ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯಲ್ಲಿ ಎಲ್ಲಾ ಖಾಸಗೀ ಶಾಲೆಗಳನ್ನು ಸರ್ಕಾರವೇ ತೆಗೆದುಕೊಂಡು ನಡೆಸಲಿಕ್ಕೆ ಆಗುವುದಿಲ್ಲ. 5 ವರ್ಷ ಆಗಲಿ, 10 ವರ್ಷ ಆಗಲಿ, ಖಾಸಗೀ ಶಾಲೆಗಳನ್ನು ತೆಗೆದುಕೊಂಡು ನಡೆಸಲೇಬೇಕು ಎನ್ನುವುದು ಕಾಯಿದೆಯಲ್ಲಿ ಇಲ್ಲ. ಈ ಮಸೂದೆಯಲ್ಲಿ ನಾಳೆಯಿಂದಲೇ ಕ್ಯಾಪಿಟೇಷನ್ ಫೀ ತೆಗೆದು ಹಾಕುತ್ತೇವೆಂದು ಹೇಳಿದ ತಕ್ಷಣ ಅವರು ನಾವು ನಡೆಸಲಿಕ್ಕೆ ಆಗುವುದಿಲ್ಲ ಎಂದು ಶಾಲೆಗಳನ್ನು ಮುಚ್ಚಿದರೆ ಏನು ಮಾಡಬೇಕು ? ಖಾಸಗಿ ಶಾಲೆಗಳನ್ನು ನಡೆಸಲೇಬೇಕು ಎಂದು ಹೇಳುವುದಕ್ಕೆ ಸರ್ಕಾರದಲ್ಲಿ ಕಾಯಿದೆ ಪ್ರಕಾರ ಅಧಿಕಾರ ಇದೆಯೇ? ಎಂದರೆ ಆ ಪ್ರಕಾರ ಅಧಿಕಾರ ಇಲ್ಲ. ಆದ್ದರಿಂದ, ನಾಳೆ ಈ ಪ್ರಾವಿಸೋ ಬಿಟ್ಟುಬಿಟ್ಟು ಕ್ಲಾಸ್-3 ಮಾತ್ರ ಜಾರಿಗೆ ತಂದರೆ ಕ್ಯಾಪಿಟೇಷನ್ ಫೀ ರದ್ದು ಮಾಡಿದ್ದೇವೆ ಅಂದರೆ, ಅವರು ನಮ್ಮ ಕೈಯಲ್ಲಿ ಕಾಲೇಜುಗಳನ್ನು ನಡೆಸಲಿಕ್ಕೆ ಆಗುವುದಿಲ್ಲ ಎಂದು ಮುಚ್ಚಿದರೆ, ಇವೊತ್ತು ಕಾಲೇಜುಗಳಲ್ಲಿ ಓದುತ್ತಾ ಇರತಕ್ಕ ವಿದ್ಯಾರ್ಥಿಗಳ ಗತಿ ಏನಾಗಬೇಕು ? ಅದರ ಬಗ್ಗೆ ನಾವು ಯೋಚನೆ ಮಾಡಬೇಕು. ಸರ್ಕಾರ ಇದನ್ನೆಲ್ಲಾ ಯೋಚನೆ ಮಾಡಿ ಇದಕ್ಕೋಸ್ಕರ ಈ ಪ್ರಾವಿಸೋ ಅಳವಡಿಸಿದೆ ಎಂದು ಹೇಳಿದರೆ ತಪ್ಪಾಗಲಾರದು. ಅದೇ ತರಹ ಹಂತ ಹಂತವಾಗಿ ಕ್ಯಾಪಿಟೇಷನ್ ಫೀ ತೆಗೆದಿದ್ದೇವೆಂದು ಹೇಳಿದ್ದಾರೆ. ಇವೊತ್ತು ಏತಕ್ಕೋಸ್ಕರ 5 ವರ್ಷ ಕಾಲಾವಕಾಶ ಕೊಟ್ಟಿದ್ದೇವೆ ಎನ್ನುವುದನ್ನು ಮತ್ತೊಂದು ದೃಷ್ಟಿಕೋನದಿಂದ ನೋಡಿ ಹೇಳಬೇಕಾದರೆ, ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಅವಧಿ 5 ವರ್ಷಗಳವರೆಗೆ ಇರುತ್ತದೆ. ಆದ್ದರಿಂದ, ಅವರಿಗೆ 5 ವರ್ಷಗಳ ಕಾಲ, ಕಾಲಾವಕಾಶ ಕೊಡಲಿಕ್ಕೆ ಸರ್ಕಾರ ಈ ಪ್ರಾವಿಸೋ ಅಳಪಡಿಸಿದೆ ಎಂದು ಹೇಳಿದರೆ ತಪ್ಪಾಗಲಾರದು. ಯಾವ ತಾರೀಖಿನಿಂದ ಈ ಮಸೂದೆ ಆಗುತ್ತದೆ ಆ ದಿವಸದಿಂದ 5 ವರ್ಷದವರೆಗೆ ಕಾಲಾವಕಾಶ ಕೊಡತಕ್ಕ ಅಧಿಕಾರ ಇರುತ್ತದೆ. ನಾವು ಕ್ಯಾಪಿಟೇಷನ್ ಫೀ ಸಂಪೂರ್ಣ ತೆಗೆದುಹಾಕಿದ್ದೇವೆಂದು ಕಾಯಿದೆ ಮಾಡಿಬಿಟ್ಟರೆ, ಆ ಕಾಯಿದೆ

ಬಂದ ಮೇಲೆ ಖಾಸಗಿಯವರೇನಾದರೂ ಯೋಚನೆ ಮಾಡಿ, ಇದರ ಪ್ರಕಾರ ನಮ್ಮ ಕೈಯಲ್ಲಿ ನಡೆಸಲಿಕ್ಕೆ ಆಗುವುದಿಲ್ಲ ಅಂದರೆ, 5 ವರ್ಷ ಕಲಿಯಬೇಕೆಂದು ವಿದ್ಯಾರ್ಥಿಗಳು ಈ ಖಾಸಗಿ ಕಾಲೇಜುಗಳಿಗೆ ಏನು ಸೇರಿಕೊಂಡಿರುತ್ತಾರೆ ಅವರು ಏನು ಆಗಬೇಕು. ಆದ್ದರಿಂದ, ತಕ್ಷಣ ತೆಗೆದುಹಾಕಿದರೆ ಈ ಸಂಸ್ಥೆಗಳಿಗೆ ತೊಂದರೆಯಾಗುತ್ತದೆ. ಅದಕ್ಕೆ ಅವಕಾಶ ಮಾಡಿಕೊಡದೆ, ಮೊದಲನೆಯ ವರ್ಗದ ವಿದ್ಯಾರ್ಥಿಗಳು ಏನು ಇರುತ್ತಾರೆ, ಅವರು 5 ವರ್ಷದವರೆಗೂ ಮುಗಿಸಿ, ಅವರು ಡಿಗ್ರಿ ಪಡೆದುಕೊಳ್ಳಲಿ ಎನ್ನುವ ದೃಷ್ಟಿಯಿಂದ ಈ ಪ್ರಾವಿಸೋ ಮಾಡಿದೆ. ಇದು ಸಮಂಜಸವಾಗಿದೆ ಎಂದು ಹೇಳುತ್ತೇನೆ. ವಿರೋಧ ಪಕ್ಷದವರು ಇದರ ಬಗ್ಗೆ ಮಾತನಾಡುವಾಗ ತಪ್ಪು ಮಾಡುತ್ತಿದ್ದೀರಿ ಎಂದು ಹೇಳಿದರು. ಅವರು ಹೇಳುವ ಪ್ರಕಾರ ಈ ಪ್ರಾವಿಸೋ ತೆಗೆದುಹಾಕಿದರೆ ಕಾಲೇಜಿಗೆ ಸೇರಿರತಕ್ಕ ವಿದ್ಯಾರ್ಥಿಗಳಿಗೆ ನೇಣು ಹಾಕಿದಂತೆ ಆಗುತ್ತದೆ. ಏಕೆಂದರೆ, ಅವರು ನಮ್ಮ ಕೈಯಲ್ಲಿ ನಡೆಸಲಿಕ್ಕೆ ಆಗುವುದಿಲ್ಲ ಎಂದು ಕಾಲೇಜುಗಳನ್ನು ಮುಚ್ಚಿದರೆ ಕಷ್ಟವಾಗುತ್ತದೆ. ತಮಗೆ ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ಹೇಳಬೇಕೆಂದರೆ, ನಮ್ಮ ಸರ್ಕಾರ ಬಂದಂಥ ಸಮಯದಲ್ಲಿ, ಹಿಂದಿನ ಸರ್ಕಾರ ಕೆಲವು ಕಾಲೇಜುಗಳಿಗೆ ವಿದ್ಯಾರ್ಥಿಗಳ ಇನ್‌ಟೇಕ್ ಸಂಖ್ಯೆಯನ್ನು ಎಕ್ಸ್‌ಟೆಂಡ್ ಮಾಡಿ ಓರಲ್ ಆರ್ಡರ್ಸ್ ತರಹ ಕೊಟ್ಟಿದ್ದರು. ಆದರೆ ಅದನ್ನು ಯೂನಿವರ್ಸಿಟಿಯವರು ಒಪ್ಪಿಕೊಂಡಿರಲಿಲ್ಲ. ಎರಡು ಮೂರು ತಿಂಗಳು ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಯೂನಿವರ್ಸಿಟಿಯವರು ಅವಕಾಶ ಕೊಟ್ಟಿರಲಿಲ್ಲ. ವಿದ್ಯಾರ್ಥಿಗಳು ಬಹಳ ತೊಂದರೆಯಲ್ಲಿದ್ದ ಸಮಯದಲ್ಲಿ, ಅವರುಗಳು ಬಂದು ನಮಗೆ ಸಹಾಯ ಮಾಡಬೇಕೆಂದು ಹೇಳಿದರು. ಆಗ ಪುನಃ ನಮ್ಮ ಸರ್ಕಾರಕ್ಕೆ ಹೇಳಿ, ವಿಶ್ವವಿದ್ಯಾನಿಲಯಕ್ಕೆ ಹೇಳಿ, ಅನುಮತಿ ಕೊಡಿಸಿದ್ದೇವೆ. ಈಗ ನಾವು ಕ್ಯಾಪಿಟೇಷನ್ ಫೀ ಅಬಾಲಿಷ್ ಮಾಡಿದ್ದೇವೆಂದು ಹೇಳಿದ ತಕ್ಷಣ ಅವರು ಕಾಲೇಜು ಮುಚ್ಚಿದರೆ ಏನಾಗುತ್ತದೆ. ಅದರ ಬಗ್ಗೆ ಯೋಚನೆ ಮಾಡಬೇಕು. ಈ ತರಹ ಇರುವುದರಿಂದ, ಕ್ಲಾಜ್ 3 ನಲ್ಲಿ ಇರತಕ್ಕ ಪ್ರಾವಿಸೋ ಬಹಳ ಸಮಂಜಸವಾಗಿವೆ. ಅದನ್ನು ಒಪ್ಪಿಕೊಳ್ಳಬೇಕೆಂದು ಎಲ್ಲ ಸದಸ್ಯರಲ್ಲಿ ವಿನಂತಿ ಮಾಡಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ॥ ಸಂಗಮೇಶ್ವರ ಸರದಾರ (ರಾಯಚೂರು).— ಅಧ್ಯಕ್ಷರೇ, ಈ ಕ್ಯಾಪಿಟೇಷನ್ ಪಿಡುಗು ಎಂದು ಏನು ಹೇಳುತ್ತಾರೆ ಅದನ್ನು ಒಪ್ಪಲಿಕ್ಕೆ ತಯಾರಿಲ್ಲ. ಈ ತರಹ ಪ್ರಾರಂಭವಾದದ್ದು ಮಾನ್ಯ ಮೊಯಿಲಿಯವರ ಸೌತ್ ಕೆನರಾದಲ್ಲಿ ಮಾನ್ಯ ಟಿ.ಎಂ.ಎ. ಪೈ ಅವರು ಒಳ್ಳೆಯ ಉದ್ದೇಶದಿಂದ ಖಾಸಗಿಯಾಗಿ ಮೆಡಿಕಲ್ ಕಾಲೇಜನ್ನು ಪ್ರಾರಂಭ ಮಾಡಿದರು. ಇವೊತ್ತಿನವರೆಗೂ ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ 50 ಪರ್ಸೆಂಟ್ ಏನಿದೆ, ಅದನ್ನು ಕಂಪ್ಲೀಟ್ ಆಗಿ ಮೆರಿಟ್ ಮೇಲೆ ಕೊಟ್ಟರು. ಡೊನೇಷನ್ ಕಮ್ ಮೆರಿಟ್ ಎಂದು ಕೊಟ್ಟರು. ಇತ್ತೀಚೆಗೆ ನಿಜಲಿಂಗಪ್ಪನವರ ಕಾಲದಲ್ಲಿ ಪ್ರಾರಂಭವಾದದ್ದು ಈ ಕೂಸು, ಅವರು ಇದನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ, ಆಮೇಲೆ ಬಂದವರೂ ಸರಿಯಾಗಿ ಬೆಳೆಸಲಿಲ್ಲ. ಇದು ಒಳ್ಳೆಯ ಉದ್ದೇಶದಿಂದ ಆಗಬೇಕಾಗಿತ್ತು. ಖಾಸಗಿ ಮೆಡಿಕಲ್ ಕಾಲೇಜುಗಳ ಅವಶ್ಯಕತೆ ಇತ್ತು. ನನ್ನ ಅಭಿಪ್ರಾಯದಲ್ಲಿ 5 ಸಾವಿರ ಜನಸಂಖ್ಯೆಗೆ ಒಬ್ಬ ಡಾಕ್ಟರು ಬೇಕೇ ಬೇಕು. ಹಾಗಾದರೆ ಮಾತ್ರ ಇವೊತ್ತು ಇದರ ಕೊರತೆ ಬೀಳುವುದಿಲ್ಲ. ಇವೊತ್ತು ನಮ್ಮ ಡಾಕ್ಟರುಗಳು, ಇಂಜಿನಿಯರುಗಳು, ಇನ್ನೂ ಕೆಲವು ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿರುವವರು ಹೊರಗೆ ಹೋಗಿ ಸುಮಾರು 24 ಸಾವಿರ ಕೋಟಿ ರೂಪಾಯಿ ನಮಗೆ ಹೊರಗಡೆಯಿಂದ ಬರುತ್ತಿದೆ. ನಮ್ಮ ಪ್ರಣಾಳಿಕೆಯಲ್ಲಿ ಕ್ಯಾಪಿಟೇಷನ್ ಫೀಯನ್ನು ಬಂದ್ ಮಾಡುತ್ತೇವೆಂಬ ಬಗ್ಗೆ ಹೇಳಿದ್ದೇವೆ. ಏಕಕಾಲದಲ್ಲಿ ಮಾಡುತ್ತೇವೆ ಅಂದರೆ, ಮೆಡಿಕಲ್ ಕಾಲೇಜು, ಡೆಂಟಲ್, ಖಾಸಗಿ ಇಂಜಿನಿಯರಿಂಗ್ ಕಾಲೇಜು ಬಿ.ಎಡ್. ಕಾಲೇಜುಗಳು ಮತ್ತು ಪಾಲಿಟೆಕ್ನಿಕ್ ಕಾಲೇಜುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡರೆ ಅವರು ಕೋರ್ಟಿಗೆ ಹೋಗುತ್ತಾರೆ. ಆಗ ಬಹಳ ತೊಂದರೆ ಬರುತ್ತದೆ. ನಾವು ಅವುಗಳನ್ನು ತೆಗೆದುಕೊಂಡ ಮೇಲೆ ಕೆಲವರು ಆ ಸ್ಥಳದಲ್ಲೇ ಇದ್ದು, ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕವರು ವರ್ಗಾವರ್ಗಿ ಬಂದಾಗ ಹೋಗುವುದಿಲ್ಲ ಎಂದು ಹೇಳುವುದು. ಈ ತರಹ ಸ್ಟಾಫ್ ತೊಂದರೆ ಇವೆಲ್ಲಾ ಬರುವುದರಿಂದ ಅವುಗಳನ್ನು ಬೆಳೆಸಲಿಕ್ಕೆ ಆಗುವುದಿಲ್ಲ. ಹಂತ ಹಂತವಾಗಿ ಇದು ವಿಚಾರ ಮಾಡಬೇಕಾಗುತ್ತದೆ. ಈಗ ನಾವು ಏಕಕಾಲದಲ್ಲಿ ಬಂದ್ ಮಾಡಿದರೆ, ನಮ್ಮ ವಿದ್ಯಾರ್ಥಿಗಳು ಮಹಾರಾಷ್ಟ್ರಕ್ಕೆ ಅಥವಾ ಆಂಧ್ರಕ್ಕೆ ಹೋಗುತ್ತಾರೆ. ನಾನು ಮೊನ್ನೆ ದಿವಸ ಮಹಾರಾಷ್ಟ್ರಕ್ಕೆ ಹೋಗಿದ್ದೆ. ಅಲ್ಲಿ 12 ಸಾವಿರ ರೂಪಾಯಿಗಳವರೆಗೆ ಕ್ಯಾಪಿಟೇಷನ್ ಫೀ ಕಲೆಕ್ಟ್ ಮಾಡಲಿಕ್ಕೆ ಹೊರಟಿದ್ದಾರೆ. ಆದ್ದರಿಂದ ನಾವು ಏಕಕಾಲದಲ್ಲಿ ಬಂದ್ ಮಾಡಿದರೆ ಅವರು ಮಹಾರಾಷ್ಟ್ರಕ್ಕೆ ಹೋಗುತ್ತಾರೆ. ಇದರ ಬಗ್ಗೆ ವಿರೋಧ ಪಕ್ಷದವರು ನಾವು ಕುಳಿತುಕೊಂಡು ಕೇಂದ್ರ ಸರ್ಕಾರದ ಜೊತೆ ವಿಚಾರ ಮಾಡಬೇಕಾಗುತ್ತದೆ. ನಾವು ಬಂದ್ ಮಾಡುತ್ತೇವೆ ಅಂದರೆ, ಬೇರೆ ರಾಜ್ಯಗಳಿಗೆ ನಮ್ಮ ರೊಕ್ಕ ಹೋಗುತ್ತದೆ. ಏಕ ಕಾಲದಲ್ಲಿ ಮಾಡಲಿಕ್ಕೆ ನಮ್ಮಲ್ಲಿ ಹಣ ಇಲ್ಲ. ಹಣದ ಕೊರತೆ ಇದೆ. ಕಾನೂನು ಪ್ರಶ್ನೆ ಬರುತ್ತದೆ. ಮಾನ್ಯ ಆಚಾರ್ಯ ಅವರು ಎಜುಕೇಷನ್ ಸ್ಟ್ಯಾಂಡರ್ಡ್ ಬಗ್ಗೆ ಹೇಳಿದರು. ನಾನು ಕೂಡಾ ವಿಯೆನ್ನಾ, ಚಿಕಾಗೋ ವಿಶ್ವವಿದ್ಯಾನಿಲಯಗಳಲ್ಲಿ ಓದಿ ಬಂದಿದ್ದೇನೆ. ಅಂಥದ್ದರಲ್ಲಿ ಸರ್ಕಾರಿ ಕಾಲೇಜುಗಳಿಗೂ, ಪ್ರೈವೇಟ್ ಮ್ಯಾನೇಜ್‌ಮೆಂಟ್ ಕಾಲೇಜುಗಳಿಗೂ ಇರತಕ್ಕ

ಸ್ಟ್ಯಾಂಡರ್ಡ್ ನೋಡಿದಾಗ, ಸರ್ಕಾರಿ ಕಾಲೇಜಿನಲ್ಲಿ ನಾಲ್ಕಾಣೆ ಅಷ್ಟು ಇಂಪ್ರೂವ್‌ಮೆಂಟ್ ಇರಲಿಲ್ಲ. ಪ್ರೈವೇಟ್‌ನವರದು ಹನ್ನೆರಡಾಣೆಯಷ್ಟು ಇಂಪ್ರೂವ್‌ಮೆಂಟ್ ಇತ್ತು. ಹಂತ ಹಂತವಾಗಿ ವಿರೋಧ ಪಕ್ಷದವರು ಆಡಳಿತ ಪಕ್ಷದವರು ಕುಳಿತುಕೊಂಡು ಸಹಕರಿಸಿ ಈ ಬ್ಲಾಕ್ ಮಾರ್ಕೆಟ್ ಬಂದ್ ಮಾಡಬೇಕು. ಮೊನ್ನೆ ಅಂಕಪಟ್ಟಿಯ ಅವ್ಯವಹಾರ ನಡೆಸಿದ ಕಾರಣಕ್ಕಾಗಿ ಡೈರೆಕ್ಟರನ್ನು ಸಸ್ಪೆಂಡ್ ಮಾಡಿ ಮನೆಗೆ ಕಳುಹಿಸಲಾಗಿದೆ. ಈಗ ಪ್ರೊಫೆಸರ್ ಮತ್ತು ಲೆಕ್ಚರರ್‌ಗಳಿಗೆ ರೊಕ್ಕ ಕೊಟ್ಟು ಪಾಸ್ ಮಾಡತಕ್ಕದ್ದು ಏನಿದೆ ಅದನ್ನೂ ಸಹ ಬಂದ್ ಮಾಡಬೇಕು ಎಂದು ಹೇಳಿ, ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ ಮಲ್ಲಪ್ಪ (ಹರಿಹರ).—ಮಾನ್ಯ ಅಧ್ಯಕ್ಷರಿಗೆ, ಈಗಾಗಲೇ ಅನೇಕ ಮಾನ್ಯ ಸದಸ್ಯರು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶ ಶುಲ್ಕದ ಬಗ್ಗೆ ಸಾಕಷ್ಟು ವಿಚಾರವನ್ನು ಚರ್ಚೆ ಮಾಡಿದ್ದಾರೆ ಇದರಲ್ಲಿ ನಾನೂ ಕೂಡ ನನ್ನ ಒಂದೆರಡು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ ಕೆಲವು ಸಂದರ್ಭದಲ್ಲಿ ಕೆಲವು ವಿದ್ಯಾರ್ಥಿಗಳು ಸರ್ಕಾರೀ ಕಾಲೇಜುಗಳಿಗೆ ದುಡ್ಡು ಕಟ್ಟಿ ಇಲ್ಲಿ ಸೀಟು ಸಿಕ್ಕುವುದಿಲ್ಲ ಎನ್ನುವ ಅನುಮಾನದಿಂದ ಖಾಸಗೀ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಿಗೆ ಮತ್ತೆ ಡೊನೇಷನ್ ಕೊಟ್ಟು ಸೇರಿಕೊಂಡಿರುತ್ತಾರೆ. ಅವರಿಗೆ ಅಲ್ಲಿ ಸೀಟು ಸಿಕ್ಕಿದಮೇಲೆ ಅವರು ಕಟ್ಟಿರತಕ್ಕ ಡೊನೇಷನ್ ಹಣದಲ್ಲಿ 50 ಪರ್ಸೆಂಟ್ ಹಣವನ್ನು ಮುರಿದುಕೊಂಡು ಉಳಿದುದನ್ನು ವಾಪಸು ಕೊಡುವ ಪದ್ಧತಿ ಇದೆ. ಇದನ್ನು ಮುರಿದುಕೊಳ್ಳದೆ ಪೂರ್ತಿ ಹಣವನ್ನು ವಾಪಸು ಕೊಡುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಇನ್ನು ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಬಗ್ಗೆ ಮಾತ್ರ ನಾವು ಇಲ್ಲಿ ಯಾವಾಗಲೂ ಮಾತನಾಡುತ್ತಿರುತ್ತೇವೆ. ಆದರೆ ಗ್ರಾಮಾಂತರ ಪ್ರದೇಶದ ಮಕ್ಕಳ ಬಗ್ಗೆ ನಾವು ಯೋಚನೆಯನ್ನೇ ಮಾಡುತ್ತಿಲ್ಲ. ಇವತ್ತು ಏನಾಗಿದೆ ಎಂದರೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಯಾವ ರೀತಿ ಡೊನೇಷನ್‌ನ್ನು ತೆಗೆದುಕೊಳ್ಳುತ್ತಿದ್ದಾರೋ ಅದೇ ರೀತಿ ಪಾಲಿಟೆಕ್ನಿಕ್, ಡಿಪ್ಲೊಮಾಗಳಲ್ಲಿ ಓದಲು ಹೋಗುವ ವಿದ್ಯಾರ್ಥಿಗಳಿಂದಲೂ ಕೂಡ 30-40 ಸಾವಿರ ರೂಪಾಯಿಗಳನ್ನು ಡೊನೇಷನ್ ರೂಪದಲ್ಲಿ ತೆಗೆದುಕೊಳ್ಳುತ್ತಿದ್ದಾರೆ. ಸಾಮಾನ್ಯವಾಗಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ದೊಡ್ಡ ದೊಡ್ಡ ಸಿರಿವಂತರ ಮಕ್ಕಳು ಸೇರಿಕೊಳ್ಳುತ್ತಾರೆ. ಈ ಡಿಪ್ಲೊಮಾ ಅಥವಾ ಪಾಲಿಟೆಕ್ನಿಕ್‌ಗಳಿಗೆ ಸೇರಿಕೊಳ್ಳುವವರು ಬಡವರ ಮಕ್ಕಳು ಇಲ್ಲವೇ ಗ್ರಾಮಾಂತರ ಪ್ರದೇಶದಿಂದ ಬಂದಂಥ ರೈತರ ಮಕ್ಕಳು; ಹಿಂದುಳಿದವರ ಮಕ್ಕಳು, ಅಥವಾ ಮಧ್ಯಮ ವರ್ಗದ ಮಕ್ಕಳು. ಇವರಿಂದ ಅಷ್ಟೊಂದು ಹಣವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಕಳೆದ ವರ್ಷ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ 20 ಪರ್ಸೆಂಟ್‌ನಷ್ಟು ಸೀಟುಗಳನ್ನು ಕೊಟ್ಟಿಲ್ಲದಿದ್ದರೆ ಈ ವರ್ಷ ಅದನ್ನೂ ಸೇರಿಸಿ ಅಂದರೆ ಒಟ್ಟು 40 ಪರ್ಸೆಂಟ್ ಸೀಟುಗಳನ್ನು ಕೊಡುವಂತೆ ತಿಳಿಸಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಕೇವಲ ಡಿಪ್ಲೊಮಾ, ಪಾಲಿಟೆಕ್ನಿಕ್‌ಗಳಲ್ಲಿ ಮಾತ್ರ ಡೊನೇಷನ್ ತೆಗೆದುಕೊಳ್ಳುತ್ತಾರೆಂದು ಅಲ್ಲ, ಇದು ಬಿ.ಎಡ್.; ಟಿ.ಸಿ.ಹೆಚ್.; ಐ.ಟಿ.ಐ. ಮುಂತಾದವುಗಳಲ್ಲೂ ಕೂಡ ವಿದ್ಯಾರ್ಥಿಗಳಿಂದ ಸುಮಾರು 10 ಸಾವಿರ ರೂಪಾಯಿಗಳವರೆಗೂ ಡೊನೇಷನ್‌ನು ಹಲವಾರು ಸಂಸ್ಥೆಗಳವರು ವಸೂಲ್ಮಾಡುತ್ತಿದ್ದಾರೆ. ಆದ್ದರಿಂದ ನಾನಾದರೂ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ನಾವು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಯಾವ ರೀತಿ ಷರತ್ತುಗಳನ್ನು ಹಾಕುತ್ತಿದ್ದೇವೆಯೋ ಅದೇ ರೀತಿ ಈ ಡಿಪ್ಲೊಮಾ ಪಾಲಿಟೆಕ್ನಿಕ್, ಟಿ.ಸಿ.ಹೆಚ್; ಬಿ.ಎಡ್; ಐ.ಟಿ.ಐ. ಮುಂತಾದುವುಗಳಿಗೂ ಕೂಡ ಷರತ್ತುಗಳನ್ನು ಹಾಕಬೇಕು. ಇಂಥ ಒಂದು ಕ್ರಮವನ್ನು ಅವರ ಮೇಲೆ ತೆಗೆದುಕೊಂಡು ಅಲ್ಲಿ ಸೇರಲು ಬಯಸುವ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕು. ಕಾರಣ ಅಲ್ಲಿಗೆ ಹೋಗತಕ್ಕ ವಿದ್ಯಾರ್ಥಿಗಳು ಎಂದರೆ ಕೇವಲ ಬಡವರು, ಹಿಂದುಳಿದ ವರ್ಗದವರು, ದುರ್ಬಲ ವರ್ಗದವರು. ಆದ್ದರಿಂದ ಇದರ ಬಗ್ಗೆ ಗಮನ ಹರಿಸಬೇಕೆಂದು ತಮ್ಮ ಮೂಲಕ ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ನನಗಿಂತ ಮೊದಲು ಮಾತನಾಡಿದ ಎರಡೂ ಕಡೆಯ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ ಪಟ್ಟಣದ ಪ್ರದೇಶದ ಮಕ್ಕಳಿಗೆ ತಾಂತ್ರಿಕ ಶಾಲೆಗಳಲ್ಲಿ, ವೈದ್ಯಕೀಯ ಶಾಲೆಗಳಲ್ಲಿ ಪ್ರವೇಶಾವಕಾಶವನ್ನು ಕೊಡುವಾಗ ಗ್ರಾಮಾಂತರ ಪ್ರದೇಶದ ಮಕ್ಕಳು ಈ ಮಕ್ಕಳ ಜೊತೆ ಸ್ಪರ್ಧೆ ಮಾಡಲು ಸಾಧ್ಯವಾಗುವುದಿಲ್ಲ ಆದ್ದರಿಂದ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಶೇಕಡ 50ರಷ್ಟು ಸೀಟುಗಳನ್ನು ಕಾದಿರಿಸಬೇಕೆಂದು ಏನು ಹೇಳಿದ್ದಾಗೆ ಅದನ್ನು ನಾನೂ ಕೂಡ ಅನುಮೋದಿಸುತ್ತೇನೆ. ಈ ರೀತಿ ಮಾಡುವುದಾದರೆ ಗ್ರಾಮಾಂತರ ಪ್ರದೇಶದ ರೈತರ ಮಕ್ಕಳಿಗೆ ಅನುಕೂಲವಾಗುತ್ತದೆ. ಈ ವಿಚಾರವನ್ನು ಸರ್ಕಾರದವರು ಗಮನದಲ್ಲಿಟ್ಟು ಕೊಳ್ಳಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಅಧ್ಯಕ್ಷರೇ, ಈಗ ಸದನದಲ್ಲಿ ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಎರಡೂ ಕಡೆಯ ಮಾನ್ಯ ಸದಸ್ಯರುಗಳು ಬಹಳ ಹೆಚ್ಚಿನ ರೀತಿಯಲ್ಲಿ ಚರ್ಚೆ ಮಾಡಿ

ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಅವರುಗಳು ನೀಡಿದ ಅಭಿಪ್ರಾಯದಂತೆ ಪಟ್ಟಣದಲ್ಲಿ ಓದತಕ್ಕ ಮಕ್ಕಳಿಗಿಂತ ಹೆಚ್ಚಿನ ಸೀಟುಗಳನ್ನು ಗ್ರಾಮಾಂತರ ಪ್ರದೇಶದಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಕೊಡಬೇಕು. ಏಕೆಂದರೆ ಅಲ್ಲಿಂದ ಬರುವವರು ಹಿಂದುಳಿದ ವರ್ಗದವರು, ಬಡವರು. ಇವತ್ತು ಅನೇಕ ಮಕ್ಕಳು ಹಳ್ಳಿಗಳಿಂದ ಪಟ್ಟಣಗಳಿಗೆ ಬಂದು ಇಲ್ಲಿ ಹೈಸ್ಕೂಲು, ಕಾಲೇಜುಗಳಲ್ಲಿ ಓದುತ್ತಿದ್ದಾರೆ. ಅವರು ಹೇಗೆ ಓದುತ್ತಿದ್ದಾರೆಂದರೆ ಆಗಿಂದಾಗ್ಗೆ ತಮ್ಮ ತಮ್ಮ ಹಳ್ಳಿಗಳಿಗೆ ಹೋಗಿ ಅಲ್ಲಿಂದ ರೇಷನ್, ಸೌದೆ, ಮುಂತಾದುವನ್ನು ತೆಗೆದುಕೊಂಡು ಬಂದು ಸ್ವತಃ ತಮ್ಮ ಕೈಯಿಂದಲೇ ಅಡಿಗೆಯನ್ನು ಮಾಡಿಕೊಂಡು ತಮ್ಮ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. ಅವರಿಗೆ ಕಾಲೇಜಿನ ಫೀಸನ್ನು ಕಟ್ಟುವುದಕ್ಕೆ ಶಕ್ತಿ ಇರುವುದಿಲ್ಲ. ಈ ಹಳ್ಳಿಯಿಂದ ಬಂದ ಮಕ್ಕಳು ಯಾವ ಊರಿನಲ್ಲೇ ಓದುತ್ತಿರಲಿ ಅವರು ಹಳ್ಳಿಯ ರೈತರ ಮಕ್ಕಳು ಎಂಬುದನ್ನು ತಾವು ಗಮನದಲ್ಲಿಟ್ಟುಕೊಂಡು ಅವರಿಗೆ ರಿಯಾಯಿತಿಗಳನ್ನು ಕೊಡಬೇಕು. ಈಗಾಗಲೇ ವ್ಯವಸಾಯ ಕಾಲೇಜಿನಲ್ಲಿ ರೈತರ ಮಕ್ಕಳಿಗೋಸ್ಕರ 10 ಅಂಕಗಳನ್ನು ಹೆಚ್ಚಿಗೆ ಕೊಡುವುದರ ಮೂಲಕ ಅನುಕೂಲ ಮಾಡಿಕೊಡುತ್ತಿದ್ದಾರೆ. ಅದೇ ರೀತಿ ಇನ್ನು ಮುಂದೆ ಗ್ರಾಮಾಂತರ ಪ್ರದೇಶದಿಂದ ಬರತಕ್ಕ ರೈತರ ಮಕ್ಕಳಿಗೆ ತಾಂತ್ರಿಕ ಕಾಲೇಜು, ವೈದ್ಯಕೀಯ ಕಾಲೇಜು, ಬಿ.ಎಡ್., ಪಾಲಿಟೆಕ್ನಿಕ್ ಮುಂತಾದವುಗಳಿಗೆ ಸೇರುವ ಸಂದರ್ಭದಲ್ಲಿ ಇವರಿಗೂ ಹೆಚ್ಚಿನ ಅಂಕಗಳನ್ನು ಕೊಡುವುದರ ಜೊತೆಗೆ ಎಲ್ಲ ರೀತಿಯ ಅನುಕೂಲಗಳನ್ನೂ ಮತ್ತು ರಿಯಾಯಿತಿಗಳನ್ನೂ ಒದಗಿಸಿ ಕೊಡಬೇಕೆಂದು ಹೇಳಬಯಸುತ್ತೇನೆ. ಅಲ್ಲದೆ ಎಲ್ಲಕ್ಕಿಂತ ಮುಖ್ಯವಾಗಿ ಇನ್ನು ಮುಂದೆ ಪಟ್ಟಣಗಳಲ್ಲಿ ಈ ಕಾಲೇಜುಗಳನ್ನು ತೆರೆಯುವುದನ್ನು ನಿಲ್ಲಿಸಬೇಕು. ಕಾರಣ ಇದೇ ವ್ಯಕ್ತಿಗಳು ತಮ್ಮ ಬಂಡವಾಳ ವನ್ನು ಹೂಡಿ ಹಳ್ಳಿಗಳಲ್ಲೂ ಕೂಡ ಕಾಲೇಜುಗಳನ್ನು ತೆರೆಯುವುದಕ್ಕೆ ಸಾಧ್ಯತೆ ಇದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈ ಕಾಲೇಜುಗಳು ಪಟ್ಟಣದಲ್ಲೇ ಹೆಚ್ಚು ಇರುವುದರಿಂದ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಇಲ್ಲಿ ಬಂದು ತಮ್ಮ ವಿದ್ಯಾಭ್ಯಾಸವನ್ನು ಮಾಡಬೇಕೆಂದರೆ ಬಹಳ ದುಬಾರಿ ಖರ್ಚು ಬರುತ್ತದೆ. ಕೇವಲ ಕ್ಯಾಪಿಟೇಷನ್ ಫೀ ಕೊಟ್ಟರೆ ಅಷ್ಟಕ್ಕೇ ಇದು ಮುಗಿಯುವುದಿಲ್ಲ. ಹಾಸ್ಟೆಲ್‌ಗೆ ಪ್ರತಿ ತಿಂಗಳೂ 500-600 ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಕಾಲೇಜಿನ ಫೀ 5-6 ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಇಷ್ಟೊಂದು ಹಣ ಕೊಟ್ಟು ವಿದ್ಯಾಭ್ಯಾಸ ಮಾಡಬೇಕಾದರೆ ಅವರು ತುಂಬಾ ಅನುಕೂಲಸ್ಥರ ಮಕ್ಕಳಾಗಿರಬೇಕು. ಬಡವರ ಮಕ್ಕಳಿಗೆ, ದುರ್ಬಲ ವರ್ಗದವರ ಮಕ್ಕಳಿಗೆ, ಪರಿಶಿಷ್ಟ ಜಾತಿಯವರಿಗೆ ಇದು ಸಾಧ್ಯವಾಗುವುದಿಲ್ಲ. ಆದ್ದರಿಂದ ಇನ್ನು ಮುಂದೆ ಈ ತಾಂತ್ರಿಕ ಕಾಲೇಜುಗಳನ್ನು ಹಳ್ಳಿಗಳಲ್ಲೇ ತೆರೆಯಬೇಕೆಂದು ಒತ್ತಾಯ ಮಾಡುತ್ತೇನೆ. ಇದರಿಂದ ಈ ವಿದ್ಯಾರ್ಥಿಗಳಿಗೆ ಖರ್ಚು ಕೂಡ ಕಡಿಮೆ ಬರುತ್ತದೆ.

ಇನ್ನು ಮೆಡಿಕಲ್ ಕಾಲೇಜುಗಳಿಗೆ ಆಸ್ಪತ್ರೆಯ ಸೌಲಭ್ಯ ಇಲ್ಲ ಎನ್ನುವ ಪ್ರಶ್ನೆ ಬರಬಹುದು. ಇವತ್ತು ಮೆಡಿಕಲ್ ಕಾಲೇಜುಗಳನ್ನು ನಡೆಸುವವರೇ ಅವರಿಗೆ ಅವಶ್ಯಕವಾಗಿ ಬೇಕಾದ ಆಸ್ಪತ್ರೆಗಳನ್ನು ನಡೆಸಿಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಅವರು ಒಂದೆರಡು ವರ್ಷ ನಡೆಸಬೇಕು. ಹಳ್ಳಿಗಳಲ್ಲಿ ಅವರು ನಡೆಸುವುದಾದರೆ ಇನ್ನೂ ಅನುಕೂಲವಾಗುತ್ತದೆ. ದಿವಂಗತ ಲಾಲ್ ಬಹದ್ದೂರ್ ಶಾಸ್ತ್ರಿಯವರು ಏನು ಹೇಳಿದ್ದಾರೆಂದರೆ "ಜೈ ಜವಾನ್ ಜೈ ಕಿಸಾನ್" ಎಂದು ಕೇವಲ ನಾವು ಅಷ್ಟನ್ನು ಮಾತ್ರ ಹೇಳುವುದಲ್ಲ, ಅದನ್ನು ನಾವು ಕಾರ್ಯತಃ ಮಾಡಬೇಕು.

ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಚಾರ ಹೇಳುವುದಾದರೆ, ಅಂಕಪಟ್ಟಿಗಳನ್ನು ತಿದ್ದುವಂಥ ಪ್ರಕರಣಗಳನ್ನು ಅನೇಕ ಕೇಳಿದ್ದೇವೆ. ಈ ಸಂಬಂಧದಲ್ಲಿ ಅನೇಕ ಜನ ಅಧಿಕಾರಿಗಳು ಮನೆಗೆ ಹೋಗಿದ್ದಾರೆ. ಕೇವಲ 30-35 ಅಂಕಗಳನ್ನು ತೆಗೆದುಕೊಳ್ಳುವುದಕ್ಕೂ ಯೋಗ್ಯತೆ ಇಲ್ಲದ ಹುಡುಗರಿಗೆ 90-95 ಅಂಕಗಳನ್ನು ಕೊಟ್ಟು ಮೆಡಿಕಲ್, ಇಂಜನಿಯರಿಂಗ್ ಕಾಲೇಜುಗಳಲ್ಲಿ ಸೀಟು ಸಿಕ್ಕುವಂತೆ ಮಾಡಿದ್ದಾರೆ. ಹಳ್ಳಿಯಿಂದ ಬರತಕ್ಕ ವಿದ್ಯಾರ್ಥಿಗಳು ಕಷ್ಟಪಟ್ಟು ಓದಿ 35 ನಂಬರ್ ತೆಗೆದುಕೊಂಡಿರುವವರಿಗಿಂತ ಕಡಿಮೆ ಯೋಗ್ಯತೆ ಇವರಿಗೆ ಇರುತ್ತದೆ. ಆದ್ದರಿಂದ ಇನ್ನು ಮುಂದೆ ಇಂಥ ತಾಂತ್ರಿಕ ಕಾಲೇಜುಗಳನ್ನು ಪಟ್ಟಣ ಪ್ರದೇಶಗಳಲ್ಲಿ ತೆರೆಯಲು ಅವಕಾಶ ಕೊಡದೆ ಗ್ರಾಮಾಂತರ ಪ್ರದೇಶದಲ್ಲಿ ತೆರೆದು ಹಳ್ಳಿಯ ರೈತರ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಫಕೀರಪ್ಪ ಆಲಪ್ಪ ಕೊಪ್ಪದ್ (ರಾಮದುರ್ಗ).— ಮಾನ್ಯ ಅಧ್ಯಕ್ಷರೇ, ನಾನು ಬಹಳ ದೂರದಿಂದ ಹಳ್ಳಿಯಿಂದ ಬಂದಿರತಕ್ಕ ಹೊಸ ಸದಸ್ಯ. ನಾನು ಮಾತನಾಡುವುದರಲ್ಲಿ ಏನಾದರೂ ತಪ್ಪಿದ್ದರೆ ಕ್ಷಮಿಸಬೇಕು. ಇದುವರೆಗೆ ಎರಡೂ ಕಡೆಯ ಮಾನ್ಯ ಹಿರಿಯ ಹಾಗೂ ಅನುಭವೀ ಸದಸ್ಯರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. ನಾನು 110 ಹಳ್ಳಿಗಳು ಇರತಕ್ಕ ಪ್ರದೇಶದಿಂದ ಆರಿಸಿ ಬಂದಿದ್ದೇನೆ. ಆದ್ದರಿಂದ ಹಳ್ಳಿಯ ಬಡ ರೈತರ, ಮತ್ತು ಅವರ ಮಕ್ಕಳ ವಿಚಾರದಲ್ಲಿ ಮಾತನಾಡಬೇಕಾದುದು ನನ್ನ ಕರ್ತವ್ಯ. ಇವತ್ತು ಏನಾಗಿದೆ ಎಂದರೆ ಇಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಿಗೆ ಕೇವಲ ಶ್ರೀಮಂತರ ಮಕ್ಕಳೇ ಸೇರಿ ದೊಡ್ಡ ದೊಡ್ಡ ವೈದ್ಯರು ಮತ್ತು

ಇಂಜಿನಿಯರ್‌ಗಳಾಗಿ ಅವರೇ ಮುಂದುವರಿಯುತ್ತಿದ್ದಾರೆ. ಆದರೆ ರೈತನ ಮಕ್ಕಳು ಯಾರೂ ಕೂಡ ಸಮಾಜದಲ್ಲಿ ಉನ್ನತ ಮಟ್ಟಕ್ಕೆ ಬರುವುದಕ್ಕೆ ಸಾಧ್ಯವಾಗಿಲ್ಲ. ಕಾರಣ ಈ ವಿದ್ಯಾಭ್ಯಾಸಕ್ಕೆ ಲಕ್ಷಾಂತರ ರೂಪಾಯಿ ಖರ್ಚು ಬರುತ್ತದೆ. ಆದ್ದರಿಂದ ಬಡವರು ಯಾರೂ ಕೂಡ ಈ ಕಾಲೇಜುಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುವುದಕ್ಕಾಗುತ್ತಿಲ್ಲ. ಇವತ್ತಿನ ಸಮಾಜದಲ್ಲೂ ಕೂಡ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಓದುವುದಕ್ಕೆ ಸೀಟು ಸಿಕ್ಕಿದೆ ಎಂದರೆ ಅವರಿಗೆ ಹೆಣ್ಣು ಕೊಡುವವರು, ಹಣ ಕೊಡುವವರು ಬಹಳ ಜನ ಮುಂದೆ ಬರುತ್ತಾರೆ. ಇಲ್ಲಿ ಓದಿದಂಥ ಡಾಕ್ಟರ್‌ಗಳು ಯಾರೂ ಕೂಡ ಹಳ್ಳಿಗಳಲ್ಲಿ ವಾಸ ಮಾಡಲು ಇಷ್ಟ ಪಡುವುದಿಲ್ಲ. ನಮಗೆ ಏನಾದರೂ ಖಾಯಿಲೆ ಬಂದರೆ ಈ ಡಾಕ್ಟರ್‌ಗಳನ್ನು ಹುಡುಕಿಕೊಂಡು ನಾವೇ ಪಟ್ಟಣಗಳಿಗೆ ಹೋಗಿ ಬರಬೇಕಾಗಿದೆ. ಹೀಗೆ ಹೋಗಿ ಬರಬೇಕಾದರೆ ಬಸ್ಸಿಗೆ ಛಾರ್ಜ್ ಕೊಡುವುದಕ್ಕೂ ಕೂಡ ಅನೇಕ ಸಂದರ್ಭಗಳಲ್ಲಿ ಹಳ್ಳಿಯ ಜನರ ಹತ್ತಿರ ದುಡ್ಡು ಇರುವುದಿಲ್ಲ. ಆದ್ದರಿಂದ ನಾನಾದರೂ ತಮ್ಮ ಮೂಲಕ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಗ್ರಾಮಾಂತರ ಪ್ರದೇಶದ, ಹಿಂದುಳಿದ ವರ್ಗದ, ಮಕ್ಕಳು ಸಮಾಜದಲ್ಲಿ ಮೇಲ್ಮಟ್ಟಕ್ಕೆ ಬರಲು ಅವಕಾಶಗಳನ್ನು ಕಲ್ಪಿಸಿಕೊಡಬೇಕಾದರೆ ಇಂಥ ತಾಂತ್ರಿಕ ಕಾಲೇಜುಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ತೆರೆಯುವ ವ್ಯವಸ್ಥೆ ಮಾಡಬೇಕು. ಆದರೆ ನಿಮ್ಮ ಈ ಬಿಲ್‌ನಲ್ಲಿ ಅಂಥ ವ್ಯವಸ್ಥೆ ಇಲ್ಲದಿರುವುದರಿಂದ ಈ ಬಿಲ್ಲನ್ನು ವಿರೋಧ ಮಾಡಿ ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ).— ಸನ್ಮಾನ್ಯ ಅಧ್ಯಕ್ಷರೇ, ದಾನ ಶುಲ್ಕ ರದ್ದಿಯಾತಿ ಮಸೂದೆಯನ್ನು ಸರ್ಕಾರ ತಂದ ಮೇಲೆ, ಈ ಮಸೂದೆಯ ವಿಚಾರದಲ್ಲಿ ಸಾಧಾರಣವಾಗಿ ನಾನು ಕಂಡುಕೊಂಡಂಥದ್ದು ಏನೆಂದರೆ ದಾನ ಶುಲ್ಕ ಪದ್ಧತಿಯನ್ನು ಅವಿರೋಧವಾಗಿ ಆ ಕಡೆಯವರು ಮತ್ತು ಈ ಕಡೆಯವರು ಒಪ್ಪಿಕೊಂಡ ವಿಚಾರವೆಂದು ನನಗೆ ಕಾಣುತ್ತಿದೆ. ಈ ಮಸೂದೆಯನ್ನು ಪ್ರಸ್ತಾವನೆ ಮಾಡುವಾಗ ಕೂಡ ಸರ್ಕಾರ ಮತ್ತು ಮಂತ್ರಿಗಳು ಕೂಡ ದಾನ ಶುಲ್ಕದ ರದ್ಧತಿಯ ಒಂದು ವಿಚಾರವಾಗಿ ಸರ್ಕಾರ ಬದ್ಧವಾಗಿದೆಯೆಂದು ಅದನ್ನೂ ಕೂಡ ಪ್ರಸ್ತಾಪ ಮಾಡಿದೆ. ನಮ್ಮ ಪಕ್ಷದ ವತಿಯಿಂದ ಒಂದು ತರಹವಾಗಿ ಹೇಳುವುದಾದರೂ ಕೂಡ ದಾನ ಶುಲ್ಕ ಪದ್ಧತಿ ಎಂಬ ಯಾವ ಒಂದು ದುಷ್ಟ ಪದ್ಧತಿ ಇದೆ ....

ಶ್ರೀ ಕೆ. ಹೆಚ್. ರಂಗನಾಥ್.— ದಾನ ಶುಲ್ಕ ಎಂದರೆ ಶುಲ್ಕವೇ ?

ಶ್ರೀ ಎಂ. ವೀರಪ್ಪ ಮೊಯಿಲಿ.— ಕ್ಯಾಪಿಟೇಷನ್ ಫೀಸ್ ಎಂದು.

ಶ್ರೀ ರಾಮಕೃಷ್ಣ ಹೆಗಡೆ.— ಕಾಂಟ್ರಿಬ್ಯೂಷನ್‌ಗೆ ದಾನ ಶುಲ್ಕ ಎಂದು ಹೇಳುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಇದು ಒಂದು ದುಷ್ಟ ಪದ್ಧತಿ ಇದೆ. ಈ ದುಷ್ಟ ಪದ್ಧತಿಯಿಂದ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಒಂದು ಅಪಚಾರವಾಗುತ್ತಿದೆ. ಇದು ಎಲ್ಲರೂ ಒಪ್ಪತಕ್ಕಂಥ ಮಾತು. ಆದರೆ ಇದು ವಿದ್ಯಾಭ್ಯಾಸ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗುವುದಿಲ್ಲ. ಈ ಒಂದು ಪದ್ಧತಿಯಿಂದ ಕಾಲೇಜುಗಳಲ್ಲಿಯೂ ಕೂಡ ಸಾಕಷ್ಟು ದುಷ್ಪರಿಣಾಮಗಳು ಆಗುತ್ತದೆ. ಇದನ್ನು ನಾನು ವಿಸ್ತಾರವಾಗಿ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಇವು ನಾನು ಈ ವ್ಯವಹಾರ ಪ್ರಪಂಚದಲ್ಲಿ ಅನುಭವ ಮಾಡಿದಂಥ ವಿಚಾರಗಳು. ಇದರಿಂದಾಗಿ ವರದಕ್ಷಿಣೆ ಪದ್ಧತಿಗೆ ಅನುಕೂಲವಾಗುತ್ತದೆ. ಸಾಮಾಜಿಕವಾಗಿ ಆರ್ಥಿಕವಾಗಿ ಅಸಮತೋಲನ ಕೂಡ ಜಾಸ್ತಿಯಾಗುತ್ತದೆ. ಯಾವನು ಆರೋಗ್ಯವನ್ನು ದಾನ ಮಾಡಬೇಕೆಂದು ಇದ್ದಾನೆ ಆತನು ಒಂದು ಸಮಾಜದಲ್ಲಿರತಕ್ಕಂಥ ಪಿಡುಗು ಮತ್ತು ಅದರ ವಿರುದ್ಧವಾಗಿ ಹೋರಾಡತಕ್ಕಂಥ ವೈದ್ಯರ ತಂಡವನ್ನು ನಿರ್ಮಾಣ ಮಾಡಬೇಕೆಂದು ನಾವು ಇಲ್ಲಿ ಏನು ಸಂಕಲ್ಪ ಮಾಡಿದ್ದೇವೆ. ಅಲ್ಲಿ ಕೂಡ ಚ್ಯುತಿ ಬರುತ್ತಿದೆ. ಏತಕ್ಕೆಂದರೆ ಈ ಒಂದು ಶುಲ್ಕ ಪದ್ಧತಿಯಿಂದ ತಯಾರಾಗತಕ್ಕಂಥ ವೈದ್ಯರು ಯಾರೋ ಇದರಲ್ಲಿ ಎಕ್ಸೆಪ್ಷನ್ ಇರುತ್ತಾರೆ. ಡಾ. ಆಚಾರ್ಯ ಮತ್ತು ಡಾ. ರಾಜ್ ಇಂಥವರು ಇರುತ್ತಾರೆ.

ಡಾ. ವಿ. ಎಸ್. ಆಚಾರ್ಯ.— ನಾವು ವರದಕ್ಷಿಣೆಯನ್ನು ತೆಗೆದುಕೊಂಡಿಲ್ಲ.

ಶ್ರೀ ಹೆಚ್. ರಾಮಪ್ಪ.— ವರದಕ್ಷಿಣೆಯನ್ನು ನೇರವಾಗಿ ಕೇಳುವವರು ಇದ್ದಾರೆ. ಕೆಲವರು ಕೇಳದೆ ತೆಗೆದುಕೊಳ್ಳುವವರೂ ಇದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಆದರೆ ಈ ಶುಲ್ಕದ ಪದ್ಧತಿಯಿಂದ ನಮ್ಮ ಇಬ್ಬರು ಡಾಕ್ಟರಿಗೂ ಅನ್ಯಾಯವಾಗಿದೆ. ಅವರೂ ಕೂಡ ಶುಲ್ಕ ಪದ್ಧತಿಯಿಂದ ಬಂದಿರುವವರಾಗಿರುತ್ತಾರೆ. ಆದ್ದರಿಂದ ಏನಾಗುತ್ತದೆ ಎಂದರೆ ಗ್ರಾಮಾಂತರ ಪ್ರದೇಶಗಳಿಗೆ ಡಾಕ್ಟರುಗಳು ಬೇಕು ಎಂದು ಕೇಳುತ್ತಾರೆ. ಆರೋಗ್ಯ ಮಂತ್ರಿಗಳಿಗೆ ಅದರ ಬಗ್ಗೆ ಸಾಕಷ್ಟು ಅನುಭವ ಆಗಿರುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ವೈದ್ಯಕೀಯ ಕೇಂದ್ರಗಳಲ್ಲಿ ವೈದ್ಯರೇ ಇಲ್ಲವೆಂದು ಕೇಳುವುದು ಇದು ಮೊದಲಲ್ಲ. ಇದು ಅನೇಕ ಸಮಯದಿಂದಲೂ ಈ ಸದನದಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಬರುತ್ತಲೇ ಇದೆ. ಗ್ರಾಮಾಂತರ ಪ್ರದೇಶಗಳಿಗೆ ಹೋಗಲಿಕ್ಕೆ ಡಾಕ್ಟರುಗಳು ಮನಸ್ಸು ಮಾಡುವುದಿಲ್ಲ. ಏತಕ್ಕೆಂದರೆ ಹೆಚ್ಚಿನ ಜನರು

ಪಟ್ಟಣಗಳಲ್ಲಿರತಕ್ಕ ಖಾಸಗಿ ಕಾಲೇಜುಗಳಿಂದಲೇ ಬಂದಿರುವಂತಹವರಾಗಿರುತ್ತಾರೆ. ಪಟ್ಟಣ ಜನರು ಬಹಳವಾಗಿ ಪಟ್ಟಣಗಳಲ್ಲಿಯೇ ಇರಬೇಕೆಂದು ಬಯಸುತ್ತಾರೆ. ಅದರ ಪ್ರಕಾರ ಶ್ರೀಮಂತ ಪರಿಸರದಲ್ಲಿ ಬೆಳೆದಂಥ ಅವರಿಗೆ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಬಡತನ ಮತ್ತು ಗ್ರಾಮೀಣರ ಸಂಕಷ್ಟಗಳನ್ನು ನೋಡಲಿಕ್ಕೆ ಮನಸ್ಸು ಬರುವುದಿಲ್ಲ. ಆದ್ದರಿಂದ ಈ ಒಂದು ಶುಲ್ಕ ಪದ್ಧತಿ ವೈದ್ಯಕೀಯದಲ್ಲಿ ಇರಬಹುದು, ಅಥವಾ ಇಂಜಿನೀಯರಿಂಗ್‌ನಲ್ಲಿ ಇರಬಹುದು, ಅಥವಾ ಬೇರೆ ಬೇರೆ ವಿದ್ಯಾ ಕ್ಷೇತ್ರಗಳಲ್ಲಿ ಇರತಕ್ಕಂಥ ಶುಲ್ಕ ಪದ್ಧತಿಯನ್ನು ನಾವು ನಿಲ್ಲಿಸಬೇಕೆಂದು, ಅದರ ಬಗ್ಗೆ ಪ್ರಶ್ನೆ ಬಂದಾಗ ಕೆಲವು ಸಾರಿ ವಾದ ವಿವಾದಗಳನ್ನು ಮಾಡುತ್ತೇವೆ. ನಮ್ಮ ಕಾಲದಲ್ಲಿ ಪ್ರಾರಂಭವಾಯಿತು ಎನ್ನುವುದು ಪ್ರಶ್ನೆಯಲ್ಲ. All of us should give a decent burial to the Capitation fee. That is important. ಈ ಬಗ್ಗೆ ಇನ್ನೂ ಕೂಡ ವಾದವಿವಾದವನ್ನು ಮಾಡಿಕೊಂಡರೆ ಯಾರಿಗೂ ಪ್ರಯೋಜನವಿಲ್ಲ. ಇದರಿಂದ ಯಾರಿಗೆ ಪ್ರಯೋಜನವಾಗುತ್ತದೆ ಎಂದರೆ ಖಾಸಗಿ ವಿದ್ಯಾಸಂಸ್ಥೆಗಳ ಮಾಲೀಕರಿಗೆ ಬಹಳ ಹೆಚ್ಚಿನ ಪ್ರಯೋಜನವಾಗಿ ಈ ರೀತಿಯಾದ ಒಂದು ಶಿಕ್ಷಣ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗಬೇಕು ಎಂದು ಅವರು ಹೇಳುತ್ತಿರುತ್ತಾರೆ. ಪ್ರಾಸ್ತಾವಿಕವಾಗಿ ಇಷ್ಟು ಮಾತ್ರ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ವೈದ್ಯಕೀಯ ಕಾಲೇಜುಗಳು ಯಾವ ಸಂದರ್ಭದಲ್ಲಿ ಖಾಸಗಿಯಾಗಿ ಪ್ರಾರಂಭವಾದುವು ಎಂದು ಹೇಳಿದರೆ, ಸ್ವಲ್ಪ ನೆನಪು ಮಾಡಿಕೊಳ್ಳಬೇಕಾಗುತ್ತದೆ ಗುಲ್ಬರ್ಗಾದಲ್ಲಿ 1963ನೇ ಇಸವಿಯಲ್ಲಿ ಪ್ರಾರಂಭವಾಯಿತು ಬೆಳಗಾಂನಲ್ಲಿ 1963ನೇ ಇಸವಿಯಲ್ಲಿ ಪ್ರಾರಂಭವಾಯಿತು. ಈ ಎರಡು ಖಾಸಗಿ ವೈದ್ಯಕೀಯ ಕಾಲೇಜುಗಳು 1963ನೇ ಇಸವಿಯಲ್ಲಿ ಪ್ರಾರಂಭವಾದವು. ದಾವಣಗೆರೆಯಲ್ಲಿ 1965ನೇ ಇಸವಿಯಲ್ಲಿ ಪ್ರಾರಂಭವಾಯಿತು. ಅನಂತರ ಮಣಿಪಾಲ್‌ನಲ್ಲಿ 1953ನೇ ಇಸವಿಯಲ್ಲಿ ಪ್ರಾರಂಭವಾಯಿತು. ಬಹುಶಃ 1977ನೇ ಇಸವಿಯಲ್ಲಿ ಮಂಗಳೂರಿನಲ್ಲಿ ಒಂದು ಸೆಕ್ಷನ್ ಪ್ರಾರಂಭವಾಯಿತು ಎಂದು ಕಾಣುತ್ತದೆ. ಅಲ್ಲಿಂದ ಈಚೆಗೆ 1979ನೇ ಇಸವಿಯಲ್ಲಿ ಒಂದು ಖಾಸಗಿ ಕಾಲೇಜು ಪ್ರಾರಂಭವಾಯಿತು. ಆಮೇಲೆ 1980ನೇ ಇಸವಿಯಲ್ಲಿ ಮೂರು ಕಾಲೇಜುಗಳು ಪ್ರಾರಂಭವಾಯಿತು. 1963 ರಲ್ಲಿ ಎರಡು ಕಾಲೇಜುಗಳು ಪ್ರಾರಂಭವಾದರೆ 1983ನೇ ಇಸವಿಯಲ್ಲಿ ಮೂರು ಕಾಲೇಜುಗಳು ಪ್ರಾರಂಭವಾದವು. ಇದರಲ್ಲಿ ಇಂಥ ಮುಖ್ಯಮಂತ್ರಿಗಳು ಪ್ರಾರಂಭಮಾಡಿದರು, ಮತ್ತೊಬ್ಬರು ಪ್ರಾರಂಭ ಮಾಡಲಿಲ್ಲ ಎನ್ನುವ ಪ್ರಶ್ನೆ ಬರುವುದಿಲ್ಲ. ಮಾನ್ಯ ನಿಜಲಿಂಗಪ್ಪನವರ ಕಾಲದಲ್ಲಿ. ಮಾನ್ಯ ವೀರೇಂದ್ರ ಪಾಟೀಲ್‌ರವರ ಕಾಲದಲ್ಲಿಯೂ ಪ್ರಾರಂಭವಾಯಿತು. 1965ನೇ ಇಸವಿಯಲ್ಲಿ ಯಾರು ಮುಖ್ಯಮಂತ್ರಿಗಳಾಗಿದ್ದರೋ ನನಗೆ ಗೊತ್ತಿಲ್ಲ 1965ರಲ್ಲಿ ಶ್ರೀಮಾನ್ ವೀರೇಂದ್ರ ಪಾಟೀಲರ ಕಾಲದಲ್ಲಿ ಒಂದು, 1963ರಲ್ಲಿ ಎರಡು, 1975ನೇ ಇಸವಿಯಲ್ಲಿ ಒಂದು ಕಾಲೇಜು, 1983 ರಲ್ಲಿ ಮೂರು ಖಾಸಗಿ ಕಾಲೇಜುಗಳು ಪ್ರಾರಂಭವಾಯಿತು. ಆಯಾಯ ಕಾಲದಲ್ಲಿ ಖಾಸಗಿ ಕಾಲೇಜುಗಳನ್ನು ಕೊಡತಕ್ಕಂಥ ಸಂದರ್ಭದಲ್ಲಿ ವಾದವಿವಾದಗಳು ಆಗಿ ಜಸ್ಟಿಫಿಕೇಷನ್ ಬೇಕು ಎಂದು ಬಂದಿತು. ಜಸ್ಟಿಫಿಕೇಷನ್ ಆಯಾ ಕಾಲಕ್ಕೆ ಒಂದೊಂದು ಇದೆ. ಏತಕ್ಕೆಂದರೆ 1980ನೇ ಇಸವಿಯಲ್ಲಿ ವಾದ ಮಾಡುವಾಗ ಜಸ್ಟಿಫಿಕೇಷನ್ ಬೇಕು ಎಂದು ಹೇಳಿ ಒಕ್ಕಲಿಗರಿಗೆ ಒಂದು ಕಾಲೇಜೂ ಇಲ್ಲ. ಲಿಂಗಾಯಿತರಿಗೆ 2 3 ಕಾಲೇಜುಗಳು ಇರುವಾಗ ಒಕ್ಕಲಿಗರಿಗೆ ಒಂದು ಕಾಲೇಜನ್ನು ಏತಕ್ಕೆ ಕೊಡಬಾರದು ಎಂದು ಅವರಿಗೆ ಒಂದು ಕಾಲೇಜನ್ನು ಕೊಟ್ಟಿದ್ದು ಆಯಿತು. ಎಲ್ಲ ಮಂತ್ರಿಗಳೂ ಕೂಡ ಹೇಳುತ್ತಾರೆ. ನಮ್ಮ ಪಕ್ಷದಲ್ಲಿಯಾಗಲಿ ನಿಮ್ಮ ಪಕ್ಷದಲ್ಲಿಯಾಗಲಿ ಇದ್ದಾರೆಂದು ಹೇಳತಕ್ಕಂಥದ್ದಲ್ಲ. ಅವರವರ ದೃಷ್ಟಿಯಿಂದ ಸಾಮಾಜಿಕ ನ್ಯಾಯ ಬಂದಾಗ ಈ ವಾದವನ್ನು ಮಂಡಿಸುತ್ತಾ ಬಂದರು.

ಶ್ರೀ ರಾಮಕೃಷ್ಣ ಹೆಗಡೆ — ಮುಸ್ಲಿಂ ಬಾಂಧವರೂ ಕೂಡ ಕೇಳಿದರು. ಏತಕ್ಕೆ ಕೊಡಲಿಲ್ಲ ?

ಶ್ರೀ ಎಂ. ವೀರಪ್ಪ ಮೊಯಿಲಿ.— ಮುಸ್ಲಿಂ ಬಾಂಧವರಿಗೂ ಕೊಡಬೇಕು, ಹಿಂದುಳಿದ ವರ್ಗದವರಿಗೂ ಕೊಡಬೇಕೆನ್ನುವ ವಾದ ಇದೆ. ಅನಂತರ ಕುರುಬ ಜನಾಂಗದವರು ನಮಗೆ ಬೇಕೆಂದು ಕೇಳಿದರು. ಮೈನಾರಿಟೀಸ್‌ಗೆ, ಬ್ಯಾಕ್‌ವರ್ಡ್‌ಕ್ಲಾಸ್‌ಗೆ ಒಂದೊಂದು ಕಾಲೇಜು ಕೊಡಬೇಕೆಂದು ಯಾವಾಗ ಆಯಿತು ಆಗಿನಿಂದ ಪ್ರಾರಂಭವಾಯಿತು ಅಲ್ಲಿಯವರೆಗೆ ಹೆಸಿಟೇಷನ್ ಇರಲಿಲ್ಲ. ಈ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಏತಕ್ಕೆ ಕೊಡಬಾರದು ಎಂದು ಬಂದಾಗ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಒಂದು ಕಾಲೇಜು ಆಯಿತು. ಆದ್ದರಿಂದ ನಿರ್ದಿಷ್ಟವಾಗಿ ಆಯಾಯ ಸಂದರ್ಭದಲ್ಲಿ ಆಯಾಯ ಕಾಲಕ್ಕೆ ಒಂದೊಂದು ರೀತಿಯಲ್ಲಿ ಕೊಡುತ್ತಾ ಬಂದರು ಹಾಗೆಯೇ ಇಂಜಿನಿಯರಿಂಗ್ ಕಾಲೇಜ್‌ಗಳ ಇತಿಹಾಸವನ್ನು ಮರೆತುಬಿಡಬಾರದು ಇದು ಯಾವಾಗ ಪ್ರಾರಂಭವಾಯಿತು, ವಿಶೇಷವಾಗಿ ಯಾರ ಕಾಲದಲ್ಲಿ ಆಯಿತು ಪಟ್ಟಿಯನ್ನು ನೋಡಿ ಎನ್ನುವುದು ಪ್ರಶ್ನೆಯಲ್ಲ ಇಂಜಿಯರಿಂಗ್ ಕಾಲೇಜುಗಳು ಕೂಡ ತಮಗೆ ಗೊತ್ತಿರುವ ಹಾಗೆ, ಈಗ ನಮ್ಮ ರಾಜ್ಯದಲ್ಲಿ ಸುಮಾರು 39 ಇಂಜಿನೀಯರಿಂಗ್ ಕಾಲೇಜುಗಳು ಇವೆ. ಡಿಪ್ಲೊಮಾ ಕೋರ್ಸಿನ ಸಂಸ್ಥೆಗಳೂ ಸೇರಿದಂತೆ ಒಟ್ಟು 44 ಕಾಲೇಜುಗಳಿವೆ. 1947ರ ಮೊದಲು ಎರಡು ಸರ್ಕಾರಿ ಕಾಲೇಜುಗಳಿದ್ದುವು ಎರಡು ಏಡೆಡ್ ಕಾಲೇಜುಗಳಿದ್ದವು. ನಂತರ 1947 ರಿಂದ 1956 ರವರೆಗೆ ಒಂದು ಸರ್ಕಾರಿ ಕಾಲೇಜು ಮತ್ತು ಒಂದು ಏಡೆಡ್ ಕಾಲೇಜು ಪ್ರಾರಂಭವಾದವು. 1956 ರಿಂದ 1970 ರವರೆಗೆ ಒಂದು

ಸರ್ಕಾರಿ ಕಾಲೇಜು, 5 ಏಡೆಡ್ ಕಾಲೇಜುಗಳು ಹಾಗೂ 4 ಖಾಸಗಿ ಕಾಲೇಜುಗಳು ಪ್ರಾರಂಭವಾದವು. ಅದೇ ರೀತಿ 1972 ರಿಂದ 1980 ರವರೆಗೆ 9 ಖಾಸಗಿ ಕಾಲೇಜುಗಳು ಪ್ರಾರಂಭವಾದವು. 1980 ರಿಂದ 1982 ರವರೆಗೆ 14 ಕಾಲೇಜುಗಳು ಪ್ರಾರಂಭವಾದವು. ಕಾಂಗ್ರೆಸ್ ಪಕ್ಷದ ಸರ್ಕಾರವಿದ್ದಾಗ ಇವು ಪ್ರಾರಂಭವಾಗಿರಬಹುದು. ಆದರೆ ಆ ಕಡೆಯ ಕೆಲವು ಮಾನ್ಯ ಸದಸ್ಯರು ಕಾಂಗ್ರೆಸ್ ಪಕ್ಷದಲ್ಲಿದ್ದಾಗಲೇ ಖಾಸಗಿ ಕಾಲೇಜುಗಳನ್ನು, ಏಡೆಡ್ ಕಾಲೇಜುಗಳನ್ನು ಹಾಗೂ ಅನ್–ಏಡೆಡ್ ಕಾಲೇಜುಗಳನ್ನು ತೆರೆಯಲು ಅನುಮತಿ ಕೊಟ್ಟಿದ್ದುಂಟು. ಈ ಕ್ಯಾಪಿಟೇಷನ್ ಶುಲ್ಕವನ್ನು ಖಾಸಗಿ ಕಾಲೇಜುಗಳಲ್ಲಿ ವಸೂಲಿ ಮಾಡತಕ್ಕಂಥ ಒಂದು ಪದ್ಧತಿ ನಮ್ಮ ರಾಜ್ಯದಲ್ಲಿ ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿದೆ. ಇದನ್ನು ನಿಲ್ಲಿಸತಕ್ಕಂಥ ಒಂದು ಪ್ರಯತ್ನ ಕೂಡ ನಡೆದಿದೆ. ಈ ಕ್ಯಾಪಿಟೇಷನ್ ಶುಲ್ಕವನ್ನು ನಿಲ್ಲಿಸಬೇಕು ಮತ್ತು ಈ ಖಾಸಗಿ ಕಾಲೇಜುಗಳ ಮೇಲೆ ಒಂದು ಹತೋಟಿ ಹಾಗೂ ನಿಯಂತ್ರಣ ಸರ್ಕಾರಕ್ಕೆ ಇರಬೇಕು ಎಂಬತಕ್ಕಂಥ ಒಂದು ಪ್ರಯತ್ನ ದಿವಂಗತ ದೇವರಾಜ ಅರಸ್ ಅವರ ಕಾಲದಲ್ಲಿ ಅಂದರೆ 1974-75ರಲ್ಲಿ ಪ್ರಾರಂಭವಾಯಿತು. ಸೀಟ್‌ಗಳನ್ನು ಈ ಖಾಸಗೀ ಕಾಲೇಜುಗಳಲ್ಲಿ ಅಡ್ಮಿಷನ್ ಕಾಲದಲ್ಲಿ ಇಷ್ಟೇ ಎಂದು ನಿಯಂತ್ರಣದಲ್ಲಿಡಬೇಕು, ಮೆರಿಟ್ ಪ್ರಕಾರ ಕೊಡಬೇಕು, ಹರಿಜನ ಮತ್ತು ಗಿರಿಜನರಿಗೆ ಹಾಗೂ ಅಲ್ಪ ಸಂಖ್ಯಾತರಿಗೆ ಇಂತಿಷ್ಟು ಸೀಟ್‌ಗಳನ್ನು ಕಾಯ್ದಿಡಬೇಕು ಎಂಬತಕ್ಕಂಥ ಒಂದು ಪ್ರಯತ್ನ ದಿವಂಗತ ದೇವರಾಜ ಅರಸ್ ಅವರ ಕಾಲದಲ್ಲಿ ನಡೆಯಿತು ಮತ್ತು ಅದು ಸಾಕಷ್ಟು ಯಶಸ್ವಿ ಕೂಡ ಆಯಿತು. ಆ ಒಂದು ಸಂದರ್ಭದಲ್ಲಿ ಈ ಬಗ್ಗೆ ಮಂತ್ರಿಗಳ ಮತ್ತು ಕಾಲೇಜಿನವರ ಮಧ್ಯೆ ಇಲ್ಲವೇ ಸರ್ಕಾರದ ಮಧ್ಯೆ ಸಂಘರ್ಷವಾದರೂ ಕೂಡ ಹೆಚ್ಚಿನ ಒಂದು ಪಾಲನ್ನು ಸರ್ಕಾರ ಪಡೆದಿದ್ದನ್ನು ನಾವೆಲ್ಲರೂ ಕಂಡಿದ್ದೇವೆ. ಆದರೂ ಸಹ ಮಾನ್ಯ ಮಂತ್ರಿಗಳು ಕಳೆದ ಬಾರಿ ಮಾತನಾಡುವಾಗ ನಮ್ಮ ಕಾಲದಲ್ಲಿ ಇದನ್ನು ನಿಯಂತ್ರಣ ಮಾಡಲು ಎಕ್ಸಿಕ್ಯುಟಿವ್ ಆರ್ಡರ್ ಮೂಲಕ ಪ್ರಯತ್ನ ನಡೆಸಲಾಯಿತು ಹಾಗೂ ಇದನ್ನು ನಿಷೇಧ ಮಾಡಲು ನಿಮಗೆ ಮನಸ್ಸು ಇರಲಿಲ್ಲ ಎಂದು ಒಂದು ರೀತಿಯ ಆಪಾದನೆ ಮಾಡಿದರು. ಆದರೆ ತಾವು ಈ ಆಪಾದನೆ ಮಾಡುವುದಕ್ಕೆ ಮೊದಲು ಒಂದು ವಿಚಾರವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಏನೆಂದರೆ, ಈ ಎಕ್ಸಿಕ್ಯುಟಿವ್ ಆರ್ಡರ್ ಮೂಲಕ 1973-74 ರಿಂದ ಹಿಡಿದು ನಮ್ಮ ಸರ್ಕಾರ ಅಧಿಕಾರದಲ್ಲಿರುವವರೆಗೂ ಸಹ ಸಿಂಹಪಾಲಿನ ಸೀಟುಗಳನ್ನು ಸರ್ಕಾರ ಪಡೆಯುವುದರಲ್ಲಿ ಯಶಸ್ವಿಯಾಯಿತು. ಈ ಮಾತನ್ನು ಮಾತ್ರ ತಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಈ ರೀತಿ ಪಡೆದಂಥ ಸೀಟ್‌ಗಳನ್ನು ರಿಜರ್ವೇಷನ್ ಮೂಲಕ ಹಾಗೂ ಮೆರಿಟ್ ಮೂಲಕ ಹಂಚುವಂತಹ ಒಂದು ಕಾರ್ಯಕ್ರಮ ಯಶಸ್ವಿಯಾಯಿತು. ಕಳೆದ ಒಂದು ದಶಕದಿಂದ ಈ ಒಂದು ಪ್ರಯೋಗ ಚೆನ್ನಾಗಿ ನಡೆಯುತ್ತಿದೆ ಎಂಬ ಸತ್ಯಸಂಗತಿಯನ್ನು ಮರೆಮಾಚುವುದಕ್ಕೆ ಸಾಧ್ಯವಾಗುವುದಿಲ್ಲ. ಕೆಲವರು ಈ ಎಕ್ಸಿಕ್ಯುಟಿವ್ ಆರ್ಡರನ್ನು ಕೋರ್ಟಿನಲ್ಲಿ ಛಾಲೆಂಜ್ ಮಾಡಿರಬಹುದು. ಆದರೆ ಈ ಒಂದು ನಿಯಂತ್ರಣದ ಮೂಲಕ ಪಡೆದಂಥ ಸೀಟ್‌ಗಳನ್ನು ಕೆಲವು ವರ್ಗದ ವಿದ್ಯಾರ್ಥಿಗಳಿಗೆ ಹಂಚುವುದರ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಅನುಕೂಲವನ್ನು ಕಲ್ಪಿಸಿಕೊಡಲಾಯಿತು ಮತ್ತು ಈ ಒಂದು ಪ್ರಯೋಗ ಸಂಪೂರ್ಣವಾಗಿ ಯಶಸ್ವಿಯಾಯಿತು ಎಂಬುದನ್ನು ಮಾತ್ರ ಈ ಸಂದರ್ಭದಲ್ಲಿ ಖಂಡಿತವಾಗಿ ನಾವು ಮರೆಯುವಂತಿಲ್ಲ. ಮಾನ್ಯ ಮಂತ್ರಿಗಳು ತಾರೀಖು 5-9-1981ರ ಎಕ್ಸಿಕ್ಯುಟಿವ್ ಆರ್ಡರನ್ನು ದಯಮಾಡಿ ಪರಾಂಬರಿಸಬೇಕು. ಈ ಒಂದು ಎಕ್ಸಿಕ್ಯುಟಿವ್ ಆರ್ಡರ್ ಮೂಲಕ ಬಹುಶಃ ಅತ್ಯಂತ ಸೂಕ್ಷ್ಮವಾದಂಥ ಈ ಶುಲ್ಕ ಪದ್ಧತಿಯನ್ನು ಕೊನೆಗಾಣಿಸಬೇಕು ಹಾಗೂ ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ವಿದ್ಯಾರ್ಥಿವೃಂದಕ್ಕೆ ಒದಗಿಸಿಕೊಡಬೇಕು ಎಂದು ನಾವು ಯಾವ ಒಂದು ಸೂತ್ರವನ್ನು ಈ ಆರ್ಡರ್‌ನಲ್ಲಿ ಅಳವಡಿಸಿದ್ದೇವೆ, ಇದರಲ್ಲಿ ....

ಶ್ರೀ ಬಿ. ರಾಚಯ್ಯ.—ಅದರಲ್ಲಿ ಆ ಒಂದು ಸೂತ್ರವಿದ್ದರೂ ಸಹ ಅದು ಕಾರ್ಯಗತವಾಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ಅದು ಕಾರ್ಯಗತವಾಗಿದೆ. Of course to the extent of the abolition of capitation fee that must have been challenged in the Court. ಈ ಎಕ್ಸಿಕ್ಯುಟಿವ್ ಆರ್ಡರ್‌ನಲ್ಲಿ 3 ವಿಚಾರಗಳನ್ನು ಕಾಣಿಸಿದ್ದೇವೆ. ಮೊದಲನೆಯ ವಿಚಾರವೆಂದರೆ, ಯಾವ ಯಾವ ಖಾಸಗಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳು 5 ವರ್ಷಗಳಿಂದ ನಡೆದುಕೊಂಡು ಬಂದಿವೆಯೋ ಅವುಗಳು ತಮ್ಮ ಕಾಲಮೇಲೆ ತಾವು ನಿಲ್ಲಬಲ್ಲವು, ಆದ್ದರಿಂದ ಇಂತಹ ಕಾಲೇಜುಗಳಲ್ಲಿ ಹೆಚ್ಚು ಸೀಟ್‌ಗಳನ್ನು ಕೊಡಬೇಕಾಗಿಲ್ಲ ಮತ್ತು ಹಂತಹಂತವಾಗಿ ಈ ಕಾಲೇಜುಗಳಿಂದ ಸೀಟ್‌ಗಳನ್ನು ಪಡೆದು ಈ ಒಂದು ಶುಲ್ಕ ಪದ್ಧತಿಯನ್ನು ಅತಿ ಬೇಗನೆ ತೆಗೆದುಹಾಕಬೇಕು ಎಂಬ ವಿಚಾರವನ್ನು ಇಲ್ಲಿ ಕಾಣಿಸಿದ್ದೇವೆ. ಎರಡನೆಯ ವಿಚಾರವೆಂದರೆ, 5 ವರ್ಷಗಳಿಗಿಂತ ಕಡಿಮೆ ಅಂದರೆ 3 ರಿಂದ 5 ವರ್ಷಗಳವರೆಗೆ ನಡೆಸಿರುವಂತಹ ಕಾಲೇಜುಗಳು ಏನಿವೆ, ಇವು ಪೂರ್ತಿಯಾಗಿ ತಮ್ಮ ಕಾಲ ಮೇಲೆ ತಾವು ನಿಲ್ಲುವವರೆಗೆ ಅಂದರೆ 5 ವರ್ಷಗಳವರೆಗೆ ನಡೆಸಲು ಅನುಕೂಲ ಮಾಡಿಕೊಡುವುದು ಹಾಗೂ ಇತ್ತೀಚೆಗೆ ಪ್ರಾರಂಭವದಂಥ ಕಾಲೇಜುಗಳಿಗೆ ಹೆಚ್ಚಿನ ಒಂದು ಪ್ರೋತ್ಸಾಹ ಕೊಡವಂತಹ ಒಂದು ನೀತಿಯನ್ನು ಈ ಎಕ್ಸಿಕ್ಯುಟಿವ್ ಆರ್ಡರ್‌ನಲ್ಲಿ ಕಾಣಿಸಿದ್ದೇವೆ. ಆದರೆ ನೀವು ಈ ಒಂದು ಸೂತ್ರ

ವನ್ನು ಬದಲಾವಣೆ ಮಾಡಿ, ಈ ಖಾಸಗಿ ಕಾಲೇಜುಗಳು ಪ್ರಾರಂಭವಾಗಿ 20 ವರ್ಷಗಳ ಮೇಲಾಗಿರಲಿ, 5 ವರ್ಷಗಳ ಮೇಲಾಗಿರಲಿ ಅಥವಾ ಇತ್ತೀಚಿಗೆ ಪ್ರಾರಂಭವಾಗಿರಲಿ, ಎಲ್ಲ ಕಾಲೇಜುಗಳನ್ನು ಒಂದೇ ರೀತಿಯಲ್ಲಿ ನೋಡತಕ್ಕಂಥ ಸೂತ್ರವನ್ನು ಈ ಮಸೂದೆಯಲ್ಲಿ ಅಳವಡಿಸಿದ್ದೀರಿ. ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ಕೊಡತಕ್ಕಂಥ ಮನಸ್ಸು ಉಳ್ಳವರು ಈ ರೀತಿ ಮಾಡುವುದಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಬಿ ರಾಚಯ್ಯ.- ಈ ಎಕ್ಸಿಕ್ಯುಟಿವ್ ಆರ್ಡರ್ ಮೂಲಕ ಇಂಜಿನಿಯರಿಂಗ್ ಕಾಲೇಜುಗಳಿಂದ ಯಾವ ಸೀಟುಗಳನ್ನೂ ಹಚ್ಚಿಗೆ ತೆಗೆದುಕೊಂಡಿಲ್ಲ. ಆದರೆ ಮೆಡಿಕಲ್ ಕಾಲೇಜುಗಳಿಗೆ ಸರ್ಕಾರ ಕ್ಲಿನಿಕಲ್ ಫೆಸಿಲಿಟೀಸ್‌ನ್ನು ಕೊಡುತ್ತಿರುವುದರಿಂದ they were obliged to give these seats to merit pool.

Sri M. Veerappa Moily.— Whether they have applied or not, the executive order was implimented. I am speaking ab ut the Medical colleges. M,S. Ramaiah Medical College, Kempegowda Institute of Medical Sciences, and Dr Ambedkar Medical College ಈ ಮೂರು ಮೆಡಿಕಲ್ ಕಾಲೇಜುಗಳು ಇನಿವೆ, ಇಲ್ಲಿ 1981-82 ರಲ್ಲಿ ಕೂಡ ಇವುಗಳ ದಾಖಲಾತಿ 100 ಇದ್ದರೆ, the number of seats to be allotted by the management is ten even for these recently formed colleges, number of seats to be allotted by the Government is 10, the number of seats to be allotted on merrit-cum-reservation pool is 25, the number of seats to be allotted by a Committee constituted by the Government to the students of Karnataka on payment of special tution fee of Rs. 60,000/- is 5 and the number of seats to be allotted by the Committee constituted by Government on payment of Rs. 1.60 lakhs is 50. 1981-82 ರಲ್ಲಿ ಈ ಪ್ರಕಾರ ಸೀಟ್‌ಗಳನ್ನು...

ಶ್ರೀ ವಿ. ಎಸ್. ಆಚಾರ್ಯ —ಆ ರೀತಿಯ ಒಂದು ಆಜ್ಞೆ ಇರಬಹುದು. ಆದರೆ 1982-83ರಲ್ಲಿ ತಾವು ಹೇಳಿದ ಪ್ರಕಾರ ಜಾರಿಗೆ ಬಂದಿಲ್ಲ. ಈ ಮೂರು ಕಾಲೇಜುಗಳಿಂದ ಸರ್ಕಾರಕ್ಕೆ ಒಂದು ಸೀಟ್ ಸಹ ಸಿಕ್ಕಲಿಲ್ಲವೆಂದು ಇದರಲ್ಲಿ ಕಾಣಿಸಿದ್ದಾರೆ.

Sri M Veerappa Moily — That is not exactly correct.

ಶ್ರೀ ಪಿ.ಜಿ.ಆರ್. ಸಿಂಧ್ಯಾ.— ಸ್ವಾಮಿ, ಈಗ ಮೂರು ಪ್ರೈವೇಟ್ ಕಾಲೇಜುಗಳನ್ನು ಬಿಟ್ಟು ಅಂದರೆ ಇಂಡಿಯನ್ ಮೆಡಿಕಲ್‌ಕೌನ್ಸಿಲ್ ರೆಕಾಗ್ನೈಸ್ ಮಾಡದೇ ಇರತಕ್ಕಂಥ ಕಾಲೇಜುಗಳನ್ನು ಬಿಟ್ಟು ಇನ್ನು ಉಳಿದ ಕಾಲೇಜುಗಳಲ್ಲಿ ನಾವು ಸರ್ಕಾರಿ ಡಿಸ್ಕ್ರಿಷನರಿ ಕೋಟದ 10 ಸೀಟುಗಳು ಏನು ಇವೆ ಆ 10 ಸೀಟುಗಳನ್ನು ಬಿಟ್ಟು ಇನ್ನು ಉಳಿದ 25 ಸೀಟುಗಳನ್ನು ನಾವು ಸೆಲೆಕ್ಷನ್ ಕಮಿಟಿಗೆ ಕೊಟ್ಟಿದ್ದೇವೆ. ಆದರೆ ಈ 10 ಸೀಟುಗಳನ್ನು ಮಾತ್ರ ತಾವು 1981 ರಿಂದ 1983ರವರೆಗೆ ತೆಗೆದುಕೊಂಡಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.— ಸ್ವಾಮಿ, ನಾನು ಈಗ ಹೇಳುವುದೇನೆಂದರೆ 1982-83ರಲ್ಲಿ ಒಂದು ಗೌರ್ನಮೆಂಟ್ ಆರ್ಡರ್ ಇಷ್ಯೂ ಆಯಿತು. ಆ ಸಂಬಂಧವಾಗಿ ಹೈಕೋರ್ಟಿಗೆ ರಿಟ್ ಅರ್ಜಿಯನ್ನು ಸಲ್ಲಿಸಿ ಕೋರ್ಟಿನಲ್ಲಿ ಸ್ಟೇ ಆರ್ಡರ್ ಆಯಿತು. ಆದರೆ ಆ ಬಗ್ಗೆ ನನಗೆ ಡಿಟೇಲ್ಸ್ ಗೊತ್ತಿಲ್ಲ. ಈ ಮೆಡಿಕಲ್ ಕಾಲೇಜುಗಳಲ್ಲಿ ಹಂತ ಹಂತವಾಗಿ ಸರ್ಕಾರದವರು ಇಟ್ಟುಕೊಂಡಿರತಕ್ಕಂಥ ಸೀಟುಗಳು ಮೆರಿಟ್ ಕಮ್ ರಿಸರ್ವೇಷನ್‌ಗೆ ಹೋಗಬೇಕು. ಈಗ 1983-84ನೇ ಸಾಲಿನಲ್ಲಿ ತಾವು 45 ಸೀಟುಗಳನ್ನು ಸೃಷ್ಟಿ ಮಾಡಿದ್ದೀರಿ, ಈ ಬಗ್ಗೆ ರೆಕಾರ್ಡ್‌ನಲ್ಲಿ ಕೂಡ ನಾನು ನೋಡಿದ್ದೇನೆ. ಆದರೆ ಇಷ್ಟರ ಮಟ್ಟಿಗೆ ಖಾಸಗಿ ಕಾಲೇಜಿನಲ್ಲಿ ನಡೆಯುವುದಕ್ಕೆ ಸಾಧ್ಯವಿದೆಯೇ? ಈಗ ಈ ಒಂದು ಆಧಾರದ ಮೇಲೆ ಅವರು ಕೋರ್ಟಿಗೆ ಹೋಗಿರಬೇಕು. ಅದ್ದರಿಂದ ಶಿಕ್ಷಣ ಮಸೂದೆಯನ್ನು ತಂದಾಗ ಇದನ್ನು ವಿವರವಾಗಿ ಆ ಮಸೂದೆಯಲ್ಲಿ ಅಳವಡಿಸಬೇಕು. ತಾವು ಈ ವರ್ಷ 20 ಪರ್ಸೆಂಟ್ ಜಾಸ್ತಿ ಮಾಡಿದೀರಿ. ಅಂದರೆ 1983-84ನೇ ಸಾಲಿನಲ್ಲಿ ಶೇಕಡ 45 ಸೀಟುಗಳು ಬರುವುದಕ್ಕೆ ಅವಕಾಶ ಇರುವಂಥ ಸಂದರ್ಭದಲ್ಲಿ ಖಾಸಗೀ ಕಾಲೇಜಿನವರು ಇದನ್ನು ಒಪ್ಪಿಕೊಳ್ಳುವದಕ್ಕೆ ತೊಂದರೆಯಾಗುತ್ತದೆ. ಈಗ ಸರ್ಕಾರದವರು 100ಕ್ಕೆ 20 ಸೀಟುಗಳನ್ನು ತೆಗೆದುಕೊಂಡಂತೆ ಆಗುತ್ತದೆ. ಆದರೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಆ ರೀತಿ ಮಾಡಿಲ್ಲ. ಆದರೆ ತಾವು ಇದನ್ನು ಯಾವ ರೀತಿಯಲ್ಲಿ ಲೆಕ್ಕಾಚಾರ ಮಾಡುತ್ತೀರಿ? ಸುಮಾರು 25 ಸೀಟುಗಳನ್ನು ಖಾಸಗೀ ಕಾಲೇಜಿನವರಿಂದ ಪಡೆಯತಕ್ಕಂಥ ವಿಚಾರದ ಬಗ್ಗೆ ನಾನು ಪ್ರಸ್ತಾಪ ಮಾಡಬಯಸುತ್ತೇನೆ. ಸರ್ಕಾರಿ ಆರ್ಡರ್ ಇಷ್ಯೂ ಆದ ಮೇಲೆ ಇದರಿಂದ ಹೆಚ್ಚಿ ಖಾಸಗೀ ಕಾಲೇಜುಗಳವರು ಲಾಭ ಮಾಡಿಕೊಳ್ಳುವುದಕ್ಕೆ ಅವಕಾಶ ಆಗಿದೆ. ಇದರಿಂದ ನ್ಯಾಯ ಎಲ್ಲಿಂದ ದೊರೆಯುತ್ತದೆ?

ಶ್ರೀ ವಿ.ಎಸ್. ಆಚಾರ್ಯ.— ಕಳೆದ ವರ್ಷ 20 ಸೀಟುಗಳಲ್ಲಿ 10 ಸರ್ಕಾರಿ ಸೀಟುಗಳು ಒಟ್ಟು 30 ಸೀಟುಗಳನ್ನು ಕೊಟ್ಟಿದ್ದಾರೆ. ಆದರೆ ಇದುವರೆಗೂ ಫೈನಲ್ ಲಿಸ್ಟ್ ಕೊಡಲಿಲ್ಲ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು...............

ಶ್ರೀ ಪಿ.ಜಿ.ಆರ್. ಸಿಂಧ್ಯಾ.— ಸ್ವಾಮಿ, 1983–84ನೇ ಸಾಲಿನಲ್ಲಿ ಟೋಟಲ್ ಸೀಟುಗಳನ್ನು ಸೆಲೆಕ್ಷನ್ ಕಮಿಟಿಗೆ ಕಳುಹಿಸಿಕೊಟ್ಟಿದ್ದೆವು. ಅವರು ಮೆರಿಟ್ ಕಮ್ ರಿಜರ್‌ವೇಷನ್ ಪ್ರಕಾರ ಮಾಡಿದ್ದಾರೆ. ಆ ಸೆಲೆಕ್ಷನ್ ಕಮಿಟಿಗೆ ಡೈರೆಕ್ಟರ್ ಆಫ್ ಮೆಡಿಕಲ್ ಎಜುಕೇಶನ್, ಅಧ್ಯಕ್ಷರಾಗಿರುತ್ತಾರೆ. ಇದರಲ್ಲಿ ಪ್ರೈವೇಟ್ ಮೆಡಿಕಲ್ ಕಾಲೇಜುಗಳಿಂದ 56 ಸೀಟುಗಳನ್ನು 1981 ರಿಂದ 1983ರವರೆಗೆ ತೆಗೆದುಕೊಂಡಿದ್ದೀರಿ. ಮತ್ತೆ 30 ಸೀಟುಗಳನ್ನು ಸರ್ಕಾರ ಇಟ್ಟುಕೊಂಡಿತ್ತು. ಆದರೆ ಈ ಸಾರಿ ನಾವು ಅದನ್ನು ಸಹ ಮೆರಿಟ್ ಕಮ್ ರಿಜರ್‌ವೇಶನ್ ಕೊಟ್ಟಿದ್ದೇವೆ...............

ಶ್ರೀ ಎಂ. ವೀರಪ್ಪ ಮೊಯಿಲಿ. – ಮಾನ್ಯ ಅಧ್ಯಕ್ಷರೇ, ನಾನು ಹೇಳುವುದೇನೆಂದರೆ ಎಲ್ಲಾ ಕಾಲೇಜುಗಳಿಗೂ ಕೂಡ ಇವರು ಒಂದೇ ತರಹ ಸೀಟುಗಳನ್ನು ಕೊಟ್ಟಿದ್ದಾರೆ. ಮತ್ತೆ ಎಲ್ಲಾ ಕಾಲೇಜುಗಳಲ್ಲಿ ಕೂಡ ಒಂದೇ ತರಹ ಸೀಟುಗಳನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ.— ಮಾನ್ಯ ಅಧ್ಯಕ್ಷರೇ, ನಾವು ಈಗ ಮೂರು ಕಾಲೇಜುಗಳಲ್ಲಿ ಅಂದರೆ ಕೆಂಪೇಗೌಡ ಮೆಡಿಕಲ್ ಕಾಲೇಜಿನಲ್ಲಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಮೆಡಿಕಲ್ ಕಾಲೇಜಿನಲ್ಲಿ ಹಾಗೂ ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜಿನಲ್ಲಿ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ರೆಕಾಗ್ನೈಸ್ ಮಾಡದೇ ಇರುವುದರಿಂದ ಲಾಸ್ಟ್ ಇಯರ್ ಫಿಕ್ಸ್ ಮಾಡಿದ ಸೀಟುಗಳನ್ನು ತೆಗೆದುಕೊಂಡಿದ್ದೆವು, ಆದರೆ 1982–83ನೇ ಸಾಲಿನಲ್ಲಿ ಏನು ಅಡ್ಮಿಷನ್ ಇದ್ದವು ಅದನ್ನು ಇನ್‌ಟೇಕ್ ಮಾಡಿ ಕಂಟಿನ್ಯೂ ಮಾಡಿದ್ದೇವೆ. ಮತ್ತೆ 1982–83ನೇ ಸಾಲಿನಲ್ಲಿ ಗೌರ್ನಮೆಂಟ್ ಡಿಸ್ಕ್ರಿಷನರಿ ಖೋಟ 10 ಸೀಟುಗಳನ್ನು ನಾವು ತೆಗೆದುಕೊಂಡಿದ್ದೇವೆ. ಮತ್ತೆ ಇನ್ನು 20ಪರ್ಸೆಂಟ್ ಸೀಟುಗಳನ್ನು ನಾವು ಗೌರ್ನಮೆಂಟ್ ಸೆಲೆಕ್ಷನ್ ಕಮಿಟಿಗೆ ಕೊಟ್ಟಿದ್ದೆವು. ಆದರೆ ನಾವು ಹೆಚ್ಚು ಮಾಡಿರತಕ್ಕಂಥ ಪ್ರಶ್ನೆ ಬರುವುದಿಲ್ಲ. ಅದೇ ರೀತಿಯಲ್ಲಿ ದಾವಣಗೆರೆ ಮೆಡಿಕಲ್ ಕಾಲೇಜಿನಲ್ಲಿ ಕೂಡ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನಲ್ಲಿ 15 ಸೀಟುಗಳನ್ನು ಹೆಚ್ಚು ಮಾಡಿದ್ದಾರೆ. ಅದು ಬಿಟ್ಟು ಇನ್ನು ಯಾವುದೇ ಕಾಲೇಜಿನಲ್ಲಿ ನಾವು ಸೀಟುಗಳನ್ನು ಹೆಚ್ಚು ಮಾಡಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ. – ನಾನು ಆ ವಿಚಾರದ ಬಗ್ಗೆ ಹೇಳುತ್ತಿಲ್ಲ. ಆದರೆ ಖಾಸಗೀ ಕಾಲೇಜುಗಳಲ್ಲಿ ಯಾವ ರೀತಿಯಲ್ಲಿ ಮಾಡುತ್ತಾರೆಂದು ನಮ್ಮ ವಾದ. ಈಗ ಸುಮಾರು 5 ವರ್ಷಗಳಲ್ಲಿ ಕ್ಯಾಪಿಟೇಷನ್ ಫೀಜು ಬಿಟ್ಟುಬಿಡುತ್ತೇವೆಂದು ತಾವು ಹೇಳುತ್ತಿದ್ದೀರಿ. ಆದರೆ ಆ 5 ವರ್ಷಗಳಿಗಿಂತ ಮೊದಲೇ ಬಿಟ್ಟುಬಿಡುವುದಕ್ಕೂ ಕೂಡ ನಿಮಗೆ ಅಧಿಕಾರ ಇದೆ ಯಾವ ರೀತಿಯಲ್ಲಿ ಮಾಡಬೇಕು ಎನ್ನುವುದು ಸರ್ಕಾರಕ್ಕೆ ಗೊತ್ತಿದೆ. ಅದೇ ರೀತಿಯಲ್ಲಿ, ಯಾವ ರೀತಿಯಲ್ಲಿ ಶುಲ್ಕವನ್ನು ವಸೂಲು ಮಾಡಬೇಕು ಎಂಬುದೂ ಕೂಡ ಗೊತ್ತಿದೆ, ಆದರೆ ಸೀಟುಗಳ ವಿತರಣೆ ಮಾಡುವಂಥ ಸಂದರ್ಭದಲ್ಲಿ ಕೂಡ ನಾನು ಹೇಳಿಕೆಯನ್ನು ಕೊಟ್ಟು ನಾನು ಹೇಳಬೇಕಾದುದನ್ನು ಹೇಳಿದ್ದೇನೆ. ಆದರೆ ಈಗ ಇದು ಸಾಮಾನ್ಯ ಜನರಿಗೆ ಒಂದು ರೀತಿಯಲ್ಲಿ ತೊಂದರೆಯನ್ನುಂಟು ಮಾಡುವಂಥ ಮಸೂದೆಯಾಗಿದೆ. ಆದರೆ ಇವತ್ತು ನಾನ್ ರೆಕರಿಂಗ್ ಚಾರ್ಜಸ್ ಕಡಿಮೆ ಇದೆ ರೆಕರಿಂಗ್ ಎಕ್ಸ್‌ಪೆನ್ಸಸ್ ತಮಗೆ ಎಷ್ಟು ಬೇಕು? ಈಗ ಅವರು ಕ್ಯಾಪಿಟೇಷನ್ ಫೀಜು ವಸೂಲು ಮಾಡಿಕೊಂಡು ಅವರಿಗೆ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ಅವರು ಎಕ್ವಿಪ್‌ಮೆಂಟ್ ಇತ್ಯಾದಿಗಳಿಗೆ ಇಟ್ಟುಕೊಳ್ಳುತ್ತಾರೆ. ಆದ್ದರಿಂದ ಹಿಂದಿನ ಸರ್ಕಾರ ಇದನ್ನು ಯೋಚನೆ ಮಾಡಿತ್ತು. ಮತ್ತೆ ಈ ಬಗ್ಗೆ ಕೂಲಂಕುಷವಾಗಿ ಒಂದು ವಿಚಾರವಿನಿಮಯ ಮಾಡಲು ಒಂದು ಫ್ಯಾಕ್ಟ್ ಫೈಂಡಿಂಗ್ ಕಮಿಟಿಯನ್ನು ನೇಮಕ ಮಾಡಿ ಅವರು ಒಂದು ಲೆಕ್ಕಾಚಾರ ಹಾಕಿ ಸರ್ಕಾರಕ್ಕೆ ತಮ್ಮ ವರದಿಯನ್ನು ಕೊಡಲಿ. ಆಗ ತಾವು ಆಯಾಯಾ ಮೆಡಿಕಲ್ ಕಾಲೇಜುಗಳಿಗೆ ಇಂತಿಷ್ಟು ಹಣವೆಂದು ಕೊಡಿ. ಈಗಾಗಲೇ ಇದರ ಬಗ್ಗೆ ಹೈಕೋರ್ಟಿನಲ್ಲಿ ಚರ್ಚೆಯಾಗುತ್ತಿದೆ. ಗೌರ್ನಮೆಂಟ್ ಖೋಟ ತೆಗೆದುಕೊಂಡಿರುವುದು ಸ್ವಾಗತಾರ್ಹ. ಮತ್ತೆ ಸರ್ಕಾರಿ ಖೋಟ ಮೀರಿ ನೀವು ಸೀಟುಗಳನ್ನು ಕೊಟ್ಟಿದ್ದೀರಿ. ಆ ಬಗ್ಗೆ ತನಿಖೆ ಮಾಡಿ ಎಂದು ನಾನು ಹೇಳಿದ್ದೆ. ಆದರೆ ನಮ್ಮ ಕಾಲದಲ್ಲಿ ಸರ್ಕಾರಿ ಖೋಟ ಕಡುಬಡವರಿಗೆ ಕೊಟ್ಟಿರತಕ್ಕ ನಿದರ್ಶನಗಳು ಇವೆ. ಶ್ರೀಮಾನ್ ದೇವರಾಜ್ ಅರಸ್‌ರವರ ಕಾಲದಲ್ಲಿ ಕೂಡ ಇದು ಇತ್ತು. ಆದ್ದರಿಂದ ತಾವು ಆ ಒಂದು ಸೂತ್ರವನ್ನು ಒಪ್ಪಿಕೊಳ್ಳುವುದಾದರೆ ನಾವು ಕೂಡ ಒಪ್ಪಿಕೊಳ್ಳುತ್ತೇವೆ. ನೀವು ಪ್ರಗತಿಪರವಾದ ಮನೋವೃತ್ತಿಯಲ್ಲಿದ್ದರೆ ನಾವು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿದೆ ಅದನ್ನು ಬಿಟ್ಟು ಎಲ್ಲರಿಗೂ ಒಂದೇ, ಹಸಿದವನಿಗೂ ಒಂದೇ ರೀತಿ ಊಟ ಮಾಡದೆ ಇದ್ದವನಿಗೂ ಒಂದೇ ರೀತಿ ಈ ವರ್ತನೆ ಸರಿಯಲ್ಲ. ಕೆಟ್ಟ ಸಾಮಾಜಿಕ ನ್ಯಾಯವನ್ನು, ದುಷ್ಟ ಪದ್ಧತಿಯನ್ನು ಕಾನೂನಿನ ಮೂಲಕ ತಪ್ಪಿಸತಕ್ಕಂತಹ ಒಂದು ಪ್ರವೃತ್ತಿಯನ್ನುಂಟು ಮಾಡತಕ್ಕ ಮಸೂದೆ ಇದಾಗಿರಬೇಕು. ತಾವೇ ಇದರ ಮೂಲಕ ಯಾವುದನ್ನು ತೆಗೆಯಬೇಕೆಂದು ಇದ್ದೇವೆಯೋ ಅದನ್ನು ರೆಗ್ಯುಲರೈಸ್ ಮಾಡತಕ್ಕ ಒಂದು ಪ್ರವೃತ್ತಿಗೆ ತಾವೇ ಇಳಿದಿದ್ದೀರಿ

ಎಂದು ನಾವು ಖಂಡಿತವಾಗಿಯೂ ಹೇಳಬೇಕಾಗಿದೆ. ಒಂದು ರೀತಿಯಲ್ಲಿ ಇದು ಪ್ರಗತಿಪರವಾಗಿಲ್ಲವೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕರ್ನಾಟಕ ರಾಜ್ಯದ ಮತ್ತು ಕನ್ನಡೇತರ ವಿದ್ಯಾರ್ಥಿಗಳಿಗೂ ಕೂಡ ಈ ವಿಶೇಯಲ್ಲಿ ಬಹಳ ಅನ್ಯಾಯವಾಗುತ್ತಿದೆ. ಈ ಮಸೂದೆಯು ಹಿಂದೆ ನಮೂದಿಸಿದಂತಹ ಗೌರ್ನಮೆಂಟ್ ಆರ್ಡರ್‌ಗಳನ್ನು ಮತ್ತು ಎರಡನೇ ಗೌರ್ನಮೆಂಟ್ ಆರ್ಡರನ್ನು ನೋಡಿದರೆ ಗೊತ್ತಾಗುತ್ತದೆ. You have encouraged these institutions to be export oriented than import oriented ಒಂದು ತರಹ export oriented industry ಮಾಡಲಿಕ್ಕೆ ಒಂದು ವಾತಾವರಣವನ್ನು ಕಲ್ಪಿಸಲಾಗಿದೆ. ಅದನ್ನು ತಾವು ಇಲ್ಲಿ ಮಾಡಿದ್ದೀರಿ ಎಂದು ಖಂಡಿತವಾಗಿಯೂ ಹೇಳಬೇಕಾಗಿದೆ. ನಿಮ್ಮ ವಾದ ಸರಿಯೆಂದು ನೀವು ಹೇಳುವುದಾದರೆ ತಮ್ಮ ಅಂಕಿ ಅಂಶಗಳನ್ನು ತೆಗೆದು ಕೊಳ್ಳಿರಿ. 1983-84ನೇ ಇಸವಿಯಲ್ಲಿ ಒಂದು ನೀತಿಯನ್ನು ಅನುಸರಿಸಿದ್ದೀರಿ. ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಿಗೆ ಮಾಡಿದ್ದೀರಿ. I have made my own calculation. ಎಷ್ಟು ಜನ ಕರ್ನಾಟಕದವರಿಗೆ ಕೊಟ್ಟಿದ್ದೀರಿ? ಎಷ್ಟು ಜನ ಹೊರಗಿನವರಿಗೆ ಕೊಟ್ಟಿದ್ದೀರಿ? ಕರ್ನಾಟಕದವರಿಗೆ ಎಷ್ಟು ಜನರಿಗೆ ಕೊಟ್ಟಿದ್ದೀರಿ ಅದನ್ನು ದಯಮಾಡಿ ಹೇಳಿ. ಹಿಂದಿನ ಸರ್ಕಾರ ಅನುಸರಿಸಿದ ನೀತಿಯಿಂದ 1980-81, 1981-82, 1982-83ರಲ್ಲಿ ಕರ್ನಾಟಕದವರಿಗೆ ಹೆಚ್ಚು ಸೀಟುಗಳು ದೊರಕಿವೆ ಎಂದು ನಾನು ಧೈರ್ಯವಾಗಿ ಹೇಳಬಲ್ಲೆ. 1983-84ರ ತಮ್ಮ ಒಂದು ನೀತಿಯಿಂದ ಹೆಚ್ಚಿನ ಸೀಟುಗಳು ಹೊರಗಿನವರಿಗೆ ಹೋಗಿವೆ. ಇದರಿಂದ ಕರ್ನಾಟಕದವರಿಗೆ ಅನ್ಯಾಯ ವಾಗಿದೆಯೆಂದು ಹೇಳುತ್ತೇನೆ. ಇದು ಪ್ರಗತಿಪರ ನೀತಿಗೆ ವಿರೋಧವಾಗಿದೆ. ನಾನು ಇದರ ಬಗ್ಗೆ ತರ್ಕ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ನನ್ನ ಹತ್ತಿರ ಇದರ ಬಗ್ಗೆ ಲೆಖ್ಖವಿದೆ. There is a score for the outside Karnataka people. There is a scope. ನೀವೊಂದು ಲೆಕ್ಕ ಇಟ್ಟುಕೊಳ್ಳುತ್ತೀರಿ ನಾವೊಂದು ಲೆಕ್ಕ ಇಟ್ಟಿದ್ದೇವೆ. ಪ್ರೆಸೆಂಟ್ ಗೌರ್ನಮೆಂಟ್ ಆರ್ಡರ್ ಪ್ರಕಾರ 884 ಸೀಟುಗಳಲ್ಲಿ ನನ್ನ ಲೆಕ್ಕದ ಪ್ರಕಾರ 503 ಸೀಟುಗಳು ಮೆಡಿಕಲ್ ಕಾಲೇಜುಗಳಲ್ಲಿ ಹೊರಗಿನವರಿಗೆ ಹೋಗುತ್ತವೆ. ಕರ್ನಾಟಕದವರಿಗೆ 311 ಸೀಟುಗಳು ಬರುತ್ತವೆ. 1983-84ರಲ್ಲಿ ಆ ತರಹ ಒಂದು ಸ್ಕೋಪ್ ಇದೆ. ನಿಮ್ಮ ಆರ್ಡರ್ ಪ್ರಕಾರ You have thrown open the doors. ತಾವು ಏನು ಮಾಡುತ್ತೀರಿ ಅಂದರೆ ಹೊರಗಿನವರಿಗೆ ಎಲ್ಲಿಂದಲೋ ಬಂದವರಿಗೆ export-oriented industryಯ ರೀತಿ ಮಾಡುತ್ತಿದ್ದೀರಿ. ಕೆಲವು ಸಾರಿ ಎಕ್ಸ್‌ಪೋರ್ಟ್ ಮಾಡಲಿಕ್ಕೆ ಇಂಪೋರ್ಟರ್ಸ್ ಸಿಕ್ಕುವುದಿಲ್ಲ. ಎಕ್ಸ್‌ಪೋರ್ಟ್ ಓರಿಯೆಂಟೆಡ್ ಏನು ಪ್ರಾಡಕ್ಟ್ ಇದೆ ಅದನ್ನು ಲೋಕಲ್ ಆಗಿ ಸೇಲ್ ಮಾಡುತ್ತೀರಿ. ಇದು ಯಾವ ತರಹ ಆಗಬಹುದು ಅದನ್ನು ನಿಮಗೆ ಬಿಟ್ಟಿದ್ದೇವೆ. ನೀವು ಹೀಗೆ ಮಾಡಿರುವುದರಿಂದ ಖಾಸಗೀ ಕಾಲೇಜುಗಳಲ್ಲಿ ಅತಿಕ್ರಮಣ ಜಾಸ್ತಿಯಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ಹಿಂದಿನ ಸರ್ಕಾರಗಳು ಮಾಡಿದಂತಹ ಗೌರ್ನಮೆಂಟ್ ಆರ್ಡರ್‌ಗಳಲ್ಲಿ ಈ ಒಂದು ಅವ ಕಾಶಗಳು ಇರಲಿಲ್ಲ. ಕರ್ನಾಟಕದವರಿಗೆ ಸೀಮಿತವಾಗಿದ್ದಂತಹ ಸೀಟುಗಳನ್ನು ಕರ್ನಾಟಕದವರಿಗೆ ಯಾವುದೇ ರೀತಿಯ ತೊಂದರೆಯಾಗದ ರೀತಿಯಲ್ಲಿ ಅನ್ಯಾಯವಾಗದ ರೀತಿಯಲ್ಲಿ ದೊರಕುವಂತೆ ಮಾಡಲಾಗಿತ್ತು. ಹಿಂದೆ ಕಡಿಮೆ ಅನ್ಯಾಯವಾಗಿತ್ತು ಅಂದರೆ ಈಗ ಜಾಸ್ತಿಯಾಗಿದೆ. ಇದು ಕೂಡ ಪ್ರಗತಿಪರವಾದ ಧೋರಣೆ ಆಗಿಲ್ಲವೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ಬಿಲ್‌ನಲ್ಲಿ ಇವತ್ತು ಕ್ಯಾಪಿಟೇಷನ್ ಫೀಯನ್ನು ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಿಗೆ ತಾವು ಸೀಮಿತ ಗೊಳಿಸಿದ್ದೀರಿ. ಎಜುಕೇಶನಲ್ ಇನ್‌ಸ್ಟಿಟ್ಯೂಷನ್ಸ್ ಬಗ್ಗೆ ಡೆಫನೇಷನ್ ಕೊಟ್ಟಿದ್ದೀರಿ, ಅದು ಕ್ಲಾಸ್-1ರಲ್ಲಿ ಇದೆ. educational institution means any institution. ಎಜುಕೇಶನಲ್ ಇನ್‌ಸ್ಟಿಟ್ಯೂಷನ್‌ಗಳಿಗೆ ಕೊಡುವಾಗ imparting education in medicine or engineering leading to a degree conferred by the University established under this Act. ಎಂದು ಇದೆ. ಯಾವ ಕ್ಲಾಸನ್ನು ಇದರಲ್ಲಿ ಕೊಟ್ಟಿದ್ದೀರಿ? ಬಿ-ಫಾರ್ಮ, ಡಿ ಫಾರ್ಮದವರಿಗೆ ಬರುವುದಿಲ್ಲ. ಹೇಗೆ ಬರುತ್ತದೆ?

"(c) 'educational institution' means any institution by whatever name called, whether managed by Government, private body, local authority, trust, University or any other person carrying on the activity of imparting education in medicine or engineering leading to a degree conferred by an University established under the Karnataka State Universities Act, 1976 (Karnataka Act 28 of 1976) and any other educational institution, or class or classes of such institution as the Government may, by notification specify."

What is the just nucleus of the definition ? ಬಹುಶಃ ಯಾರಾದರೂ ಇದರ ವಿರುದ್ಧ ಹೈಕೋರ್ಟಿಗೆ ಹೋದರೆ ಈ ಮಸೂದೆ ನಿಲ್ಲುವುದಿಲ್ಲ. any other institution of engineering or medicine ಎಂದು ಇದರಲ್ಲಿ ಸೇರಿಸಿಕೊಳ್ಳುವುದಕ್ಕೆ ಆಗುವುದಿಲ್ಲವೆ ? ಇಂಜಿನಿಯರಿಂಗ್ ಅಂಡ್ ಮೆಡಿಕಲ್ ಎಂದು ಹೇಳಿದರೆ ಯೂನಿವರ್ಸಿಟಿ ಆಕ್ಟ್‌ನಲ್ಲಿ Engineering degree or medicine degree. ಯೂನಿವರ್ಸಿಟಿ ಆಕ್ಟ್‌ನಲ್ಲಿ ಡಿಪ್ಲೋಮಾ ಬರುವುದಿಲ್ಲ. ಇಂಜಿನಿಯರಿಂಗ್ ಡಿಪ್ಲೋಮಾ, ಬಿ-ಫಾರ್ಮ ಬರಬಹುದು. ಡಿ-ಫಾರ್ಮ ಬರುವುದಿಲ್ಲ ಇಂತಹದಕ್ಕೆಲ್ಲಾ ಈ ನಿಯಮವನ್ನು ಅಳವಡಿಸುವುದಕ್ಕೆ ಆಗುವುದಿಲ್ಲ Unless you amend it ಡೊನೇಷನ್ ತೆಗೆದುಕೊಳ್ಳುತ್ತಾರೆ. ಹೈಸ್ಕೂಲ್‌ಗಳಲ್ಲಿ ಬೇರೆ ಕಾಲೇಜುಗಳಲ್ಲಿ ಡೊನೇಷನ್ ತೆಗೆದುಕೊಳ್ಳುತ್ತಾರೆ. ಇದರಲ್ಲಿ ಸ್ಪಷ್ಟವಾಗಿ ನಮೂದಿಸಿದರೆ ನಿಮಗೆ ಏನಾಗುತ್ತದೆ ? ಅಕಾಡೆಮಿಕ್ ಎಜುಕೇಷನ್ ಸಂಸ್ಥೆಗಳಿಗೆ ಇದು ಖಂಡಿತವಾಗಿಯೂ ಅನ್ವಯಿಸುವುದಿಲ್ಲ. ಅದನ್ನು ಇಟ್ಟುಕೊಂಡರೆ ನೀವು ಏನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ನೀವು ಸೇರಿಸದಿದ್ದರೆ ತಿದ್ದುಪಡಿ ತರುವ ಅವಶ್ಯಕತೆ ಏನಿತ್ತು ? ಶುಲ್ಕ ಪದ್ಧತಿಯನ್ನು ಪೂರ್ಣವಾಗಿ ನಿಷೇಧಿಸದೆ ಕೆಲವು ವಿದ್ಯಾಕ್ಷೇತ್ರಕ್ಕೆ ಬಿಟ್ಟುಬಿಟ್ಟರೆ, ಕೆಟ್ಟ ಪದ್ಧತಿ ವ್ಯಾಪಕವಾಗಿ ಹರಡಲಿಕ್ಕೆ ಪ್ರೋತ್ಸಾಹ ಕೊಟ್ಟಹಾಗೆ ಆಗುತ್ತದೆ at least moral fear ಹಿಂದೆ ಇತ್ತು, . ಈಗ ತಿದ್ದುಪಡಿ ತರುವಾಗ ಅದನ್ನು ಸೇರಿಸಿ ತಿದ್ದುಪಡಿ ಮಾಡುವ ಒಂದು ಅವಶ್ಯಕತೆ ಕೂಡ ಇದೆ. It will be only academic interpretation. ವಿದ್ಯಾಕ್ಷೇತ್ರಗಳಲ್ಲಿ ವ್ಯಾಪಕವಾಗಿ ಜಾರಿಗೆ ತರುವುದಕ್ಕೆ ಆಗುವುದಿಲ್ಲವೆಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಒಳ್ಳೆಯ ಪ್ರೋಗ್ರೆಸ್ಸೀವ್ ಎಂದು ತಾವು ಹೇಳುತ್ತೀರಿ. ಇವತ್ತು ಮಣಿಪಾಲ್ ಕಾಲೇಜಿನ ಒಂದು ಸೆಕ್ಷನ್ ಮಾತ್ರ ಆಗಿರುವ ಮಂಗಳೂರು ಕಾಲೇಜಿನ ಬಗ್ಗೆ ಸಾಕಷ್ಟು ವಾದವಾಗಿದೆ. ಮಣಿಪಾಲ್ ಕಾಲೇಜು ಒಂದೇ ಇನ್‌ಸ್ಟಿಟ್ಯೂಟ್ ಆಗಿದ್ದು ಅದನ್ನು ಎರಡು ಕಾಲೇಜುಗಳನ್ನು ಮಾಡಿದಂತಹ ಒಂದು ಪ್ರವೃತ್ತಿಗೆ ತಾವು ಇಳಿದಿದ್ದೀರಿ. ಕಾನೂನು ಪ್ರಕಾರ ಮಾಡುತ್ತಿದ್ದೇವೆಂದು ಹೇಳುವ ಸರ್ಕಾರ ಮಣಿಪಾಲ್ ಸೆಕ್ಷನ್‌ಗೆ 20 ಸೀಟುಗಳನ್ನು ಕೂಡ ಕೊಡಲಿಲ್ಲ. 20 ಪರ್ಸೆಂಟ್ ಸೀಟು ತೆಗೆದುಕೊಂಡಂತಹ ಸಂದರ್ಭದಲ್ಲಿ ಹೆಚ್ಚು ಸೀಟುಗಳನ್ನು ಕೊಡತಕ್ಕ ಪ್ರಯತ್ನ ಮಾಡಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.— ಮಣಿಪಾಲ್ ಕಾಲೇಜು 1970 ರಲ್ಲೇ ಇಂಡಿಪೆಂಡೆಂಟ್ ಕಾಲೇಜು ಆಯಿತು. ನಾನು ಕೂಡ ಆ ಸಂದರ್ಭದಲ್ಲಿ ಸದನದಲ್ಲಿ ಚರ್ಚೆ ಮಾಡಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— 1981-82 ರಲ್ಲಿ ....

Sri M Veerappa Moily.— You please see the Government order. I will just read it. 7th September, 1981 Government order, I have got a copy of the Government order :

"Accordingly Government are pleased to order the distribution seats in Kasturba Medical College, Manipal Section which is centrally self-sufficient at Manipal as per the pattern indicated below : 62 of the seats out of the available 125 seats shall be allotted regularly on merit-cum-reservation basis to be allotted by a selection committee constituted by the Government to the students of Karnataka and the remaining 63 seats shall be allotted on merit to applicants who are willing to pay subject levy in view of the fact that this section of the college maintains its own hospital etc." This was the order issued by our Government in 1981. ಆದ್ದರಿಂದ ಮಣಿಪಾಲನ್ನು ಸರ್ವಸ್ವತಂತ್ರವಾಗಿ ಬಿಟ್ಟುಬಿಟ್ಟಿದ್ದೀರಿ. ನಿಮ್ಮ ಮಸೂದೆಯ ವ್ಯಾಖ್ಯೆಯಲ್ಲಿ ಕೂಡ ಇದನ್ನು ತರದೆ ಇದನ್ನು ಸರ್ವಸ್ವತಂತ್ರವಾಗಿ ಬಿಟ್ಟುಬಿಟ್ಟಿದ್ದೀರಿ. ಇದಕ್ಕೆ ಯಾವ ಜಸ್ಟಿಫಿಕೇಷನ್ ಕೊಡುತ್ತೀರಿ ? ಅಲ್ಪಸಂಖ್ಯಾತರ ಸಂಸ್ಥೆಯೆಂದೇನಾದರೂ ಪರಿಗಣಿಸಿದ್ದೀರಾ ? ಇದಕ್ಕೆ ಸ್ಪೆಷಲ್ ಸ್ಟೇಟಸ್ ಕೊಡಲು ಇರುವ ಅರ್ಹತೆಯಾದರೂ ಏನು ? ಇದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಇದರ ಬಗ್ಗೆ ನಿಮ್ಮ ವಾದ ಏನೆಂಬುದನ್ನು ತಿಳಿದುಕೊಳ್ಳಲು ನಾವು ಕಾತುರರಾಗಿದ್ದೇವೆ. ಇದನ್ನು ಬಿಟ್ಟು ಪ್ರಗತಿಪರ ಮನೋವೃತ್ತಿಯಿಂದ ಈ ಮಸೂದೆಯನ್ನು ತಂದಿದ್ದೇವೆ ಎಂದು ಹೇಳಿದರೆ in the absence of plausible arguments we cannot agree for it. Please come out with the justification. It is a minority institution ? ಇವರು ಶುಲ್ಕ ವಸೂಲಿ ಮಾಡುವುದಿಲ್ಲವೆಂದು ಈ ಸ್ಪೆಷಲ್ ಸ್ಟೇಟಸ್ ಕೊಟ್ಟಿದ್ದೀರೋ ? ಪ್ರತ್ಯಕ್ಷವಾಗಿ ಇಲ್ಲದಿದ್ದರೆ ಬೇರೆ ರೀತಿಯಲ್ಲಿ ಶುಲ್ಕ ವಸೂಲಿ ಮಾಡುತ್ತಿದ್ದಾರೆಯೋ ಇಲ್ಲವೋ ಎಂಬುದನ್ನು ನಾವು ತಿಳಿದು

ಕೊಳ್ಳಬೇಕಾಗುತ್ತದೆ. ನೀವು 'ಪ್ರಗತಿಪರವಾಗಿದ್ದೇವೆ' ಎಂದು ಹೇಳತಕ್ಕಂಥ ಸಂದರ್ಭದಲ್ಲಿ ನಾವುಗೆ ನಾವು ಸರ್ಟಿಫಿಕೇಟ್ ಕೊಡಬೇಕಾದರೆ ನೀವು ಸರಿಯಾದ ವಾದ ಇಡಬೇಕಾದ ಪ್ರಸಂಗ ಖಂಡಿತವಾಗಿಯೂ ಬರುತ್ತದೆ. ಆದರೆ ತಾವು ಇವತ್ತು ಇದನ್ನು ಬಹಳ ಲಘುವಾಗಿ ತೆಗೆದುಕೊಂಡಿದ್ದೀರಿ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).— ಮಣಿಪಾಲ್ ಕಾಲೇಜಿನ ಬಗ್ಗೆ ತಾವೇನು ಹೇಳುತ್ತಿದ್ದೀರಿ, ಮಂಗಳೂರು ಸೆಕ್ಷನ್ನೇ ಬೇರೆ. ಮಣಿಪಾಲ್ ಸೆಕ್ಷನ್ನೇ ಬೇರೆ.

Sri M. Veerappa Moily — It was a disputed one.

Sri P. G. R. Sindhia — It is still a disputed point. ಮಣಿಪಾಲ್ ಮೆಡಿಕಲ್ ಕಾಲೇಜಿನಲ್ಲಿ ಗವರ್ನಮೆಂಟ್ ಸೆಲೆಕ್ಷನ್ ಕಮಿಟಿಗೆ ಕಳೆದ ವರ್ಷ ಯಾವುದೇ ಸೀಟು ತೆಗೆದುಕೊಂಡಿಲ್ಲ. ಏಕೆ ತೆಗೆದುಕೊಂಡಿಲ್ಲ ಅಂದರೆ "ಕ್ಯಾಪಿಟೇಷನ್ ಫೀಸ್ ನಾವು ತೆಗೆದುಕೊಳ್ಳುವುದಿಲ್ಲ" ಎಂದು ಅವರು ಹೇಳುತ್ತಿದ್ದಾರೆ. ಪರೋಕ್ಷವಾಗಿ ತೆಗೆದುಕೊಳ್ಳಬಹುದು. ಅದನ್ನು ಹೇಳುವುದಕ್ಕಾಗುವುದಿಲ್ಲ. ಸರ್ಕಾರದಿಂದ ಯಾವುದೇ ಕ್ಲಿನಿಕಲ್ ಫೆಸಿಲಿಟೀಸನ್ನು ಈ ಖಾಸಗಿ ವೈದ್ಯಕೀಯ ಸಂಸ್ಥೆಯವರು ತೆಗೆದುಕೊಳ್ಳುತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಣಿಪಾಲ್‌ನವರು ಅನೇಕ ವರ್ಷಗಳಿಂದ ಕೇಳುತ್ತಿದ್ದರು. ಮಣಿಪಾಲ್‌ನಲ್ಲಿ ಸೀಟು ಇತ್ತು, ಮಂಗಳೂರಿನಲ್ಲೂ ಕೂಡ ಸೀಟು ಇತ್ತು. ಬಹುಶಃ ಕೊನೆಗೆ ಅವರು ಹೈಕೋರ್ಟಿಗೆ ಹೋಗಿ ಸ್ಟೇ ಆರ್ಡರನ್ನು ತೆಗೆದುಕೊಂಡು ಬಂದರು. ಈ ಆರ್ಗ್ಯುಮೆಂಟ್ ಮೇಲೆ ಸರ್ಕಾರದ ನೀತಿಯನ್ನು ನಮೂದಿಸುವುದಕ್ಕೆ ಆಗುವುದಿಲ್ಲ ನೀವು ಕಾನೂನನ್ನು ಮಾಡುತ್ತಿದ್ದೀರಿ. ಕಾನೂನಿನ ಅಸ್ತ್ರವನ್ನು ಬಳಸಿಕೊಂಡು ಈ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಹೋಗುತ್ತಿರುವಾಗ ಮಣಿಪಾಲನ್ನು ಬಿಟ್ಟುಬಿಟ್ಟಿದ್ದರ ಔಚಿತ್ಯವೇನು ? ಇದು ಎರಡು ಇಂಡಿಪೆಂಡೆಂಟ್ ಕಾಲೇಜ್ ಅಲ್ಲ ಎನ್ನುವುದಕ್ಕೆ ಈ ಸದನದಲ್ಲಿ ನಡೆದಂತಹ ಅನೇಕ ಚರ್ಚೆಗಳನ್ನು ರೆಕಾರ್ಡ್‌ಗಳನ್ನು ನೋಡಬೇಕು. ಸರ್ಕಾರ ಪ್ರತಿ ಸಾರಿಯೂ ಕೂಡ ಇದು ಒಂದೇ ಕಾಲೇಜು, ಎರಡು ಕಾಲೇಜು ಅಲ್ಲ ಎಂದು ಉತ್ತರ ಕೊಟ್ಟಿದ್ದು ಇದೆ. ಈಗ ಈ ಪ್ರಶ್ನೆಯನ್ನು ಸರ್ಕಾರದ ನೀತಿಯನ್ನು ನಮೂದಿಸತಕ್ಕ ಸಂದರ್ಭದಲ್ಲಿ ಪ್ರತ್ಯೇಕ ಸ್ಟೇಟಸ್ ಕೊಟ್ಟು ಪ್ರತ್ಯೇಕ ಪ್ರತ್ಯೇಕ ಕಾಲೇಜುಗಳಾಗಿ ಪರಿವರ್ತಿಸಿ ಮಣಿಪಾಲನ್ನು ಸಂಪೂರ್ಣವಾಗಿ ನೀತಿನ ಹತೋಟಿಯಿಂದ ಹೊರಗಿಡತಕ್ಕ ಕೆಲಸವಾಗಿದೆ. ಈ ವಿಚಾರವನ್ನು ಮರುಚಿಂತನೆ ಮಾಡುವುದು ಅವಶ್ಯವಾಗಿದೆ. ಇದನ್ನು ಮಾಡದಿದ್ದರೆ ತಾವು ಇದನ್ನು ಪ್ರಗತಿಪರ ಮಸೂದೆಯೆಂದು ಹೇಳಲು ಸಾಧ್ಯವಿಲ್ಲ. ಇದು ಪ್ರಗತಿಪರವಾಗಿಲ್ಲ, ಬದಲು ಪಟ್ಟಭದ್ರಹಿತಾಸಕ್ತಿಗಳ ಹಿಡಿತದಿಂದ ಕೂಡಿದ್ದಾಗಿದೆ ಎಂದು ಆಪಾದನೆ ಮಾಡಲಿಕ್ಕೆ ಪುರಾವೆಯಿಂದ ಕೂಡಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ಬಹಳ ಪ್ರಾಮುಖ್ಯವಾದ ವಿಚಾರ ವಿದ್ಯಾ ಮಂತ್ರಿಗಳು ಇದಕ್ಕೆ ಗಮನ ಕೊಡುವುದು ಒಳ್ಳೆಯದು. ಕ್ಲಾಸ್ 4ನ್ನು ನೀವು ನೋಡಿದ್ದೀರೋ ಇಲ್ಲವೋ? ನೋಡಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ನೀವು ಆಳವಾದ ಚಿಂತನೆಯನ್ನು ಮಾಡಿದ್ದೀರೋ ಇಲ್ಲವೋ ಎಂಬ ಸಂಶಯ ನನಗೆ ಬರುತ್ತಿದೆ. ಪ್ರಾವಿಸೋದಲ್ಲಿ ಮುಖ್ಯವಾಗಿ ಅಕಾಡೆಮಿಕ್ ಸ್ಟ್ಯಾಂಡರ್ಡ್‌ಗೆ ಸಂಬಂಧಪಟ್ಟ ವಿಚಾರ. ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಸ್ಟ್ಯಾಂಡರ್ಡ್ ಸರ್ಕಾರದ ಸ್ವಾಧೀನವಾಗತಕ್ಕ ಪ್ರಯತ್ನವನ್ನು ಯಾವಾಗಲೂ ಮಾಡಬಾರದು ಎಂದು ಆ ಕಡೆ ಇದ್ದಾಗ ಮಾನ್ಯ ಲಕ್ಷ್ಮೀಸಾಗರ್ ಅವರು ಹೇಳುತ್ತಿದ್ದರು. ಇವತ್ತು ಯಾವ ಒಂದು ಕ್ಲಾಸ್ 4ರ ಮೂಲಕ ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಸ್ಟ್ಯಾಂಡರ್ಡ್‌ನ್ನು ನಿಷ್ಕರ್ಷೆ ಮಾಡತಕ್ಕ ಪ್ರಯತ್ನವನ್ನು ಈ ಬಿಲ್‌ನಲ್ಲಿ ಮಾಡಿದ್ದೀರಿ. ಕ್ಲಾಸ್ 4ನ್ನು ನೋಡಿ

"Subject to such rules, or general or special orders, as may be made by the Government in this behalf and any other law for the time being in force,.... .....

(1) (a) the minimum qualification for admission to any course of study in an educational institution shall be such as may be specified by....

(i) the University, in the case of any course of study in an educational instiiution maintained by or affiliated to such University.

Provided that the Government may, in the interest of excellence of education, fix any higher minimnm qualification for any course of study."

That means, maintanance of excellence of education is now

sought to be taken over by the Government from the University. It may be higher or lower, may be in their wisdom. "Such standards as fixed to the convenience of the Government" may be a casualty in the eyes of the University. Evils are there and they should be exposed in this House.

Sri V. S. Acharya.— They can fix any higher minimum qualification

Sri M. Veerappa Moily.— Who will decide it ? Is it the IAS Secretary who will decide the standard or is it the Section Officer in the Secretariat ?

Sri A. Lakshmisagar — The legality of this provision was already under question in the Court. The Court upheld the constitutionality and legality of this provision. Secondly, the State Government has a paramount interest in safegaurding the excellence of education and also in the number of students to be admitted into any college. The State should also know how many engineers and doctors and other technically qualified people would be necessary for the services of the State. It has already been pointed out in the note prepared and circulated to members that in the year 1984–85 there will be as many as 12,000 engineering graduates who would be unemployed. So; having all these factors in view, the Government may fix in the interest of the excellence of education higher percentage of marks than what has already been done. This is an unexceptionable situation. Therefore, it cannot be either on legal grounds or other grounds. The other argument is, it comes in the way of exercising the autonomy of the University. We have no such intention. But the State has paramount interest to safeguard the overall interest of the education including the number of persons to be taken into each faculty.

Sri K. H Ranganath.— The State has paramount interest. There is no dispute about it because it is the State that gives them money and it is the State that maintains and regulates. But, inspite of it, we have provided the Universities a very important status. When we are thinking of giving the powers to Universities why are we taking that power back ? The Academic Council can decide these things.

Sri A. Lakshmisagar.— Academic Council matters don't come in. But we don't allow the lowest qualified in the interest of the education

Sri A. Lakshmisagar — We do not come in academic matters. We will have a say in the interest of excellence of education.

ಶ್ರೀ ಕೆ.ಹೆಚ್. ರಂಗನಾಥ್.— ಅವರು ಒಳಗೆ ಹೋಗುವುದಿಲ್ಲ ಎಂದರೆ ನೀವು ಏನುಮಾಡುತ್ತೀರಿ ಅಥವಾ ಅವರು ರೀಬೌಂಡ್ ಆದರೆ ಏನು ಮಾಡುತ್ತೀರಾ?

Sri M Veerappa Moily. – I am absolutely going on the merit of the bill. I am not going to any extraneous matters. If the Government were to take powers where is the necessity to have academic council.

Sri K H. Ranganath.— During the time of 'old Mysore' appointments to the Mysore University was being made by the Public Service Commission. It is now only the appointments are being made by the Universities themselves. But if we are not giving those powers to make their own appointment ನೀವು ಒಂದು ಹೆಜ್ಜೆ ಮುಂದಕ್ಕೆ ಹೋಗುವುದು ಬಿಟ್ಟು ಹಿಂದಕ್ಕೆ ಬರುತ್ತಿದ್ದೀರಿ. The question is, is it proper, is it wise when we have given powers to the highest body like that. Are you going to constitute another Planning Board to advice the University? If that is so, why this provision. That is the point,

ಶ್ರೀ ಎಂ. ವೀರಪ್ಪ ಮೊಯಿಲಿ.— ತಾವು ಈ ಯೂನಿವರ್ಸಿಟಿಯ ಅಧಿಕಾರವನ್ನು ಕಿತ್ತು ಕೊಳ್ಳುವುದನ್ನೇ ಸಮರ್ಥಿಸುತ್ತೀರಿ, ನನಗೆ ಗೊತ್ತಿದೆ ಈ ವಿಷಯವನ್ನು ಎಜುಕೇಷನ್ ಬಿಲ್‌ನಲ್ಲಿ ತಂದಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು.

ಶ್ರೀ ಎ. ಲಕ್ಷ್ಮೀಸಾಗರ್.— ಹಾಗಾದರೆ ವಿಶ್ವವಿದ್ಯಾನಿಲಯದ ಸ್ವಾಯತ್ತತೆಯನ್ನು ಡಿಫೈನ್ ಮಾಡುವುದು ಬೇಡವೇ? ಎರಡನೆಯದಾಗಿ ಹಿಂದಿನ ಸರ್ಕಾರದವರು ಅಫಿಲಿಯೇಷನ್ ಕೊಡುವುದು ನಿಧಾನವಾಗುತ್ತದೆ ಎಂದು ಅದಕ್ಕೆ ಒಂದು ತಿಂಗಳು ಜೀವದಾನ ಕೊಡುವುದಕ್ಕೋಸ್ಕರವಾಗಿ ಒಂದು ಆರ್ಡಿನೆನ್ಸ್ ಹೊರಡಿಸಿದರು. ಆ ಸಮಯದಲ್ಲಿ ಹಿಂದಿನ ಸರ್ಕಾರದವರು ಅಫಿಲಿಯೇಷನ್ ಕೊಡುವುದಕ್ಕೆ ಈ ರೀತಿ ಮಾಡಿದ್ದು ನಿಮ್ಮ ವಾದದ ಪರವಾಗುತ್ತದೋ ಅಥವಾ ವಿರುದ್ಧವಾಗುತ್ತದೋ ಅನ್ನುವುದನ್ನು ನೀವೇ ಹೇಳಿ.

ಶ್ರೀ ಕೆ.ಹೆಚ್. ರಂಗನಾಥ್. – ಒಂದೇನೋ ತಪ್ಪಾಗಿದೆ, ಹಾಗಾದರೆ ನೀವು ಇನ್ನೊಂದು ತಪ್ಪು ಮಾಡುವುದಕ್ಕೆ ಹೋಗುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.— ನಾವೇನೂ ತಪ್ಪು ಮಾಡಿಲ್ಲ Legality of it has been up held. You also admit that State has paramount importance to laid down basic principles within which the University should function. University autonomy is also sanctioned by this House.

Sri M. Veerappa Moily.— I appreciate the policy of the State Government to interfere in the administration of the academic standards which is to be fixed by the University. ಅಟಾನಮಿ ಇನ್‌ಫ್ರಿಂಜ್ ಮಾಡುವ ರೀತಿಯಲ್ಲಿ ನೀವು ಅದನ್ನೇ ಹೇಳಿಕೊಂಡು ಪುಷ್ಟೀಕರಿಸುತ್ತಿದ್ದೀರಿ. ಯೂನಿವರ್ಸಿಟಿ ಸ್ವಾಯತ್ತತೆ ಬಗ್ಗೆ ಕೋರ್ಟ್ ಜಡ್ಜ್‌ಮೆಂಟ್ ಇದೆ ಎಂದು ಹೇಳುತ್ತೀರಿ. ಇದರ ಬಗ್ಗೆ ಕ್ಲಾಸ್ 4 ಬಿ ನಲ್ಲಿ ಏನು ಇದೆ ಅದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದು ಈ ರೀತಿ ಇದೆ :—

'(b) the maximum number of students that could be admitted to a course of study in an educational institution shall be such as may be fixed by the Government from time to time; ಈ ಕ್ಲಾಸ್ ಪ್ರಕಾರ ಯೂನಿವರ್ಸಿಟಿಗೆ ಯಾವ ಹಕ್ಕೂ ಇಲ್ಲ. ಇನ್‌ಟೇಕ್ ಬಗ್ಗೆಯೂ ಕೂಡ ಅವರೊಂದಿಗೆ ವಿಚಾರ ಮಾಡುವ ಹಾಗಿಲ್ಲ. ಬೇಕಾದರೆ ಯೂನಿವರ್ಸಿಟಿಯ ಸಲಹೆಗಳನ್ನು ಅವರು ನಿರಾಕರಿಸಬಹುದು, ಇಂಡಿಯನ್ ಮೆಡಿಕಲ್ ಕೌನ್ಸಿಲ್ ಅವರ ಸಲಹೆಯನ್ನಾಗಲಿ ಅಥವಾ ಯೂನಿವರ್ಸಿಟಿಯವರ ಕನ್‌ಸಲ್ಟ್ ಇಲ್ಲದೆ ಈ ಸೀಟುಗಳನ್ನು ಹೆಚ್ಚು ಮಾಡಿಕೊಂಡಿದ್ದೀರಿ ಎನ್ನುವುದರ ಬಗ್ಗೆ ಈ ಕಡೆ ಕೂತಿದ್ದಾಗ ನಮ್ಮ ಮೇಲೆ ತಾವು ಒಂದು ಆಪಾದನೆ ಮಾಡಿದ್ದೀರಿ. ಈಗ ನೋಡಿದರೆ ಅದನ್ನೇ ತಾವು ಲೀಗಲೈಸ್ ಮಾಡುವುದಕ್ಕೆ ಹೊರಟಿದ್ದೀರಿ. ಇದು ಸರಿಯೇ? As matters which has taken exception by the previous Government or unavoidable circumstances or as far as according to you not warranted all these things are now enumerated in Clause 4(b). We cannot question this since you have made a provision in this bill and you become ultimately boss as far as maximum seats to be alloted ತಮಗೆ ಹೇಳ ಬೇಕಾದರೆ ಇದು ಲೀಗಲೈಸ್ ಆಗಿ ಮಾಡತಕ್ಕಂಥಾ ಒಂದು ಪ್ರಗತಿಗೆ ವಿರುದ್ಧವಾಗುತ್ತದೆ. ಇದರಿಂದ ಖಂಡಿತ ಸುಧಾರಣೆಯಾಗುವುದಕ್ಕೆ ಸಾಧ್ಯವಿಲ್ಲ. ಒಟ್ಟಿನಲ್ಲಿ ಹೇಳಬೇಕಾದರೆ ಇದರ ಪರಿಣಾಮ ತಕ್ಷಣ ಏನೂ ಆಗುವುದಿಲ್ಲ. ತಾವು ತಿಳಿದುಕೊಂಡಂತೆ ತಕ್ಷಣ ಆಗುವುದಿಲ್ಲ. What is the impact on

the system of capitation fees? It is zero. Then, what is the net result of this bill. The main aim of this bill is to abolish capitation fees but as things stand this is not going to achieve the desired result because this is not retrospective nor in the present but it is for future date, preseribed date. The effect of this bill will not take place right now immediately after passing this bill. It may come into effect within 5 years or after 5 years.

ಡಾ. ವಿ. ಎಸ್. ಆಚಾರ್ಯ — ಜುಲೈ 1983ರ ನಂತರ ಓಪನ್ ಆದಂಥಾ ಕಾಲೇಜುಗಳಿಗೆ ಮಾತ್ರ ಈ ಕ್ಯಾಪಿಟೇಷನ್ ಫೀಸ್ ಅನ್ವಯಿಸುತ್ತದೆ. ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಅದಕ್ಕೆ ಬೇಕಾದರೆ ಸರ್ಕಾರದವರೇ ಒಂದು ತೀರ್ಮಾನ ತೆಗೆದುಕೊಳ್ಳಬಯದಾಗಿತ್ತು. ಅದಕ್ಕೆ ಈ ಬಿಲ್ ಏನೂ ಬೇಕಾಗಿಲ್ಲ ಈ ರೀತಿಯಾದ ಒಂದು ಡಿಸಿಷನ್ ತೆಗೆದುಕೊಂಡರೆ ಸಾಕು ಏನೆಂದರೆ ಹೊಸದಾಗಿ ಇಂಜನೀಯರಿಂಗ್ ಕಾಲೇಜು ಆಗಲಿ, ಮೆಡಿಕಲ್ ಕಾಲೇಜುಗಳನ್ನಾಗಲಿ ಪ್ರಾರಂಭ ಮಾಡಬಾರದು ಎಂದು ಒಂದು ನಿರ್ಣಯ ತೆಗೆದುಕೊಂಡರೆ ಸಾಕು. ನಾವು ಅದಕ್ಕೆ ಅವಕಾಶ ಕೊಡುವುದಿಲ್ಲ ಎಂದು ನಿರ್ಣಯ ತೆಗೆದುಕೊಂಡಿದ್ದರೆ ಸಾಕಾಗಿತ್ತು. ಇದಕ್ಕೆ ಬಿಲ್ ಏನೂ ತರಬೇಕಾಗಿರಲಿಲ್ಲ. ಈ ಬಿಲ್ ಏತಕ್ಕೆ ಬೇಕು ಎಂದರೆ ಸರ್ಕಾರ ಇನ್ನು ಮುಂದೆ ಖಾಸಗೀ ಇಂಜನಿಯರಿಂಗ್ ಕಾಲೇಜಾಗಲೀ, ಮೆಡಿಕಲ್ ಕಾಲೇಜಾಗಲಿ ಸ್ಟಾರ್ಟ್ ಮಾಡಿದಾಗ ಈ ಕ್ಯಾಪಿಟೇಷನ್ ಫೀಸ್ ನಿಲ್ಲಿಸುತ್ತೇವೆ ಅಂತ ಮಾಡಿದ್ದರೆ ಆವಾಗ ಬೇಕಾಗಿತ್ತು. ಈ ಬಿಲ್‌ನಲ್ಲಿ ಆ ತರಹವಾಗಿ ತಕ್ಷಣ ಬರುವುದಿಲ್ಲ ಹಿಂದಿನಿಂದಲೂ ನಡೆನು ಬಂದಂಥಾದ್ದನ್ನು ತಕ್ಷಣ ಸ್ಟಾಪ್ ಮಾಡುವುದಕ್ಕೆ ಬರುವುದಿಲ್ಲ. ಇದು ರೆಟ್ರಾಸ್ಪೆಕ್ಟೀವ್ ಆಗುವುದಿಲ್ಲ. ಪ್ರಾಸ್ಪೆಕ್ಟೀವ್ ಆಗುವುದಿಲ್ಲ. ಇನ್ನು 5 ವರ್ಷಕೆ ಈ ಎಲೆಕ್ಷನ್ ಟೈಮ್ ಮುಗಿಯುತ್ತದೆ ಇನ್ನು ಮುಂದಿನ ಎಲೆಕ್ಷನ್ ಹೊತ್ತಿಗೆ ಇದನ್ನು ತರುತ್ತೇವೆಂದು ನೀವು ಹೇಳಬಹುದು. ಶ್ರೀ ಕೆ ಜಿ ಮಹೇಶ್ವರಪ್ಪನವರು ನಮ್ಮನ್ನು ಕುರಿತು ನೀವು ಗರೀಬಿ ಹಟಾವೋ ತರುತ್ತೀರಿ ಅಂತ ಹೇಳಿದಿರಿತರಲಿಲ್ಲ ಅಂತ ಹೇಳಿದರು. ಈ ಗರೀಬಿ ಹಟಾವೋಗೂ ಮತ್ತು ಈ ಪ್ರೊಹಿಬಿಷನ್‌ಗೂ ಏನು ಸಂಬಂಧ? ಒಟ್ಟಿನಲ್ಲಿ ಹೇಳಬೇಕಾದರೆ ಇದನ್ನು ತಕ್ಷಣವಾಗಿ ಪರಿಹಾರ ಮಾಡಬೇಕು ಎಂದರೆ ಆಗುವುದಿಲ್ಲ. ಬೇಕಾದರೆ ಈ ಬಿಲ್ಲಿನ ಮೂಲಕ ಸೀಟುಗಳನ್ನು ರೆಗ್ಯುಲೇಟ್ ಮಾಡುತ್ತೇವೆ ಎಂದು ಹೇಳಬಹುದು ಈ ಬಿಲ್ಲಿನ ಮೂಲಕ ಸೀಟುಗಳನ್ನು ನಿಯಂತ್ರಿಸಬಹುದೇ ವಿನಾ ಸೀಟು ಶುಲ್ಕವನ್ನು ರದ್ದು ಮಾಡುವುದಕ್ಕಾಗುವುದಿಲ್ಲ ಆ ತರಹ ಒಂದು ಪ್ರಾವಿಷನ್ ಅನ್ನು ಇದರಲ್ಲಿ ಅಳವಡಿಸಿದ್ದೀರಿ. ಆದುದರಿಂದ ಇದನ್ನು ರೆಗ್ಯುಲರೇಟರಿ ಬಿಲ್ ಎಂದು ಹೇಳಬಹುದು. This Bill has no consequence at all as far as prohibition of Capitation fees are concerned. ಆದುದರಿಂದ ಈ ಬಿಲ್ಲು ಅಂತಹ ಪ್ರಗತಿದಾಯಕವಾದುದಲ್ಲ ಎಂದು ಹೇಳುತ್ತೇನೆ. ಈ ಬಿಲ್ಲನ್ನು ಕ್ಯಾಪಿಟೇಷನ್ ಶುಲ್ಕವನ್ನು ರೆಗ್ಯುಲರೇಟರಿ ಮಾಡುವುದಕ್ಕೆ ತಂದಿದ್ದೀರೇ ವಿನಾ ರದ್ದು ಮಾಡುವುದಕ್ಕಲ್ಲ ಈ ಬಿಲ್ಲಿನ ಮುಖಾಂತರ ಸೀಟು ಶುಲ್ಕವನ್ನು ಪುನಃ ಹೆಚ್ಚು ಮಾಡಿದ್ದಾರೆ ಅನ್ನುವ ಅಭಿಪ್ರಾಯ ಸಾರ್ವಜನಿಕರಲ್ಲಿ ಬಂದಿದೆ. ಅಲ್ಲದೆ ಇದು ಒಂದು ರೆಗ್ಯುಲರೇಟರಿ ಬಿಲ್ ಅಂತಲೂ ಕೂಡ ಸಾರ್ವಜನಿಕರ ಅಭಿಪ್ರಾಯದಲ್ಲೂ ಇದೆ.

ಈಗ ಸರ್ಕಾರದವರು ಐದು ವರ್ಷದಲ್ಲಿ ಇದನ್ನು ರದ್ದು ಮಾಡಲಿಕ್ಕೆ ಈ ಮಸೂದೆಯನ್ನು ತಂದಿದ್ದೇವೆಂದು ಹೇಳುತ್ತಾ ಇದ್ದಾರೆ. ವಿದ್ಯಾಕ್ಷೇತ್ರದಲ್ಲಿ ಈ ಒಂದು ದುಷ್ಟ ಪದ್ಧತಿಯನ್ನು ಹೋಗಲಾಡಿಸತಕ್ಕ ಯಾವ ನಿಮ್ಮ ಪ್ರಯತ್ನ ಇದೆ ಆ ಪ್ರಯತ್ನ ಪ್ರಾಮಾಣಿಕತನದಿಂದ ಕೂಡಿದೆಯೇ? ತಾವು ನೀರಿನಲ್ಲಿ ಮೀನಿನ ಹೆಜ್ಜೆಯನ್ನು ಹುಡುಕುವುದಕ್ಕೆ ಹೊರಟಂತೆ ಆಗಿದೆ. ನಿಮ್ಮಿಂದ ಇದು ಸಾಧ್ಯವಾಗುವುದಿಲ್ಲ ನಿಮ್ಮ ಸದಸ್ಯರೂ ಸಹ ಇದರ ಬಗ್ಗೆ ಮಾತನಾಡಿದ್ದಾರೆ. ನಾವು ಈ ಶುಲ್ಕ ಪದ್ಧತಿಯನ್ನು ವಿರೋಧ ಮಾಡಿದ್ದೇವೆ, ವಿರೋಧ ಮಾಡುವುದಕ್ಕೆ ನಮ್ಮ ಬೆಂಬಲವನ್ನೂ ಕೊಟ್ಟಿದ್ದೇವೆ ಈ ಬಿಲ್ಲಿನ ಮೂಲಕ ಶುಲ್ಕ ಪದ್ಧತಿಯನ್ನು ಇನ್ನೂ ಐದು ವರ್ಷಗಳ ಕಾಲ ಸತತವಾಗಿ ನೆರವೇರಿಸಿಕೊಂಡು ಹೋಗುವ ಯಾವ ಒಂದು ಪ್ರಯತ್ನ ಇದೆ ಆ ಪ್ರಯತ್ನಕ್ಕೆ ನಮ್ಮ ವಿರೋಧವನ್ನು ವ್ಯಕ್ತಪಡಿಸುತ್ತೇವೆ. ಮತ್ತು ಅದನ್ನು ನಾವು ಖಂಡಿಸುತ್ತೇವೆ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೀರಿ ಎಂದು ನಾನು ನೆನಪು ಮಾಡಿಕೊಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಅದನ್ನು ಹೇಳಬೇಡಿ ಎಂದು ಆಗಲೇ ಹೇಳಿದ್ದಾರೆ. ಇದನ್ನು ನಾವು ಹೇಳಿದರೆ ಅವರಿಗೆ ಸಿಟ್ಟು ಬರುತ್ತದೆ. ಅವರೇ ಅದನ್ನು ಓದುವುದಿಲ್ಲವೆಂದು ಹೇಳಿದ ಮೇಲೆ ನಾವೂ ಓದುವುದನ್ನು ಕಡಿಮೆ ಮಾಡುತ್ತೇವೆ. ಆ ಪ್ರಣಾಳಿಕೆಯಲ್ಲಿ ಕೊಟ್ಟಂಥ ವಚನ ಏನಿದೆ ಅದನ್ನು ನಾವು ನೆನಪು ಮಾಡಿಕೊಳ್ಳುವುದಿಲ್ಲ. ಈ ಶುಲ್ಕ ಪದ್ಧತಿಯನ್ನು ನಾಶ ಮಾಡಲಿಕ್ಕೆ ನೀವು ಹೋರಾಟ ಮಾಡಬೇಕಾಗುತ್ತದೆ. ಹೋರಾಟ ಮಾಡತಕ್ಕ ಪ್ರಯತ್ನದಲ್ಲಿ ನೀವು ವಿಫಲರಾಗಿದ್ದೀರಿ. ಈ ಬಗ್ಗೆ ನೀವು ಒಂದು ರೀತಿಯಿಂದ ಜವಾಬ್ದಾರಿಯನ್ನು

ತಪ್ಪಿಸಿಕೊಳ್ಳತಕ್ಕ ಪ್ರಯತ್ನವನ್ನು ಈ ಮಸೂದೆಯ ಮೂಲಕ ಮಾಡುತ್ತಿದ್ದೀರಿ. ಆದ್ದರಿಂದ ನಾನು ಈ ಮಸೂದೆಯನ್ನು ವಿರೋಧಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

---

* ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಖಾತೆಯ ರಾಜ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾ ಈ ಮಸೂದೆಯ ಬಗ್ಗೆ ಎರಡು ಮೂರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಇದರಲ್ಲಿ ಮುಖ್ಯವಾಗಿ 1983 84ನೆಯ ಸಾಲಿನಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ನಾವು ಹೆಚ್ಚಿನ ಸೀಟುಗಳನ್ನು ಕೊಟ್ಟಿದ್ದೇವೆ ಎಂದು ಒಂದು ರೀತಿಯಲ್ಲಿ ಅವರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ವಸ್ತುಸ್ಥಿತಿ ಈ ರೀತಿಯಾಗಿದೆ. 1982-83ನೆಯ ಸಾಲಿನಲ್ಲಿ ಒಟ್ಟು ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಕೊಟ್ಟಂಥ ಸೀಟುಗಳು 884, ಈ ವರ್ಷ 1983-84ರಲ್ಲಿ ನಾವು ಕೊಟ್ಟಿರತಕ್ಕದ್ದು 900. ಅಂದರೆ 16 ಸೀಟುಗಳನ್ನು 82-83ಕ್ಕಿಂತ 83-84ರಲ್ಲಿ ನಾವು ಹೆಚ್ಚು ಮಾಡಿದ್ದೇವೆ. ಇದನ್ನು ನಾನು ಒಪ್ಪುತ್ತೇನೆ. ಆದರೆ 82-83ರಲ್ಲಿ ಗೌರ್ನಮೆಂಟ್ ಸೆಲೆಕ್ಷನ್ ಕಮಿಟಿಯವರು ಅಂದರೆ ಡೈರೆಕ್ಟರ್ ಆಫ್ ಮೆಡಿಕಲ್ ಎಜುಕೇಷನ್‌ನವರು ಯಾವ ರೀತಿ ಮೆರಿಟ್ ಪ್ರಕಾರ ಕೆಟಗರಿವೈಸ್ ರಿಸರ್ವೇಷನ್ ಮಾಡುತ್ತಾರೋ ಆ ಪ್ರಕಾರ ತೆಗೆದುಕೊಂಡಿರತಕ್ಕ ಸೀಟುಗಳು 260. 83-84ರಲ್ಲಿ ನಾವು ತೆಗೆದುಕೊಂಡಿರತಕ್ಕ ಸೀಟುಗಳು 316 ಅಂದರೆ 56 ಸೀಟುಗಳನ್ನು 82-83ಕ್ಕಿಂತ 83-84ರಲ್ಲಿ ಹೆಚ್ಚಾಗಿ ಖಾಸಗಿ ಕಾಲೇಜುಗಳಿಂದ ನಾವು ತೆಗೆದುಕೊಂಡಿದ್ದೇವೆ. ಆದರೆ ಈ 16 ಸೀಟುಗಳನ್ನು ನಾವು ಏತಕ್ಕೋಸ್ಕರ ಹೆಚ್ಚು ಮಾಡಿದ್ದೇವೆ ಎಂದರೆ ಇದನ್ನು ಮಾಡತಕ್ಕವರು ಕರ್ನಾಟಕ ರಾಜ್ಯ ಸರ್ಕಾರದವರಲ್ಲ. ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು. ಇವರು ದಾವಣಗೆರೆ ಮೆಡಿಕಲ್ ಕಾಲೇಜನ್ನು ಇನ್ಸ್‌ಪೆಕ್ಷನ್ ಮಾಡಿ ಅವರಿಗೆ 16 ಸೀಟುಗಳನ್ನು ಕೊಡಬೇಕೆಂದು ಬರವಣಿಗೆಯಲ್ಲಿ ಕೊಟ್ಟು ತೀರ್ಮಾನ ಮಾಡಿದ್ದಾರೆ. ಇದನ್ನು ನಾವು ಯಾರೂ ತೀರ್ಮಾನ ಮಾಡಿಲ್ಲ. ನಾವು ಪ್ರಾರಂಭದಲ್ಲಿ ಇನ್‌ಟೇಕನ್ನು ಫಿಕ್ಸ್ ಮಾಡಿದಾಗ ದಾವಣಗೆರೆ ಕಾಲೇಜಿಗೆ ಒಂದು ಸೀಟನ್ನೂ ಸಹ ಹೆಚ್ಚು ಮಾಡಿಲ್ಲ. ಇದನ್ನು ಐ.ಎಂ.ಸಿ.ಯವರು ಮಾಡಿದ್ದಾರೆ. ಅದರಲ್ಲಿಯೂ ಸಹ ನಾವು ಸೀಟುಗಳನ್ನು ತೆಗೆದುಕೊಂಡಿದ್ದೇವೆ. ಇದರಿಂದಾಗಿ ನಿಮ್ಮ ಒಂದು ಕಲ್ಪನೆ ಏನು ಇದೆ ಎಂದರೆ 82-83ರಲ್ಲಿ ಖಾಸಗಿ ಕಾಲೇಜುಗಳಿಗೆ ಹೆಚ್ಚು ಸೀಟುಗಳನ್ನು ಕೊಟ್ಟಿದ್ದೇವೆಂದು ಹೇಳುವುದು ಅದು ಸರಿಯಾದುದಲ್ಲ. 1983-84ರಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳಿಂದ ಮೆರಿಟ್ ಮತ್ತು ರಿಸರ್ವೇಷನ್ ಕೆಟಗರಿಗೆ ಸುಮಾರು 56ಕ್ಕಿಂತ ಹೆಚ್ಚು ಸೀಟುಗಳನ್ನು ತೆಗೆದುಕೊಂಡಿದ್ದೇವೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಎರಡನೆಯದಾಗಿ, ಅವರು ಮಣಿಪಾಲ್ ಮೆಡಿಕಲ್ ಕಾಲೇಜ್ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟ ಸರ್ಕಾರಿ ಆಜ್ಞೆ ನನ್ನ ಹತ್ತಿರ ಇಲ್ಲ. ನಾನು ಅದನ್ನು ತರಿಸಿ ನಂತರ ಹೇಳುತ್ತೇನೆ. ಮಂಗಳೂರು ಮತ್ತು ಮಣಿಪಾಲ್ ಮೆಡಿಕಲ್ ಕಾಲೇಜುಗಳನ್ನು ಸಪರೇಟ್ ಮಾಡಿದಾಗ 75-76ರಲ್ಲಿ ಸರ್ಕಾರಿ ಆಜ್ಞೆ ಇದ್ದರೂ ಸಹ ....

ಶ್ರೀ ಹೆಚ್.ಡಿ. ದೇವೇಗೌಡ.— ಸರ್ಕಾರಿ ಆಜ್ಞೆ ಆಗಿಲ್ಲ, ಇದರ ಬಗ್ಗೆ ಆಗಾಗ್ಗೆ ಚರ್ಚೆ ನಡೆದಿದೆ. ಇದನ್ನು ಬ್ರೈಫರ್ಕೆಟ್ ಮಾಡಿದ ವಿಚಾರ ಸಭೆಯಲ್ಲಿ ಬಂದಿದೆ.

ಡಾ. ವಿ.ಎಸ್. ಆಚಾರ್ಯ.— ಹಿಂದೆ ಮಣಿಪಾಲ್ ಕಾಲೇಜಿನಲ್ಲಿ ಕ್ಲಿನಿಕಲ್ ಫೆಸಿಲಿಟೀಸ್ ಇಲ್ಲದೆ ಇದ್ದುದರಿಂದ ಅಲ್ಲಿಯ ವಿದ್ಯಾರ್ಥಿಗಳು ಮಂಗಳೂರಿಗೆ ಬರುತ್ತಿದ್ದರು. ಕ್ರಮೇಣ ಮಣಿಪಾಲ್ ಕಾಲೇಜಿನ ಸಂಖ್ಯೆ ಕಡಿಮೆಯಾಗುವ ಪರಿಸ್ಥಿತಿ ಬಂತು. ಆದ್ದರಿಂದ ಈ ಎರಡು ಕಾಲೇಜಗಳನ್ನು ಹಿಂದೆಯೇ ಬೇರೆ ಬೇರೆ ಮಾಡಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಈ ಎರಡು ಕಾಲೇಜುಗಳ ಬಗ್ಗೆ ಸರ್ಕಾರಿ ಆಜ್ಞೆ ಆಗಿರಲಿ, ಆಗದೇ ಇರಲಿ, ನಾವು ಮಾತ್ರ ಇವುಗಳನ್ನು ಸಪರೇಟ್ ಕಾಲೇಜುಗಳೆಂದೇ ಟ್ರೀಟ್ ಮಾಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ತಾವು ಇಲ್ಲಿ ಹೇಳಿಕೆಯನ್ನು ಕೊಡುವ ಮೊದಲು ವಿಷಯವನ್ನು ತಿಳಿದು ನಾಳೆ ಹೇಳಿಕೆ ಕೊಡಿ, ಇದರ ಬಗ್ಗೆ ಸಾಕಷ್ಟು ಇತಿಹಾಸ ಇದೆ. ತಾವು ಓರಲ್ ಆಗಿ ಹೇಳುವುದು ಬೇಡ. ತಾವು ಸರಿಯಾದ ಉತ್ತರವನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ. ನನಗೆ ತಿಳಿದ ಮಟ್ಟಿಗೆ ತಾವು ಈ ಕಾಲೇಜುಗಳಿಗೆ ಸಪರೇಟ್ ಆಗಿ ಇನ್‌ಟೇಕ್ ಫಿಕ್ಸ್ ಮಾಡಿರಬಹುದು, ಆದರೆ ಕಾಲೇಜುಗಳನ್ನು ಸಪರೇಟ್ ಮಾಡಿದ ಬಗ್ಗೆ ಆಜ್ಞೆ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ.— 1975-76 ರಿಂದ ಈ ಎರಡು ಕಾಲೇಜುಗಳನ್ನು ಸಪರೇಟ್ ಮೆಡಿಕಲ್ ಕಾಲೇಜುಗಳೆಂದು ಟ್ರೀಟ್ ಮಾಡುತ್ತಿರುವುದು ನಿಜ. ಮಣಿಪಾಲ್ ಕಾಲೇಜಿನವರು 81-82, 82-83ರಲ್ಲಿ ಸರ್ಕಾರದಿಂದ ಸಹಾಯವನ್ನು ತೆಗೆದುಕೊಂಡಿಲ್ಲ. ಏಕೆಂದರೆ ಅವರು ನಾವು

ಕ್ಯಾಪಿಟೇಷನ್ ಕಲೆಕ್ಟ್ ಮಾಡುತ್ತಿಲ್ಲ ಬೇರೆ ರೀತಿಯಲ್ಲಿ ಕಲೆಕ್ಟ್ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅವರು ಈ ರೀತಿಯಾಗಿ ಸುಳ್ಳು ಮಾಹಿತಿಯನ್ನು ನಮಗೆ ಕೊಟ್ಟಿದ್ದಾರೆ. ಅವರು ನಮ್ಮಿಂದ ಕ್ಲಿನಿಕಲ್ ಫೆಸಿಲಿಟೀಸ್ ಮಾತ್ರ ತೆಗೆದುಕೊಳ್ಳುತ್ತಿಲ್ಲ. ಖಾಸಗಿ ಕಾಲೇಜುಗಳಿಗೆ ನಾವು ಸೀಟುಗಳನ್ನು ಕೊಡಬೇಕು ಮತ್ತು ಕ್ಲಿನಿಕಲ್ ಫೆಸಿಲಿಟೀಸನ್ನು ಸರ್ಕಾರ ಕೊಡಬೇಕು ಎಂದರೆ ಸರ್ಕಾರದವರು ಲಕ್ಷಾಂತರ ರೂಪಾಯಿ ಖರ್ಚು ಮಾಡಬೇಕಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ.— 1975–76 ರಿಂದ ಸರ್ಕಾರ ಮಣಿಪಾಲ್ ಮತ್ತು ಮಂಗಳೂರು ಕಾಲೇಜುಗಳನ್ನು ಎರಡು ಪ್ರತ್ಯೇಕ ಯೂನಿಟ್‌ಗಳು ಎಂದು ತಿಳಿದುಕೊಂಡು ಆ ರೀತಿಯಾಗಿ ಕೆಲಸಗಳನ್ನು ಸರ್ಕಾರ ಮಾಡಿಕೊಂಡು ಬಂದಿದೆ. ಆದರೆ ಇದರ ಬಗ್ಗೆ ಇವತ್ತಿನವರೆಗೂ ಸರ್ಕಾರಿ ಆಜ್ಞೆ ಆಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— I have got an order. This is dated 7th September, 1981. It is stated here that "Accordingly Government are pleased to order distribution of seats in Kasturba Medical College, Manipal Section etc." It is treated as a seperate section.

ಶ್ರೀ ಹೆಚ್.ಡಿ. ದೇವೇಗೌಡ.— ಮಣಿಪಾಲ್ ಮತ್ತು ಮಂಗಳೂರು ಕಾಲೇಜುಗಳಿಗೆ ಇಷ್ಟು ಅಡ್ಮಿಷನ್ ಮಾಡಿದ್ದಾರೆಂದು ಆರ್ಡರ್ ಇದೆ, That is for that particular year

ಎರಡನೆಯದು, ಇವರಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಸೀಟುಗಳನ್ನು ನಿರ್ಣಯ ಮಾಡಿಕೊಂಡು ಬಂದಿದ್ದಾರೆ. ಈ ಸದನದಲ್ಲಿ ಸಾಕಷ್ಟು ಹೋರಾಟ ಇದರ ಮೇಲೆ ಆಗಿದೆ. ಇರತಕ್ಕ ವಸ್ತುಸ್ಥಿತಿಯನ್ನು ನಾನು ಇಲ್ಲಿ ಹೇಳಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ.— ರಾಜ್ಯ ಸರ್ಕಾರ ಇದಕ್ಕೆ ಎರಡು ಕಡೆಗೆ ರೆಕಗ್ನೈಸ್ ಮಾಡಿರುವುದನ್ನು ಒಪ್ಪಿಕೊಂಡಿಲ್ಲದೇ ಹೋದರೂ 1975 ರಿಂದ ಒಂದೇ ಸಮನೆ ಬೇರೆ ಬೇರೆ ಅರ್ಥ ಕೊಟ್ಟುಕೊಂಡು ಬಂದಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ರಾಜ್ಯ ಸರ್ಕಾರ ಒಪ್ಪಿಕೊಂಡಿಲ್ಲ, ಸೀಟ್ ಅಲಾಟ್‌ಮೆಂಟ್ ಬೇರೆ ಬೇರೆ ಕಡೆ ಆಗಿರಬಹುದು.

As far as Government is concerned, they have still not treated as independent. They are treated as separate section because 1981 black and white Governmet Order is there

ಶ್ರೀ ಪಿ.ಜಿ.ಆರ್. ಸಿಂಧ್ಯ. – ಇದರ ಬಗ್ಗೆ ಜಿಜ್ಞಾಸೆ ಬೇಡ. ಮಣಿಪಾಲ್ ಮೆಡಿಕಲ್ ಕಾಲೇಜಿನಲ್ಲಿ 1981–82ರಲ್ಲಿ ಮಂಜೂರು ಮಾಡಿದಂಥ ಒಂದು ಸೀಟನ್ನು ಸರ್ಕಾರ ತೆಗೆದುಕೊಂಡಿಲ್ಲ. 82–83 ರಲ್ಲೂ ತೆಗೆದುಕೊಂಡಿಲ್ಲ. 83–84ರಲ್ಲೂ ತೆಗೆದುಕೋಡಿಲ್ಲ. ನಾವು ಕ್ಯಾಪಿಟೇಷನ್ ಫೀ ಕಲೆಕ್ಟ್ ಮಾಡುತ್ತಿಲ್ಲವೆಂದು ಹೇಳುತ್ತಾರೆ. ಕಲೆಕ್ಟ್ ಮಾಡಿರುವುದರ ಬಗ್ಗೆ ಸಾಕ್ಷ್ಯ ತೆಗೆದುಕೊಂಡು ಬಂದರೆ ವಿಚಾರಣೆ ಮಾಡಿಸೋಣ. ಕ್ಲಿನಿಕಲ್ ಫೆಸಿಲಿಟೀಸ್ ನಾವು ಕೊಡುತ್ತಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.— ಇಲ್ಲಿ ಸಂಖ್ಯೆಗಳ ವಿಚಾರ ಬೇಕಾಗಿಲ್ಲ. ಹೊಸದಾಗಿ ಕಾನೂನು ತರುತ್ತಿದ್ದೀರಿ, ಇವೆಲ್ಲವನ್ನೂ ಸೇರಿಸಿದರೆ ಒಳ್ಳೆಯದು. ಸಾರಾಸಗಟಾಗಿಬಿಡು ವಂಥ ಆಲೋಚನೆ ಇದ್ದರೆ ಹೇಳಿ. ಎಕ್ಸಿಕ್ಯೂಟೀವ್ ಆರ್ಡರ್ ಮೇಲೆ ತಡೆಯಾಜ್ಞೆ ತಂದಿದ್ದರೂ ಕಾನೂನಿನಲ್ಲಿ ಏತಕ್ಕೆ ಸೇರಿಸಿಲ್ಲ. ಇವರಿಗೆ ಅವಕಾಶ ಕೊಟ್ಟರೆ ಬಾಕಿ ಕಾಲೇಜಿನವರು ತರುತ್ತಾರೆ. ನಾಳೆ ರಾಮಯ್ಯ ಮೆಡಿಕಲ್ ಕಾಲೇಜಿನವರು ಕ್ಲಿನಿಕಲ್ ಫೆಸಿಲಿಟೀಸ್ ಮಾಡಿಕೊಳ್ಳುತ್ತೇವೆಂದು ಹೇಳುತ್ತಾರೆ. ಇದರಿಂದ ಈ ಮಸೂದೆಯ ಉದ್ದೇಶವೇ ಸಫಲವಾಗುವುದಿಲ್ಲ, ಈ ಮಸೂದೆ ಇಂಜಿನಿಯರಿಂಗ್ ಕಾಲೇಜುಗಳಿಗೆ ಅನ್ವಯಿಸುವುದಿಲ್ಲ ಎಂದು ಹೇಳಿದರೆ, ಅಪಾಯದ ಗಂಟೆ ಬಾರಿಸಿದಂತಾಗುತ್ತದೆಂಬುದನ್ನು ತಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ.— ನಿಮ್ಮ ಕಲ್ಪನೆಗೆ ನಾನು ಉತ್ತರವಾಗಿ ವಿವರಣೆ ಕೊಡಬೇಕಾಗಿ ಬಂತು. ಯಾವ ಯಾವ ಕಾಲೇಜುಗಳು ಕ್ಲಿನಿಕಲ್ ಫೆಸಿಲಿಟೀಸ್ ತೆಗೆದುಕೊಂಡು ಕ್ಯಾಪಿಟೇಷನ್ ಶುಲ್ಕವನ್ನು ವಸೂಲು ಮಾಡುತ್ತಾರೆ. ಅಂತಹ ಕಾಲೇಜುಗಳಲ್ಲಿ ಇದನ್ನು ರದ್ದು ಮಾಡುವ ಉದ್ದೇಶದಿಂದ ತರುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಣಿಪಾಲ್ ಮೆಡಿಕಲ್ ಕಾಲೇಜಿಗೆ ಅನುಕೂಲ ಮಾಡುವುದಕ್ಕಾಗಿ ಪ್ರಾರಂಭದಲ್ಲಿಯೇ ತಪ್ಪು ಮಾಡುವುದರಿಂದ ಮಸೂದೆಯ ಇಡೀ ಉದ್ದೇಶವೇ ಹೊರಟು ಹೋಗುತ್ತದೆ.

ಶ್ರೀ ಪಿ.ಜಿ ಆರ್. ಸಿಂಧ್ಯ.— ಖಾಸಗೀ ಮೆಡಿಕಲ್ ಕಾಲೇಜಿನವರು ಯಾರು ಯಾರು ಕ್ಲಿನಿಕಲ್ ಫೆಸಿಲಿಟೀಸ್ ತೆಗೆದುಕೊಳ್ಳುತ್ತಾರೆ. ಹತ್ತು ಲಕ್ಷ ರೂಪಾಯಿಗಳನ್ನು ಸರ್ಕಾರಕ್ಕೆ ಕಟ್ಟಬೇಕೆಂದು ಹೊಸದಾಗಿ ಸರ್ಕಾರಿ ಆಜ್ಞೆ ಮಾಡಿದ್ದೇವೆ, ಯಾರು ಹಿಂಗೆ ಮಾಡಿರಲಿಲ್ಲ.

ಶ್ರೀ ಬಿ. ರಾಚಯ್ಯ.— ಮಾನ್ಯ ಉಪಾಧ್ಯಕ್ಷರೇ,

ಶ್ರೀ ಗೋವಿಂದ ಪಿ. ಒಡೆಯರಾಜ್.— ಮಾನ್ಯ ಸಭಾಪತಿಗಳೇ ನಮಗೆ 5 ಗಂಟೆಗೆ **ಪಾರ್ಟಿ** ಮೀಟಿಂಗ್ ಇದೆ. ನಾವುಗಳು ಹೋಗಬೇಕು.

ಉಪಾಧ್ಯಕ್ಷರು.—ನಿನ್ನೆ ವಿರೋಧಪಕ್ಷದ ನಾಯಕರು ಇವತ್ತೇ ಮುಗಿಸೋಣವೆಂದು ಹೇಳಿದ್ದರು.

ಶ್ರೀ ಕೆ.ಹೆಚ್. ರಂಗನಾಥ್.— ನಮ್ಮ ಪಕ್ಷದ ಮೀಟಿಂಗ್ 5 ಗಂಟೆಗೆ ಇದೆ. ಅಲ್ಲದೆ ಮಸೂದೆಯನ್ನು ಕ್ಲಾಸ್ ಬೈ ಕ್ಲಾಸ್ ಅಮೆಂಡ್‌ಮೆಂಟ್ ಮಾಡಬೇಕಾದರೆ ಕನಿಷ್ಟ ಒಂದು ಗಂಟೆಯಾದರೂ ಬೇಕಾಗುತ್ತೆ, ಮಾನ್ಯ ಮಂತ್ರಿಯವರು ನಾಳೆ ಉತ್ತರ ಕೊಡಲಿ, ಇದೇನು ಹೊಸ ಸಂಪ್ರದಾಯವಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.— ನಿನ್ನೆ ಕೂಡ ಹೇಳಿದರು.

ಶ್ರೀ ಕೆ.ಹೆಚ್. ರಂಗನಾಥ್.— ಬೇಕಾದರೆ ಮಾಡಿಕೊಳ್ಳಿ.

ಶ್ರೀ ಬಾಪುಗೌಡ ದರ್ಶನಾಪುರ.—ಉದ್ದೇಶ ಬೇರೆ ಇಟ್ಟುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಕೆ.ಹೆಚ್ ರಂಗನಾಥ್.— ಬೇರೆ ಉದ್ದೇಶ ಏನೂ ಇಲ್ಲ.

ಶ್ರೀ ಬಾಪುಗೌಡ ದರ್ಶನಾಪುರ.— ಸ್ವಾಮಿ, ಸಂಪೂರ್ಣವಾಗಿ ಚರ್ಚೆಯಾಗಿದೆ. ಕೂಲಂಕುಷವಾಗಿ ಚರ್ಚೆಯಾಗಿದೆ, ಇವತ್ತೇ ಮುಗಿಸಿಬಿಡಿ.

ಶ್ರೀ ಬಿ. ರಾಚಯ್ಯ. — ನಾನು 5 ನಿಮಿಷದಲ್ಲಿ ಉತ್ತರ ಮುಗಿಸುತ್ತೇನೆ.

ಉಪಾಧ್ಯಕ್ಷರು.— 5 ನಿಮಿಷದಲ್ಲಿ ಉತ್ತರ ಮುಗಿಸುತ್ತೇನೆಂದು ಹೇಳುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್.— ಅಮೆಂಡ್‌ಮೆಂಟ್ ಇದೆ. ಅಮೆಂಡ್‌ಮೆಂಟ್ ಮೂವ್ ಮಾಡತಕ್ಕಂಥಾದ್ದು ನಮ್ಮ ಹಕ್ಕು. ಅದನ್ನು ಯಾರೂ ಕಸಿದುಕೊಳ್ಳುವುದಕ್ಕಾಗುವುದಿಲ್ಲ. ತಾವು ಅದಕ್ಕೆ ಅಪ್ಪಣೆ ಕೊಡಬೇಕಾಗುತ್ತೆ. ನಾವು ಮಾತನಾಡಬೇಕಾಗುತ್ತದೆ ಮತಕ್ಕೆ ಹಾಕಬೇಕಾಗುತ್ತದೆ ಇವತ್ತು ಬೆಳಿಗ್ಗೆ 9 ಗಂಟೆಗೆ ಪಕ್ಷದ ಸದಸ್ಯರು ಬಂದಿದ್ದಾರೆ. ಕೆಲವರು ಊಟ ಕೂಡ ಮಾಡಿಲ್ಲ. ನಾಳೆ ತೆಗೆದುಕೊಳ್ಳಿ, ಮುಗಿಸಿಕೊಡುತ್ತೇವೆ.

ಉಪಾಧ್ಯಕ್ಷರು.— ಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಕೆ.ಹೆಚ್. ರಂಗನಾಥ್.— ಪಕ್ಷದ ಸಭೆಗಳು ಸೇರಿದಾಗ ಸದನವನ್ನು ಮುಂದುವರಿಸಿರುವುದು ಉಂಟು. ಸಂಪ್ರದಾಯ ಇಲ್ಲ ಅಂದರೆ ಏನೂ ಮಾಡುವುದಕ್ಕಾಗುವುದಿಲ್ಲ. ಇದರಲ್ಲಿ ಎಲ್ಲರ ಸಹಕಾರವೂ ಬೇಕಾಗುತ್ತದೆ.

ಉಪಾಧ್ಯಕ್ಷರು. — ನನಗೆ ಇಬ್ಬರ ಸಹಕಾರವೂ ಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.— ಇವತ್ತು ಬೆಳಿಗ್ಗೆ ಕೂಡ ನಮ್ಮ ಪಕ್ಷದ ಸಭೆ ಇತ್ತು. ಸಾಯಂಕಾಲ 5 ಗಂಟೆಗೆ ಮತ್ತೆ ಇಟ್ಟುಕೊಂಡಿದ್ದೇವೆ. ಸದಸ್ಯರುಗಳೆಲ್ಲಾ ಸಭೆಗೆ ಹೋಗಬೇಕಾಗುತ್ತದೆ. ಇದರಲ್ಲಿ ನಮ್ಮ ದುರುದ್ದೇಶವೇನೂ ಇಲ್ಲ.

ಶ್ರೀ ಬಿ. ರಾಚಯ್ಯ.— ಮಾನ್ಯ ವಿರೋಧಪಕ್ಷದ ನಾಯಕರು ಕೆಲವು ಚಾರ್ಜಸ್ ಮಾಡಿದ್ದಾರೆ. ಅದಕ್ಕೆ ನಾನು ರಿಪ್ಲೈ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಅದು ನಾಳೆ ಪೇಪರಿಗೆ ಹೋಗುತ್ತದೆ. ಆದ್ದರಿಂದ ಅದರ ಬಗ್ಗೆ ಹೇಳಿಬಿಡುತ್ತೇನೆ, ಅನಂತರ ತಾವು ಸಭೆಯನ್ನು ನಾಳೆಗೆ ಮುಂದುವರಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ.— ಬೆಳಿಗ್ಗೇನೆ ಆ ವಿಷಯಕ್ಕೆ ಉತ್ತರ ಕೊಟ್ಟಿದ್ದೀರಲ್ಲಾ.

ಶ್ರೀ ಜಿ. ಪಿ. ಒಡೆಯರಾಜ್.— ನಮ್ಮನ್ನು ಬಿಟ್ಟು ಇಲ್ಲಿ ಮಾತನಾಡಿದರೆ ಏನು ಪ್ರಯೋಜನ ?

ಉಪಾಧ್ಯಕ್ಷರು.— ರಿಪ್ಲೈ ಮುಗಿಸಲಿ, ನಾಳೆ ಮತಕ್ಕೆ ಹಾಕೋಣ.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್.— ಅಧ್ಯಕ್ಷರೇ, ಈ ಕಾನೂನು ಜಾರಿಯಲ್ಲಿದೆ, ಇವತ್ತು ಆಗದಿದ್ದರೆ ಇದೇನು ಬಿದ್ದು ಹೋಗುವುದಿಲ್ಲ. ನಾಳೆಗೆ ಪಾಸ್ ಮಾಡಿಕೊಳ್ಳಬಹುದು.

ಉಪಾಧ್ಯಕ್ಷರು. — ಅವರು ಒಂದು 5 ನಿಮಿಷ ಮಾತನಾಡಲಿ, ಆಮೇಲೆ ಸಭೆಯನ್ನು ನಾಳೆಗೆ ಮುಂದುವರಿಸೋಣ. ಇದನ್ನು ಪ್ರಿಸ್ಟೀಜ್ ಇಶ್ಯೂ ಆಗಿ ಏತಕ್ಕೆ ತೆಗೆದುಕೊಳ್ಳುತ್ತೀರಿ ?

ವಿರೋಧ ಪಕ್ಷದ ಸದಸ್ಯರುಗಳು.— ನಾವು ಪಾರ್ಟಿ ಮೀಟಿಂಗ್‌ಗೆ ಹೋಗಬೇಕಾಗಿದೆ.

ಉಪಾಧ್ಯಕ್ಷರು.— ನಾನು ತಮಗೆ ಆಶ್ವಾಸನೆ ಕೊಡುತ್ತೇನೆ, ಇವತ್ತು ಅವರ ಭಾಷಣ ಮುಗಿಯಲಿ, ನಾಳೆ ಮತಕ್ಕೆ ಹಾಕೋಣ. 10 ನಿಮಿಷ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಭೀಮಣ್ಣ ಖಂಡ್ರೆ.— ಇಲ್ಲಿ ಓಟಿನ ಪ್ರಶ್ನೆ ಅಲ್ಲ, ಟೈಮಿನ ಪ್ರಶ್ನೆ ಇದೆ. ನಾವು ಮೀಟಿಂಗ್‌ಗೆ ಹೋಗಬೇಕಾಗಿದೆ.

(ಗೊಂದಲ)

ಶ್ರೀ ಬಿ. ರಾಚಯ್ಯ.— ಅಧ್ಯಕ್ಷರೇ, ಕಳೆದ 2 ದಿವಸಗಳಿಂದ ಈ ಮಾನ್ಯ ಸಭೆಯಲ್ಲಿ ವೃತ್ತಿಪರ ಶುಲ್ಕವನ್ನು ತೆಗೆದುಹಾಕಿ ಪ್ರವೇಶವನ್ನು ತಾಂತ್ರಿಕ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಸುಲಭವಾಗಿ

ಪ್ರವೇಶ ಸಿಕ್ಕುವ ಹಾಗೆ ಮಾಡಬೇಕು ಎನ್ನುವ ಬಗ್ಗೆ ಸರ್ವ ಸಾಮಾನ್ಯವಾಗಿ ಪಕ್ಷಾತೀತವಾಗಿ ಎಲ್ಲರೂ ಅದನ್ನು ಒಪ್ಪಿಕೊಂಡಿದ್ದಾರೆ.

(ಗೊಂದಲ)

Sri K H. Ranganath.— With all the humility, I would say that this is most impolite on the part of the Government. We have been requesting them that we had the Party meeting at 9 A.M. and we hav to adjourn becau e of the Session at 11 A.M. We have decided again to meet now. This is only a request. We are not adopting any delayed tactics.

Sri B Somashekar.— Yesterday also, you put forth the same plea What is your intention?

(Interruptions)

Sri B. Rachaiah.— I will just take a few minutes. I would request the Opposition Members to kindly co-operate.

Sri K. H Ranganath.— We have been telling that we have the Party meeti g now. Let us adjourn and take up this subject tomorrow. It is only an ordinance replacing the Bill. With all humility, I would say that this would be the most impolite on the part of the Government. If they are not conceding to our requests, it would not be fair on their part.

Sri B. Somashekar.— It would have been concluded by this time. What is your intention ?

ಶ್ರೀ ಕೆ. ಹೆಚ್. ರಂಗನಾಥ್.— ನಾವು ಇಷ್ಟು ಕೇಳಿಕೊಂಡ ಮೇಲೂ ಕೂಡ ಮಂತ್ರಿಗಳವರು ಉತ್ತರ ಈಗಲೇ ಕೊಡುತ್ತೇನೆಂದು ಹೇಳಿದರೆ ನಾವು ಮಾಡುವುದಾದರೂ ಏನು ?

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್.— ಈ ಸದನದ ನಾಯಕರು ಬಂದಿದ್ದಾರೆ, ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ ನಾವು ಬೆಳಿಗ್ಗೆ 9 ಗಂಟೆಗೆ ಬಂದಿದ್ದೇವೆ, 11 ಗಂಟೆಯಿಂದ 5 ಗಂಟೆಯುವರೆಗೆ ಇಲ್ಲಿ ಭಾಗವಹಿಸಿದ್ದೇವೆ, ಮತ್ತು ಪುನಃ ಈಗ ನಮಗೆ ಪಾರ್ಟಿ ಮೀಟಿಂಗ್ ಇದೆ. ಈಗ ಮಾನ್ಯ ಸಚಿವರು ಮಂಡಿಸಿರತಕ್ಕಂಥಾದ್ದು ರೀಪ್ಲೇಸಿಂಗ್ ಬಿಲ್ಲಾಗಿದೆ. ಆದ್ದರಿಂದ ಇದನ್ನು ಇವತ್ತೇ ಪಾಸು ಮಾಡಬೇಕೆಂದು ಏನೂ ಇಲ್ಲ. ನಾಳೆಗೆ ತೆಗೆದುಕೊಳ್ಳಬಹುದು.

ಶ್ರೀ ಬಿ. ರಾಚಯ್ಯ. — ಅಧ್ಯಕ್ಷರೇ, ನಿನ್ನೆ ದಿವಸ ಕೂಡ ಹೀಗೇ ಆಯಿತು ....

Sri K. H. Ranganath.— Are we to take we should also adopt the same thing in respect of the attitude of the Government ?

ಉಪಾಧ್ಯಕ್ಷರು. — ಪಾರ್ಟಿ ಮೀಟಿಂಗ್ ಇದೆ, ಆದ್ದರಿಂದ ಸಭೆಯನ್ನು ನಾಳೆಗೆ ಮುಂದುವರಿಸಿ ಎಂದು ಹೇಳುತ್ತಿದ್ದಾರೆ , ಇದಕ್ಕೆ ತಮ್ಮ ಅಭಿಪ್ರಾಯ ಏನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).— ಪಾರ್ಟಿ ಮೀಟಿಂಗ್ ನಮ್ಮದೂ ಉಂಟು. ಇವತ್ತು ಬೆಳಿಗ್ಗೇನೆ ಇತ್ತು; ಮಾನ್ಯ ವಿರೋಧ ಪಕ್ಷದನಾಯಕರವರು ಹೇಳಿದರು, ಈಗಾಗಲೇ 5ಗಂಟೆ ಆಗಿ ಹೋಯಿತು, ಇನ್ನು ಹೆಚ್ಚು ಕೂರುವುದಕ್ಕೆ ಆಗುವುದಿಲ್ಲವೆಂದು. ಸರ್ಕಾರೀ ಕೆಲಸದಲ್ಲಿ ನಮ್ಮ ಟೈಮ್ ಟೇಬಲ್ ಪ್ರಕಾರವಾಗಿ ಎಷ್ಟು ಹಿಂದೆ ಬಿದ್ದಿದ್ದೇವೆ ಎನ್ನುವುದನ್ನು ತಾವು ತೆಗೆದು ನೋಡಿ. ಮಾನ್ಯ ರಂಗನಾಥ್‌ರವರು ಬಹಳ ಅನುಭವಿಗಳಾಗಿದ್ದಾರೆ. ನಾನು ಅವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ನಮಗೆ ಇನ್ನು 2-3 ದಿವಸ ಅವಕಾಶ ಇರುವುದು. ಅಷ್ಟರಲ್ಲಿ ನಾವು ಸಾಕಷ್ಟು ಬಿಲ್ಲನ್ನು ಪಾಸ್ ಮಾಡಿ ಕೌನ್ಸಿಲ್‌ಗೆ ಕಳುಹಿಸಿ ಕೊಡಬೇಕಾಗಿದೆ. ಈಗ ಕೌನ್ಸಿಲ್‌ನಲ್ಲಿ ಎಲ್ಲಾ ಪಾಸಾಗಿದೆ. ಅವರು 17ನೇ ತಾರೀಖು ಸೇರಿದ ಮೇಲೆ ನಾವು ಇಲ್ಲಿ ಡಿಮ್ಯಾಂಡ್ ಮೇಲೆ ಡಿಸ್ಕಸ್ ಮಾಡುತ್ತೇವೆ. ಆ ಹೊತ್ತಿನಲ್ಲಿ ಅವರಿಗೆ ಬೇರೆ ಬಿಸಿನೆಸ್ ಇಲ್ಲ. ಆದ್ದರಿಂದ ಈಗ ಈ ಬಿಲ್ಲನ್ನು ಪಾಸ್ ಮಾಡಿ ಅಲ್ಲಿಗೆ ಕಳುಹಿಸಿಕೊಡಬೇಕಾಗಿದೆ. ಆದುದರಿಂದ ತಾವು ದಯಮಾಡಿ ಸಹಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಗಂಟೆಗಟ್ಟಲೆ ಕೂರಬೇಕೆಂದು ನಾವು ಕೇಳುತ್ತಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್ —ತಿದ್ದುಪಡಿಗಳು ಬಹಳ ಇದೆ ಅದನ್ನು ಸಭಾನಾಯಕರು ನೋಡಿಲ್ಲವೆಂದು ಕಾಣುತ್ತದೆ. ಅದಕ್ಕೆ ಇನ್ನು ಅರ್ಧ ಗಂಟೆಯಾದರೂ ಬೇಕಾಗುತ್ತದೆ. ಇದನ್ನು ತತ್‌ಕ್ಷಣ ಪಾಸ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ. —ತಿದ್ದುಪಡಿ ಮೇಲೆ ಯಾರದೂ ಭಾಷಣ ಆಗದಿದ್ದರೆ ಎಲ್ಲಾ ಅಮೆಂಡ್ ಮೆಂಟ್ಸ್‌ಗಳನ್ನು 15 ನಿಮಿಷಗಳಲ್ಲಿ ಮುಗಿಸಬಹುದು. 15-20 ನಿಮಿಷಗಳಲ್ಲಿ ಏನೂ ಆಗುವುದಿಲ್ಲ. ಆದ್ದರಿಂದ ಇನ್ನು 10-15 ನಿಮಿಷ ಬಳಿತ ಕೊಳ್ಳೋಣವೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು)- — ಮಾನ್ಯ ಉಪಾಧ್ಯಕ್ಷರೇ, ಎರಡು ದಿವಸಗಳಿಂದ ಈ ಮಾನ್ಯ ಸಭೆಯಲ್ಲಿ ನಾನು ಕಂಡಂಥ ಮಾನ್ಯ ಸದಸ್ಯರೆಲ್ಲರೂ ಕೂಡ ಈ ವೃತ್ತಿಪರ ಶುಲ್ಕವನ್ನು ತೆಗೆದುಕೊಂಡು ಪ್ರವೇಶವನ್ನು ಕೊಡತಕ್ಕಂಥ ಪದ್ಧತಿ ಏನು ಇದೆ, ಅದು ಹೋಗಬೇಕೆಂದು ಎಲ್ಲರೂ ಕೂಡ ಒಕ್ಕೊರಲಿನಿಂದ ಹೇಳಿದ್ದಾರೆ ಅದಕ್ಕೆ ನನ್ನ ಧನ್ಯವಾದಗಳು. ಮತ್ತೆ ಕೆಲವರು ಇದನ್ನು 5 ವರ್ಷಗಳವರೆಗೆ ಏತಕ್ಕೆ ಇಟ್ಟುಕೊಂಡಿರಿ ಈಗಲೇ ತತ್‌ಕ್ಷಣವೇ ತಂದಿದ್ದರೆ ನಿಮ್ಮ ಉದ್ದೇಶ ನೆರವೇರುತ್ತಿತ್ತು ಎಂದೆಲ್ಲ ಹೇಳಿದ್ದಾರೆ ಮತ್ತೆ ಇದರ ಜೊತೆಯಲ್ಲಿ ಕೇವಲ ಬರೀ ತಾಂತ್ರಿಕ ಕಾಲೇಜುಗಳು, ಮೆಡಿಕಲ್ ಕಾಲೇಜುಗಳು ಅಲ್ಲದೆ ಬೇರೆ ಬೇರೆ ಶಾಲಾ ಕಾಲೇಜುಗಳಲ್ಲಿಯೂ ಇಂತಹ ಶುಲ್ಕ ಏನಿದೆ ಅದನ್ನು ಸಹ ತೆಗೆದು ಹಾಕುವ ಬಗ್ಗೆ ಅವುಗಳನ್ನು ಸಹ ಈ ಮಸೂದೆಯ ವ್ಯಾಪ್ತಿಯಲ್ಲಿ ತರತಕ್ಕದ್ದು ಒಳ್ಳೆಯದಿತ್ತು ಎಂದು ಹೇಳಿದ್ದಾರೆ. ಆದರೆ ಈ ಮಸೂದೆಯಿಂದ ಅದೆಲ್ಲದಕ್ಕೂ ಅನ್ವಯವಾಗುವುದಿಲ್ಲವೆಂದು ತಿಳಿಸಿದ್ದಾರೆ

ಬಹುಶಃ ಸುಮಾರು 12 ಜನ ಮಾನ್ಯ ಸದಸ್ಯರು ಮಾತನಾಡಿದರು. ಇವತ್ತು 7-8 ಜನ ಸದಸ್ಯರು ಮಾತನಾಡಿದ್ದಾರೆ. ಈ ಒಂದು ಸಭೆಯಲ್ಲಿ ಹಿಂದೆಯೂ ಕೂಡಾ ಈ ವಿಷಯದಲ್ಲಿ ಬಹಳ ಮುಕ್ತವಾದ ಚರ್ಚೆ ಎರಡು ಸಾರಿ ನಡೆದಿದೆ. ಇವತ್ತೂ ಕೂಡ ಚರ್ಚೆ ನಡೆದಿದೆ. ಎಲ್ಲರಿಗೂ ಕೂಡಾ ಇದನ್ನು ತೆಗೆಯಬೇಕೆಂಬ ಉದ್ದೇಶ ಇದ್ದ ಮೇಲೆ, ಆ ಉದ್ದೇಶವನ್ನು ನೆರವೇರಿಸುವುದಕ್ಕೋಸ್ಕರ ನಾನು ಈ ಮಸೂದೆಯನ್ನು ತಂದಿದ್ದೇನೆ. ಎಕ್ಸಿಕ್ಯುಟಿವ್ ಆರ್ಡರ್ಸ್ ಪ್ರಕಾರ ಆಗಲಿಲ್ಲವೆಂದು ಹೇಳಿದ ಮೇಲೆ ಅದನ್ನು ಅಳವಡಿಸಿ ತಂದಿದ್ದೇನೆ. ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು, ಎಕ್ಸಿಕ್ಯುಟಿವ್ ಆರ್ಡರ್‌ನಲ್ಲಿ ನಿಮಗೆ ಒಳ್ಳೆಯ ಉದ್ದೇಶ ಇತ್ತು, ಅದರಲ್ಲಿ ಸರಕಾರ ಸಾಮಾಜಿಕವಾಗಿ ಹಿಂದುಳಿದಿರುವವರಿಗೆ, ಹರಿಜನ ಗಿರಿಜನರಿಗೆ ಎಷ್ಟು ಸೀಟುಗಳನ್ನು ಎಕ್ಸಿಕ್ಯುಟಿವ್ ಆರ್ಡರ್‌ನಲ್ಲಿ ನಾವು ಕೊಡುತ್ತಿದ್ದೆವೋ ಅದಕ್ಕಿಂತ ಕಡಿಮೆ ನೀವು ಮಾಡಿದ್ದೀರಿ ಎಂಬ ಒಂದು ಆರೋಪವನ್ನು ಮಾಡಿದರು. ಎರಡನೆಯದಾಗಿ, ಈಗ ನೀವು ಕೊಡತಕ್ಕಂಥ ಕಾಲದಲ್ಲಿ ಹೆಚ್ಚುವರಿ ಸೀಟುಗಳನ್ನು ಕೂಡಾ ಖಾಸಗಿ ಶಾಲೆಯವರಿಗೆ ಕೊಟ್ಟಿದ್ದೀರಿ. ಮೂರನೆಯದಾಗಿ, ಖಾಸಗಿ ಕಾಲೇಜುಗಳನ್ನು ಯಾರು ಹೊಸದಾಗಿ ಪ್ರಾರಂಭ ಮಾಡಿದರೋ, ಅವರಿಗೂ ಒಂದೇ ರೀತಿ ಮತ್ತು ಹಿಂದೆ ಮಾಡಿದವರಿಗೂ ಒಂದೇ ರೀತಿ ಮಾಡಿದ್ದೀರಿ. ಇದರಿಂದ ಸಾಮಾಜಿಕ ನ್ಯಾಯ ದೊರೆಯುವುದಿಲ್ಲ ಎಂದು ಹೇಳಿದರು. ಸಾಮಾಜಿಕ ನ್ಯಾಯವನ್ನು ಗಮನದಲ್ಲಿಟ್ಟುಕೊಂಡು ಬಹುಶಃ ಹೊಸದಾಗಿ ಬಂದಿರತಕ್ಕಂಥ ಕಾಲೇಜುಗಳಿಗೆ ಬೆಳವಣಿಗೆ ಪಡಿಸಿಕೊಳ್ಳುವುದಕ್ಕೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಎಷ್ಟು ಅವಕಾಶ ಕೊಡಬೇಕೋ, ಅದನ್ನು ಗಮನದಲ್ಲಿಟ್ಟುಕೊಂಡು 5 ವರ್ಷಗಳಲ್ಲಿ ಇದನ್ನು ಹಂತಹಂತವಾಗಿ ತೆಗೆಯಬೇಕೆಂದು ನಾವು ಮಾಡಿದೆವು, ಎರಡನೇ ಕಾರಣ ನಮಗೆ ಪ್ರಮುಖವಾಗಿ ಇರತಕ್ಕದ್ದು, ಹಣಕಾಸಿನ ಒಂದು ಕೊರತೆ. ಈ ಕೊರತೆಯನ್ನು ಯಾವ ರೀತಿಯಲ್ಲಾದರೂ ತೆಗೆಸಿಕೊಡುವುದಾಗಿದ್ದರೆ, ಮಾನ್ಯ ಸದಸ್ಯರಾದ ಶ್ರೀ ಮೈಕೇಲ್ ಫರ್ನಾಂಡಿಸ್ ಅವರು ಹೇಳಿದ ಹಾಗೆ ತೆರಿಗೆ ಹಾಕಿದ್ದರೆ ಒಪ್ಪಿಗೆ ಕೊಡುತ್ತಿದ್ದೆವು, ತೆರಿಗೆಗಿಂತ ಹೆಚ್ಚಾಗಿ, ಸರಕಾರದವರು ಈ ಹಿತಗನ್ನು ಹೋಗಲಾಡಿಸಬೇಕೆಂದು ಬಹಳ ಸಂದರ್ಭದಲ್ಲಿ ಹೇಳಿದ್ದಾರೆ,

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಆದರೆ ಇಂತಹ ಕಮರ್ಷಿಯಲೈಸೇಷನ್ ಆಗಿರತಕ್ಕಂಥ ಈ ಒಂದು ಫೀಯನ್ನು ತೆಗೆದುಹಾಕಬೇಕಾದ ಪಕ್ಷದಲ್ಲಿ ಕೇಂದ್ರ ಸರಕಾರದವರು ಇದಕ್ಕೆ ಸಹಾಯವಾಗಿ 19 ಕೋಟಿ ರೂಪಾಯಿಗಳನ್ನು ವರ್ಷಂಪ್ರತಿ ಕೊಡುತ್ತೇವೆಂದು ಹೇಳಿದರೆ ನಾನು ಅದನ್ನು ಸಂಪೂರ್ಣವಾಗಿ ಸ್ವಾಗತಿಸಿ, ಈ ವರ್ಷವೇ ಇದನ್ನು ಸಂಪೂರ್ಣವಾಗಿ ತೆಗೆದುಹಾಕುವುದಕ್ಕೆ ಪ್ರಯತ್ನ ಮಾಡುವುದು ಸಾಧ್ಯವಾಗುತ್ತದೆ. ಆದರೆ ಅಲ್ಲಿಂದ ನಮಗೆ ಯಾವ ವಿಧವಾದ ಸಹಾಯ ದೊರೆಯದಿರುವುದರಿಂದ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿಗೂ ಆದ್ಯತೆಯನ್ನು ಕೊಡುವುದರ ದೃಷ್ಟಿಯಿಂದ ನಮ್ಮ ಪ್ಲಾನ್‌ನಲ್ಲಿ ತಾಂತ್ರಿಕ ಶಿಕ್ಷಣಕ್ಕೆ ಏನು ಹಣವನ್ನು ಒದಗಿಸಿಕೊಂಡಿದ್ದೇವೆ, ಈ 7 ಕೋಟಿ ರೂಪಾಯಿಗಳನ್ನು, ಅದು ತಾಂತ್ರಿಕ ಕಾಲೇಜುಗಳಿಗೆ ಸಾಲದೇ ಇರುವುದರಿಂದ ಕ್ಯಾಪಿಟೇಷನ್ ಫೀಜನ್ನು ಇನ್ನು 5 ವರ್ಷಗಳಲ್ಲಿ ತೆಗೆಯೋಣ ಎಂದು ಮಾಡಿ, ಈಗ ಸುಮಾರು 23 ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಏನು ಇವೆ, ಆ 23 ಎಂಜಿನಿಯರಿಂಗ್ ಕಾಲೇಜುಗಳಲ್ಲಿ 20 ಪರ್ಸೆಂಟ್ ಸೀಟುಗಳನ್ನು ಸರಕಾರಕ್ಕೆ ತೆಗೆದುಕೊಂಡಿದ್ದೇವೆ ನಾನು ಮೊದಲೇ ಹೇಳಿದಹಾಗೆ 1342 ಸೀಟುಗಳನ್ನು ಸರಕಾರದ ವಶಕ್ಕೆ ಅಂದರೆ ಮೆರಿಟ್ ಪೂಲ್‌ಗೆ ತೆಗೆದುಕೊಂಡಿದ್ದೇವೆ. ಆದರೆ 1084 ಸೀಟುಗಳನ್ನು ಪ್ರೈವೇಟ್ ಕಾಲೇಜಿನವರು ಕಳೆದುಕೊಂಡಿದ್ದಾರೆ. ಇದರಿಂದ ಪ್ರೈವೇಟ್ ಕಾಲೇಜಿನವರಿಗೆ ನಾವು ಸಹಾಯ ಮಾಡಿದ್ದೇವೆ ಎಂದು ಏನು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ ಅದು ಸರಿಯಲ್ಲ. ಅವರು 1084 ಸೀಟುಗಳನ್ನು ಕಳೆದುಕೊಂಡಿದ್ದಾರೆ, 1342 ಸೀಟುಗಳು ಮೆರಿಟ್ ಪೂಲ್‌ಗೆ ಬಂದಿದೆ. ಬಹುಶಃ ನಾವು ಹಿಂದೆ ಏನು ಸೀಟುಗಳನ್ನು ಹಂಚುತ್ತಿದ್ದೆವು, ಅದನ್ನು ಈ

ವರ್ಷ ಕಂಪ್ಯೂಟರೈಸ್ ಮಾಡಿ ಅದರ ಪ್ರಕಾರ ಸೀಟುಗಳನ್ನು ಹಂಚಿದ್ದೇವೆ. ಪರ್ಸೆಂಟೇಜ್ ಪ್ರಕಾರ ತೆಗೆದುಕೊಂಡು ನೋಡಿದರೆ, 1982 83ನೇ ಸಾಲಿನಲ್ಲಿ ಮೆರಿಟ್ ಪೂಲ್‌ಗೆ 83 ಪರ್ಸೆಂಟ್ ಇದ್ದುದು, 1983-84 ರಲ್ಲಿ 85 ಪರ್ಸೆಂಟ್‌ಗೆ ಬಂದಿದೆ. ಪ್ರೈವೇಟ್ ಕಾಲೇಜುಗಳಲ್ಲಿ 85 ಪರ್ಸೆಂಟ್‌ಗೆ ಇಳಿದಿದೆ. ಹಾಗೆಯೇ ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಹಿಂದೆ 73 ಪರ್ಸೆಂಟ್ ಇತ್ತು. 1983-84ರಲ್ಲಿ 70 ಪರ್ಸೆಂಟ್‌ಗೆ ಬಂದು ಇಳಿಯಿತು. ಪ್ರೈವೇಟ್ ಕಾಲೇಜುಗಳಿಗೆ 72 ಪರ್ಸೆಂಟ್ ಆಗಿದೆ. ಇನ್ನು ಬ್ಯಾಕ್‌ವರ್ಡ್ ಕ್ಲಾಸ್ ಬಿ.ಸಿ.ಟಿ.ಗೆ 60 ಪರ್ಸೆಂಟ್ ಇದ್ದುದು 55 ಪರ್ಸೆಂಟ್‌ಗೆ ಬಂದಿದೆ; 1983-84 ರಲ್ಲಿ ಇದು ಪ್ರೈವೇಟ್ ಕಾಲೇಜುಗಳಿಗೆ 50 ಪರ್ಸೆಂಟ್‌ಗೆ ಬಂದಿಳಿದಿದೆ. ಬ್ಯಾಕ್‌ವರ್ಡ್ ಟ್ರೈಬ್ಸ್‌ಗೆ 51 ಪರ್ಸೆಂಟ್ ಇದ್ದುದು, 59 ಪರ್ಸೆಂಟ್ ಆಯಿತು. ಮತ್ತು ಈ ವರ್ಷ ಪ್ರೈವೇಟ್ ಕಾಲೇಜುಗಳಲ್ಲಿ 55 ಪರ್ಸೆಂಟ್‌ಗೆ ಬಂದು ನಿಂತಿದೆ. ಬ್ಯಾಕ್‌ವರ್ಡ್ ಸ್ಪೆಷಲ್ ಗ್ರೂಪ್‌ಗೆ ಹಿಂದೆ 81 ಪರ್ಸೆಂಟ್ ಇತ್ತು, ಈ ವರ್ಷ 78 ಪರ್ಸೆಂಟ್‌ಗೆ ಬಂದಿದೆ, ಪ್ರೈವೇಟ್ ಕಾಲೇಜುಗಳಲ್ಲಿ 68 ಪರ್ಸೆಂಟ್‌ಗೆ ಬಂದು ನಿಂತಿದೆ. ಇನ್ನು ಶೆಡ್ಯೂಲ್ ಕ್ಯಾಸ್ಟ್‌ಗೆ 49.33 ಪರ್ಸೆಂಟ್ ಇದ್ದುದು ಈ ವರ್ಷ 46.37 ಪರ್ಸೆಂಟ್‌ಗೆ ಬಂದಿದೆ, ಆದರೆ ಖಾಸಗಿ ಕಾಲೇಜುಗಳಲ್ಲಿ ಮೆರಿಟ್ ಪೂಲ್‌ನಲ್ಲಿ 35 ಪರ್ಸೆಂಟ್‌ಗೆ ಬಂದು ನಿಂತಿದೆ ಇನ್ನು ಶೆಡ್ಯೂಲ್ಡ್ ಟ್ರೈಬ್‌ಗೆ 51 ಪರ್ಸೆಂಟ್ ಇತ್ತು. ಆಮೇಲೆ 1983-84 ರಲ್ಲಿ 44 ಪರ್ಸೆಂಟ್‌ಗೆ ಬಂದಿದೆ. ಹಿಂದಿನ ವರ್ಷ ಕೊಟ್ಟಿರುವುದಕ್ಕಿಂತ ಪರ್ಸೆಂಟೇಜ್ ಆಫ್ ಮಾರ್ಕ್ಸ್, ಈ ವರ್ಷ ಬಹಳ ಕಡಿಮೆಯಾಗಿ ಬಂದದೆ. ಆದುದರಿಂದ ಬ್ಯಾಕ್‌ವರ್ಡ್ ಕ್ಲಾಸ್, ಬ್ಯಾಕ್‌ವರ್ಡ್ ಟ್ರೈಬ್, ಶೆಡ್ಯೂಲ್ಡ್ ಕ್ಯಾಸ್ಟ್, ಶೆಡ್ಯೂಲ್ಡ್ ಟ್ರೈಬ್, ಬ್ಯಾಕ್‌ವರ್ಡ್ ಗ್ರೂಪ್‌ಗೆ ಹೋದ ವರ್ಷ ಏನು ಪರ್ಸೆಂಟೇಜ್ ಇತ್ತು, ಅದಕ್ಕಿಂತ ಕಡಿಮೆಯಾಗಿ ಈ ವಿದ್ಯಾರ್ಥಿಗಳಿಗೆ ಎಲ್ಲಾ ಕಾಲೇಜುಗಳಲ್ಲಿ ಸೀಟು ಸಿಕ್ಕಿದೆ. 1342 ಸೀಟನ್ನ ಕ್ಯಾಪಿಟೇಷನ್ ಫೀಸ್ ಇಲ್ಲದೆ ಮೆರಿಟ್ ಪೂಲ್‌ನಲ್ಲಿ ಕೊಟ್ಟಿದ್ದರಿಂದ ಅನೇಕ ಜನರಿಗೆ ಸುಮಾರು 49 9 ಪರ್ಸೆಂಟ್‌ನಷ್ಟು ವಿದ್ಯಾರ್ಥಿಗಳಿಗೆ 1983-84 ರಲ್ಲಿ ಸೀಟುಗಳು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ದೊರಕಿವೆ. 1982-83 ರಲ್ಲಿ ಈ ಪ್ರಮಾಣ 43.5 ಪರ್ಸೆಂಟ್ ಏನು ಇತ್ತು, ಅವರಿಗಿಂತ ನಾವು ಜಾಸ್ತಿ ಕೊಟ್ಟಿದ್ದೇವೆ ಎನ್ನತಕ್ಕಂಥಾದ್ದು. ಈ ಅಂಕಿಅಂಶಗಳಿಂದ ವ್ಯಕ್ತವಾಗುತ್ತದೆ ಈ ದೃಷ್ಟಿಯಿಂದ, ಈ ಮಸೂದೆಯ ಪ್ರಕಾರ ನಿಯಮಾವಳಿಗಳನ್ನು ಮಾಡಿ, ಇಂಜಿನಿಯರಿಂಗ್ ಕಾಲೇಜುಗಳಿಗೆ ಕೊಟ್ಟಿದ್ದೇವೆ. ಹೋದ ವರ್ಷಕ್ಕಿಂತ ಕೂಡಾ ಹೈಯರ್ ಪರ್ಸೆಂಟೇಜ್ ತೆಗೆದುಕೊಳ್ಳುವುದು ಕಡಿಮೆಯಾಗಿ, ಕಡಿಮೆ ಪರ್ಸೆಂಟೇಜ್‌ನಲ್ಲೂ ಸೀಟುಗಳು ದೊರೆತಿವೆ. ಎರಡನೆಯದಾಗಿ, ಮತ್ತೆ ಹಿಂದಿನ ವರ್ಷ ಏನು 43 ಪರ್ಸೆಂಟ್ ಸೀಟುಗಳನ್ನು ಕರ್ನಾಟಕದವರಿಗೆ ಕೊಟ್ಟಿದ್ದರು, ಅದು ಈ ವರ್ಷ 49.9 ಪರ್ಸೆಂಟ್‌ಗೆ ಬಂದು ನಿಂತಿದೆ. ನಮ್ಮ ಉದ್ದೇಶ ಕೊನೇ ಪಕ್ಷ 50 ಪರ್ಸೆಂಟ್ ಆಗಬೇಕೆಂದು ಇತ್ತು. ಒಂದೆರಡು ಕಾಲೇಜುಗಳಲ್ಲಿ ತಡವಾಯಿತು ಎಂದು ಕೊಟ್ಟಿಲ್ಲ. ಈ ದೃಷ್ಟಿಯಿಂದ ನಮ್ಮ ಗುರಿ 50 ಪರ್ಸೆಂಟಾದರೂ ಆಗಬೇಕು ಎಂದು ಇದೆ. ಎಂಜಿನಿಯರಿಂಗ್ ಮೆಡಿಕಲ್ ಕಾಲೇಜುಗಳಲ್ಲಿ, ಒಳನಾಡಿನ ಅಂದರೆ ಕರ್ನಾಟಕದಲ್ಲಿ ಓದಿದ ವಿದ್ಯಾರ್ಥಿಗಳಿಗೆ ಯಾರು ಇಲ್ಲಿ ಪಿ.ಯು.ಸಿ.ವರೆಗೆ ಓದಿರುತ್ತಾರೋ ಅವರಿಗೆ 50 ಪರ್ಸೆಂಟ್‌ಗೆ ಕಡಿಮೆ ಇಲ್ಲದಂತೆ ಸೀಟ್ ಕೊಡಬೇಕು ಎಂದು ಸರಕಾರ ಆಜ್ಞೆ ಮಾಡಿದ ಮೇಲೆ ಇದರಿಂದ ಬಹಳ ಮಟ್ಟಿಗೆ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳಿಗೆ ಸೀಟು ದೊರಕಿದೆ. ಮತ್ತೆ ಸೀಟು ಹಂಚತಕ್ಕ ಕಾಲದಲ್ಲೂ ಕೂಡಾ ಕಂಪ್ಯೂಟರೈಸೇಷನ್ ಮುಖಾಂತರ ಸೀಟುಗಳನ್ನು ಹಂಚಿರುವುದರಿಂದ ಎಲ್ಲಾ ವರ್ಗಗಳಿಗೂ ಕೂಡಾ ಅನುಕೂಲವಾಗಿದೆ. ಪ್ರತಿನಿತ್ಯ ಪತ್ರಿಕೆಗಳಲ್ಲಿ ಬರುತ್ತಿರುವ ಹಾಗೆ ಇದಕ್ಕಿಂತ ಜಾಸ್ತಿ ಅಂಕಗಳನ್ನು ತೆಗೆದುಕೊಂಡಿದ್ದವರಿಗೆ ಅನ್ಯಾಯ ಆಗಿದ್ದರೆ, ಅವರು ತಾಂತ್ರಿಕ ಶಿಕ್ಷಣ ನಿರ್ದೇಶಕರನ್ನು ಕಾಣಬೇಕೆಂದು ಹೇಳಿದಾಗ, ಬಹಳ ಮಂದಿ ವಿದ್ಯಾರ್ಥಿಗಳು ಅವರನ್ನು ಕಂಡಮೇಲೆ ಅವರೆಲ್ಲರಿಗೂ ಸೀಟುಗಳು ದೊರೆಯುವುದಕ್ಕೆ ಅವಕಾಶ ಆಯಿತು. ಈ ದೃಷ್ಟಿಯಿಂದ ನಮ್ಮ ನೀತಿ, ಹೊರನಾಡಿನ ಮತ್ತು ಹೊರದೇಶದ ವಿದ್ಯಾರ್ಥಿಗಳಿಗೆ ಹೆಚ್ಚು ಆದ್ಯ ಗಮನ ಕೊಡುವುದಾಗಿದೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವುದು, ಅದು ನಿಜವಾಗಿಯೂ ಸತ್ಯಕ್ಕೆ ದೂರವಾದುದು ಎಂದು ಇದರಿಂದ ವ್ಯಕ್ತವಾಗುತ್ತದೆ. ಪ್ರತಿವರ್ಷ ಶೇಕಡಾ 20ರಷ್ಟು ಸೀಟುಗಳನ್ನು ತೆಗೆದುಕೊಳ್ಳಬೇಕೆಂದು ಮಾಡಿ, ಈ ಸಾರಿ 20 ಪರ್ಸೆಂಟ್ ಸೀಟುಗಳನ್ನು ತೆಗೆದುಕೊಂಡಿದ್ದೇವೆ. ಈ ವರ್ಷದಿಂದ ಅಂದರೆ 11-7-83 ರಂದು ಆರ್ಡಿನೆನ್ಸ್ ಜಾರಿಗೆ ಬಂದಾಗಿನಿಂದ ಇಲ್ಲಿವರೆಗೆ ಸರಕಾರದ ಹುಕುಂ ಪ್ರಕಾರ ಸೀಟುಗಳನ್ನು ಹಂಚಿಕೆ ಮಾಡಿದ್ದೇವೆ. ಅದಕ್ಕೆ ಖಾಸಗಿ ಕಾಲೇಜಿನವರು ಒಪ್ಪಿಗೆ ಕೊಟ್ಟಿದ್ದಾರೆ. ಇದುವರೆಗೂ ನೀವು ಪ್ರೈವೇಟ್ ಕಾಲೇಜುಗಳನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರವೇ ಇಲ್ಲ, ನಾವು ತೆಗೆದುಕೊಳ್ಳುತ್ತೇವೆ, ನಾವು ನಡೆಸುತ್ತೇವೆ, ನೀವು ಯಾರು ಕೇಳುವುದಕ್ಕೆ ಎಂಬ ಮಾತು ಇತ್ತು. ಆದರೆ ಈಗ ಅದನ್ನು ಹೇಳುವ ಪರಿಸ್ಥಿತಿ ಅವರು ಇಲ್ಲ. ಸರಕಾರಕ್ಕೆ ಅಧಿಕಾರ ಇದೆ, ಇದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಎಂದು ನಾವು ತೋರಿಸಿಕೊಟ್ಟಿದ್ದೇವೆ. ಮುಂದಿನ ವರ್ಷ 20 ಪರ್ಸೆಂಟ್ ಸೀಟುಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅದೇ ರೀತಿಯಲ್ಲಿ ಪಾಲಿಟೆಕ್ನಿಕ್‌ಗಳು, ಬಿ.ಎಡ್; ಬಿ.ಪಿ.ಎಡ್. ಸಿ.ಪಿ.ಎಡ್., ಕಾಲೇಜುಗಳನ್ನು ಕೂಡಾ ಇನ್ನು ಮುಂದೆ ಯಾರೂ ಹೊಸದಾಗಿ ಸ್ಥಾಪನೆ ಮಾಡುತ್ತಾರೋ, ಅಂತಹ ಕಡೆಗಳಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್, ಶೆಡ್ಯೂಲ್ಡ್ ಟ್ರೈಬ್ ಮತ್ತು ಸಾಮಾಜಿಕ

ವಾಗಿ ಹಿಂದುಳಿದಿರತಕ್ಕಂಥವರಿಗೆ ಏನು ದೊರಕಿಸಕೊಡಲಿಲ್ಲ ಎಂದು ಹೇಳಿದ್ದಕ್ಕೋಸ್ಕರ. ಅಲ್ಲಿ ಸಹ 18 ಪರ್ಸೆಂಟ್ ಕಡ್ಡಾಯವಾಗಿ ಕೊಡಬೇಕೆಂದೂ, ಹೊಸದಾಗಿ ಸ್ಥಾಪನೆ ಮಾಡುವವರು ಇದನ್ನು ಒಪ್ಪಿಕೊಳ್ಳಬೇಕೆಂದೂ ಹೇಳಿ, ಅವರು ಒಪ್ಪಿಗೆ ಕೊಟ್ಟಮೇಲೆ ಸರಕಾರ ಆದೇಶ ಕಳುಹಿಸಿಕೊಟ್ಟಿದೆ. ಅವರಿಗೆ ಐದು ವರ್ಷ ಅವಕಾಶ ಕೊಟ್ಟು, ಇನ್ನು 5 ವರ್ಷದಲ್ಲಿ ಕ್ಯಾಪಿಟೇಷನ್ ಫೀಸ್ ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲ, ಐದು ವರ್ಷ ವರ್ಷಂಪ್ರತಿ 20 ಪರ್ಸೆಂಟ್ ಸೀಟುಗಳನ್ನು ಸರಕಾರಕ್ಕೆ ಕೊಡಬೇಕೆಂಬುದನ್ನು ನಾವು ಇದರಲ್ಲಿ ಅಳವಡಿಸಿದ್ದೇವೆ. ಹೀಗೆ ಸರಕಾರದ ನೀತಿಯನ್ನು ಈ ಒಂದು ಪ್ರಿಯಾಂಬಲ್‌ನಲ್ಲಿ ನಾವು ಏನು ಹೇಳಿದ್ದೇವೆ, ಆ ಪ್ರಿಯಾಂಬಲ್ ಪ್ರಕಾರ ನಾವು ಸರಕಾರಕ್ಕೆ ಅಧಿಕಾರವನ್ನು ಕ್ಲಾಸ್ 4 ಮತ್ತು 5 ರಲ್ಲಿ ತೆಗೆದುಕೊಂಡಿದ್ದೇವೆ. ಯಾವ ಯಾವ ಕಾಲೇಜುಗಳನ್ನು ಸ್ಥಾಪನೆ ಮಾಡಿದೆ, ಅದರಲ್ಲಿ ಎಷ್ಟೆಷ್ಟು ಪರ್ಸೆಂಟೇಜ್ ತೆಗೆದುಕೊಳ್ಳುವುದಕ್ಕೆ ಮತ್ತು ಅದನ್ನು ನಿಗದಿ ಮಾಡುವುದಕ್ಕೆ ಮತ್ತು ಸರಕಾರಕ್ಕೆ ಬಂದ ಮೇಲೆ ಸೀಟುಗಳನ್ನು ಹಂಚಿಕೆ ಮಾಡತಕ್ಕ ವ್ಯವಸ್ಥೆಯನ್ನು ಕಂಪ್ಯೂಟರ್‌ಗಳ ಮುಖಾಂತರ ಮಾಡಿ, ಸರ್ಕಾರದವರು ಈ ಕ್ಯಾಪಿಟೇಷನ್ ಫೀಯಿಂದ ಅನೇಕ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆಂದು ತಿಳಿದು ಆ ವಿದ್ಯಾರ್ಥಿಗಳ ತೊಂದರೆಯನ್ನು ನೀಗಿಸುವ ಈ ಒಂದು ದಾರಿಯಲ್ಲಿ ನಾವು ಹೆಜ್ಜೆಯನ್ನಿಟ್ಟಿದ್ದೇವೆ. ಪೂರ್ಣವಾದ ಹೆಜ್ಜೆಯನ್ನು ಇಟ್ಟಿದ್ದೇವೆಂದು ಹೇಳುವುದಿಲ್ಲ. ಮೊದಲ ಹಂತವಾಗಿ ಕಾನೂನುಬದ್ಧವಾದ ಹೆಜ್ಜೆಯನ್ನು ಇಟ್ಟಿದ್ದೇವೆಯೇ ವಿನಃ ಮುಂದಿನ ವರ್ಷ ಬಂದರೆ 40 ಪರ್ಸೆಂಟ್ ಸೀಟುಗಳನ್ನು ಖಾಸಗೀ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮತ್ತೆ ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ನಾವು ತೆಗೆದುಕೊಳ್ಳುವುದಕ್ಕೆ ಅವಕಾಶವಾಗಿದೆ ಆ ಒಂದು ದೃಷ್ಟಿಯಿಂದ ಇಟ್ಟಿರತಕ್ಕ ಹೆಜ್ಜೆ. ಬಹುಶಃ ಆ ಒಂದು ಗುರಿಯನ್ನು ಇಟ್ಟುಕೊಂಡು ಈ ಕ್ಯಾಪಿಟೇಷನ್ ಫೀಯನ್ನು ತೆಗೆಯುತ್ತೇವೆಂದು ಏನು ಹೇಳಿದ್ದೇವೆ ಆ ಗುರಿಯ ಕಡೆಗೆ ನಾವು ಹೋಗುತ್ತಿದ್ದೇವೆಯೇ ವಿನಃ ಇದಕ್ಕಿಂತ ಹಿಂದೆ ಹೋಗುತ್ತಿಲ್ಲ. ಈ ಹಿಂದೆ ಹೊರನಾಡಿನ ವಿದ್ಯಾರ್ಥಿಗಳಿಗೆ ಹೆಚ್ಚು ಸಂಖ್ಯೆಯಲ್ಲಿ ಸೀಟುಗಳು ಸಿಕ್ಕುತ್ತಿದ್ದವು. ಅಂತಹವುಗಳನ್ನು ಈ ವರ್ಷ ಕಡಿಮೆ ಮಾಡಿದ್ದೇವೆ. ಆಮೇಲೆ ಪ್ರತಿ ವರ್ಷ ಅವನ್ನು ಕಡಿಮೆ ಮಾಡುವ ದಾರಿಯಲ್ಲಿ ಹೆಜ್ಜೆಯಿಟ್ಟಿದ್ದೇವೆ. ನಾವು ಈ ಬಗ್ಗೆ ಇಟ್ಟಂತಹ ಹೆಜ್ಜೆಯಿಂದ ಇವತ್ತು 80 ಪರ್ಸೆಂಟ್ ಕರ್ನಾಟಕ ರಾಜ್ಯದವರಿಗೇ ಹೆಚ್ಚಾಗಿ ಸೀಟು ಸಿಕ್ಕುತ್ತಿದೆ ಆದ್ದರಿಂದ ಇನ್ನು ಮೇಲೆ 40 ಪರ್ಸೆಂಟ್ ಬಂದಾಗ ಅದು ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೇ ಸಿಕ್ಕಬೇಕು ಎನ್ನುವುದನ್ನು ಮಾಡಿದ್ದೇವೆ. ಖಾಸಗಿ ಕಾಲೇಜುಗಳಲ್ಲಿ ಕೊನೇಪಕ್ಷ ಸೇಕಡಾ 50 ರಷ್ಟು ಸೀಟುಗಳನ್ನು ಕರ್ನಾಟಕದವರಿಗೆ ಕೊಡಬೇಕೆಂಬ ಬಗ್ಗೆ ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೇವೆ ಆ ಪ್ರಕಾರ 49.9 ಪರ್ಸೆಂಟ್ ಈ ವರ್ಷ ಜಾರಿಗೊಳಿಸಿದ್ದೇವೆ. ಆ ದೃಷ್ಟಿಯಿಂದ ಹಿಂದೆ 45 ಪರ್ಸೆಂಟ್ ಪಡೆದಂತಹ ಹರಿಜನ-ಗಿರಿಜನರಿಗೆ ಅವಕಾಶ ಇದ್ದದ್ದು ಈ ವರ್ಷ 35 ಪರ್ಸೆಂಟ್ ನಿಂತುಕೊಳ್ಳಬೇಕಾದರೆ ಬಹುಶಃ ಇವರೆಲ್ಲರಿಗೂ ಸೀಟು ಸಿಕ್ಕತಕ್ಕಂತಹ ವ್ಯವಸ್ಥೆ ಮಾಡಿದ್ದೇವೆ. ಆ ದೃಷ್ಟಿಯಲ್ಲಿ ಈ ಒಂದು ಕ್ಯಾಪಿಟೇಷನ್ ಫೀಯನ್ನು ತೆಗೆಯತಕ್ಕಂತಹ ಸದುದ್ದೇಶದಿಂದ ಮತ್ತು ಖಾಸಗಿ ಕಾಲೇಜುಗಳು ಮತ್ತು ಖಾಸಗಿ ಸಂಸ್ಥೆಗಳವರ ಕಷ್ಟ ಮತ್ತು ಅವರಿಗೆ ಸಾಮಾಜಿಕ ನ್ಯಾಯ ಅಂತ ಹೇಳಿದರೆ ಅವಕ್ಕೂ ಅವಕಾಶವನ್ನು ಕಲ್ಪಿಸಿಕೊಟ್ಟು, ಹಂತಹಂತವಾಗಿ ತೆಗೆಯುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆಯೇ ವಿನಾ ಇದನ್ನು ತೆಗೆಯಬಾರದು, ಅಥವಾ ತೆಗೆದರೆ ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಿಂದಲ್ಲ ಈ ಸಂಸ್ಥೆಗಳನ್ನೂ ಉಳಿಸಿಕೊಂಡು, ಬೆಳೆಸಿಕೊಂಡು ಹೋಗತಕ್ಕಂತಹ ರೀತಿಯಲ್ಲಿ ಯಾವ ಉದ್ದೇಶಕ್ಕೋಸ್ಕರ ಅವರು ಈ ಹಣವನ್ನು ಶೇಖರಣೆ ಮಾಡಿಕೊಂಡಿರುತ್ತಾರೋ, ಆ ಉದ್ದೇಶಕ್ಕಾಗಿ ಅದಕ್ಕೆ ಬೇಕಾದಂತಹ ಅಭಿವೃದ್ಧಿ ಕಾರ್ಯಗಳಿಗೆ ಅಂದರೆ ಕಟ್ಟಡ ಕಟ್ಟುವುದಕ್ಕೆ, ಲ್ಯಾಬೊರೇಟರಿ ಅನುಕೂಲತೆಯನ್ನು ಮಾಡಿಕೊಳ್ಳುವುದಕ್ಕೆ ಏನೇನು ಹಣವನ್ನು ಖರ್ಚು ಮಾಡಬೇಕಾಗಿದೆ, ಆ ಹಣವನ್ನು ಅವರು ಖರ್ಚು ಮಾಡಬೇಕಾದರೂ ಸರ್ಕಾರದ ಅನುಮತಿಯನ್ನು ಪಡೆದು ಅಂದರೆ ಅದರ ಪ್ಲಾನು, ಎಸ್ಟಿಮೇಟನ್ನು ಮಂಜೂರು ಮಾಡಿಸಿಕೊಳ್ಳುವುದು. ಮತ್ತೆ ಅವರು ಹಣಕಾಸಿನ ಲೆಕ್ಕವನ್ನು ಇಟ್ಟುಕೊಳ್ಳುವುದಕ್ಕೆ, ಅಂದರೆ ಅವರು ತೆಗೆದುಕೊಂಡಂತಹ ಹಣಕ್ಕೆ ಸರಿಯಾಗಿ ಲೆಕ್ಕ ಇಡಬೇಕು. ಮತ್ತೆ ತೆಗೆದುಕೊಂಡಂತಹ ಹಣಕ್ಕೆ ಸರಿಯಾದ ರಸೀದಿ ಕೊಡಬೇಕೆಂದೂ ಮಾಡಿದ್ದೇವೆ. ಆದರೆ ಹಿಂದೆ ಆ ರೀತಿ ಇರಲಿಲ್ಲ. ಆ ರೀತಿಯ ರೆಗ್ಯುಲೇಷನ್ ಅನ್ನೂ ಕೂಡ ಇದರಲ್ಲಿಟ್ಟಿದ್ದೇವೆ. ಇದು ಎಲ್ಲ ರೀತಿಯಲ್ಲೂ ಒಪ್ಪತಕ್ಕ ಮಸೂದೆಯಾಗಿದೆ. ದಯಮಾಡಿ ವಿರೋಧ ಪಕ್ಷದ ಮಾನ್ಯ ಹಿರಿಯ ಸದಸ್ಯರು ಇದಕ್ಕೆ ಒಪ್ಪಿಗೆ ನೀಡಬೇಕು.

ಶ್ರೀ ಎಂ, ವೀರಪ್ಪ ಮೊಯಿಲಿ.—ಲೆಕ್ಕ ಇಡುವುದಕ್ಕೆ ಅಂತ ಹೇಳಿದ್ದಾರೆ. ಕೆಲವು ಸಾರಿ ಮಸ್ತಾನ ಲೆಕ್ಕ ಅಂತ ಬೇರೆ ಬೇರೆ ಇನ್ಸ್ಟಿಟ್ಯೂಟ್‌ಗಳ ಹೆಸರಿನಲ್ಲಿ ಅವರು ಲೆಕ್ಕ ಇಟ್ಟರೆ ಅದಕ್ಕೆ ಏನು ಮಾಡುತ್ತೀರಿ ?

ಶ್ರೀ ಬಿ ರಾಚಯ್ಯ.—ಯಾವ ರೀತಿಯ ಲೆಕ್ಕವನ್ನಾದರೂ ಇಟ್ಟುಕೊಳ್ಳಲಿ. ತೆಗೆದುಕೊಂಡಂತಹ ಹಣಕ್ಕೆ ಸರಿಯಾಗಿ ರಸೀದಿಯನ್ನು ಕೊಟ್ಟಿದ್ದಾರೆಯೇ ? ಹಣ ಸರಿಯಾಗಿ ವಿನಿಯೋಗವಾಗುತ್ತಿದೆಯೇ ಎಂಬುದರ ಲೆಕ್ಕಪತ್ರಗಳನ್ನು ತನಿಖೆ ಮಾಡತಕ್ಕಂತಹ ಅವಕಾಶವನ್ನು ಇದರಲ್ಲಿ ಕಲ್ಪಿಸಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್.—ಸೊಸೈಟಿ ಆಕ್ಟ್ ಕೆಳಗೆ ರಿಜಿಸ್ಟರ್ ಆಗುತ್ತದಲ್ಲಾ, ಆ ರೀತಿಯೇ?

ಶ್ರೀ. ಬಿ ರಾಚಯ್ಯ.— ಈ ದೇಶದಲ್ಲಿ ಎಲ್ಲ ತರಹದವರೂ ಇದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.— ಸೊಸೈಟಿ ಆಕ್ಟ್ ಕೆಳಗಡೆ ರಿಜಿಸ್ಟರ್ ಆಯಿತು ಅಂದರೆ ಅವರ ಲೆಕ್ಕ ಇಡಬೇಕು, ರಿಟರ್ನ್ ಕೊಡಬೇಕು ಅಂತ ಎಲ್ಲ ಇದೆ ....

ಶ್ರೀ ಬಿ. ರಾಚಯ್ಯ. — ತಾವೂ ಕೂಡಾ ಸಹಕಾರಿ ಸಂಘಗಳ ಮಂತ್ರಿಗಳಾಗಿದ್ದಂತಹವರು....

ಶ್ರೀ ಕೆ. ಹೆಚ್. ರಂಗನಾಥ್.— ಏನು ಸ್ವಾಮಿ, ಜಾಲಪ್ಪನವರೇ, ವಿದ್ಯಾಮಂತ್ರಿಗಳು ಸಹಕಾರಿ ಸಂಘಗಳ ರಿಜಿಸ್ಟ್ರೇಷನ್ ಆಕ್ಟ್ ಅಂತ ಹೇಳುತ್ತಿದ್ದಾರೆ. ಸೊಸೈಟಿ ಆಕ್ಟ್ ಅಲ್ಲವೇ ಸ್ವಾಮಿ ....

ಶ್ರೀ ಬಿ. ರಾಚಯ್ಯ.— ಅನುಭವದಿಂದ ಹೇಳುತ್ತಿದ್ದಾರೆ, ಇಲ್ಲ ಅಂತ ನಾನು ಹೇಳಲಿಲ್ಲ. ಅಂತಹ ಜನ ಸಮಾಜದಲ್ಲಿ ಇದ್ದಾರೆ. ಅಂತಹವರನ್ನು ಕಂಡು ಹಿಡಿಯುವುದಕ್ಕೆ ನಾವೂ ನೀವೂ ಸೇರಿ ಪ್ರಯತ್ನ ಮಾಡಬೇಕಾಗಿದೆ ಒಳ್ಳೆಯ ಕೆಲಸ ಮಾಡುವಂತಹದ್ದಕ್ಕೆ ಸರ್ವರ ಸಹಕಾರ ಬೇಕು. ಕಳ್ಳನಿಗೋಸ್ಕರ ಹೆದರಿಕೊಂಡು ಕೂತಿಲ್ಲ ಸಾಮಾನ್ಯವಾಗಿ ಸಮಾಜಕ್ಕೆ ಒಳ್ಳೆಯ ಕೆಲಸವನ್ನು ಮಾಡುವಂತಹ ದಿಸೆಯಲ್ಲಿ ನಾವು ಮಾಡಿರುವ ಪ್ರಯತ್ನಕ್ಕೆ ನಿಮ್ಮ ಸಹಕಾರ ಬಹಳ ಮುಖ್ಯ. ಮತ್ತೆ ಈ ಮಸೂದೆಯನ್ನು ಈಗ ತಾವು ಒಪ್ಪದೇ ಇದ್ದ ಪಕ್ಷದಲ್ಲಿ ಈವರೆಗೆ ಯಾರ್ಯಾರು ಅಡ್ಮಿಷನ್ ಮಾಡಿಕೊಂಡಿರುತ್ತಾರೋ ಕಾನೂನು ಪ್ರಕಾರ ಅಂತಹವರನ್ನು ಅಸಿಂಧು ಅಂತ ಹೇಳಿಬಿಟ್ಟರೆ, ಆದರಿಂದಾಗಿ ಅಡ್ಮಿಷನ್ ಮಾಡಿಕೊಂಡಿರುವ ವಿದ್ಯಾರ್ಥಿಗಳನ್ನು ಆಚೆಗೆ ತಳ್ಳಿದರೆ ಗತಿ ಏನು ಆಗಬೇಕು ? ಇದನ್ನು ತಾವು ಯೋಚನೆ ಮಾಡಬೇಕು. ಅಂತಹ ಕಡೆಗಳಲ್ಲಿ ಸರ್ಕಾರದಿಂದ ಅನುಮತಿಯನ್ನು ಕೊಟ್ಟಿದ್ದೇವೆ. ಇಷ್ಟು ಸೀಟುಗಳ ಮೇಲೆ ತೆಗೆದು ಕೊಳ್ಳಕೂಡದು ಅಂತ ಮಾಡಿದ್ದೇವೆ. ಆ ರೀತಿ ಹೇಳಿದ ಮೇಲೂ ಯಾರಾದರೂ ಹೆಚ್ಚಿಗೆ ತೆಗೆದುಕೊಂಡಿದ್ದರೆ ಅಂತಹವರಿಗೆ ಕೆಲವು ಪೆನಾಲ್ಟಿಯನ್ನು ಕೊಡುವಂತಹದ್ದನ್ನು ಕೂಡ ಇದರಲ್ಲಿ ಸೇರಿಸಿಕೊಂಡಿದ್ದೇವೆ. ಅವರೆಲ್ಲ ತಪ್ಪಿಸಿಕೊಂಡು ಹೋಗಿಬಿಡುತ್ತಾರೆ. ಅವರು ತಪ್ಪಿಸಿಕೊಂಡು ಹೋಗಲು ನೀವು ಸಹಕಾರಿಯಾಗುತ್ತೀರೆಂದು ನಾನು ಭಾವಿಸುವುದಿಲ್ಲ. ಆದರೂ ಕೂಡ ಅಲ್ಲಿರತಕ್ಕ ಎಲ್ಲಾ ಲೂಪ್ ಹೋಲ್‌ಗಳನ್ನು ಕಂಡುಹಿಡಿಯುವುದಕ್ಕೆ ಇಲ್ಲಿ ಪ್ರಯತ್ನ ಮಾಡಿದ್ದೇವೆ. ಆ ದೃಷ್ಟಿಯಿಂದ ತಾವು ಇದನ್ನು ಒಪ್ಪಿಕೊಂಡು, ತಿದ್ದುಪಡಿ ಏನಿದೆ ಅದನ್ನು ಮುಂದೆ ಮಾಡಿಕೊಳ್ಳೋಣ, ದಯ ಮಾಡಿ ಇದಕ್ಕೆ ತಮ್ಮ ಒಪಿಗೆಯನ್ನು ಕೊಡಿ ಎಂಬುದಾಗಿ ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಮಾನ್ಯ ಸದಸ್ಯರಾದ ಶ್ರೀಮಾನ್ ರಂಗನಾಥ್‌ರವರು ಕೆಲವು ಪದಗಳ ಪ್ರಯೋಗವನ್ನು ಕಡತದಿಂದ ತೆಗೆಯಬೇಕೆಂಬುದರ ಬಗ್ಗೆ ಬೆಳಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದ್ದರು. ಇದರ ಬಗ್ಗೆ ಸಚಿವರಾದ ಶ್ರೀಮಾನ್ ಅಜೀಜ್‌ಸೇಠ್‌ರವರು ಮಾಡಿದಂತಹ ಪದ ಪ್ರಯೋಗ "ಇಲ್ಲದಿದ್ದರೆ ಇದು ಏನು ಅವರ ತಾತನ ಮನೆ ಗಂಟಲ್ಲ" ಎಂಬ ಪದಗಳು ಮುಂದೆ ಶ್ರೀಮಾನ್ ನಾರಾಯಣಕುಮಾರ್ ರವರು ಪ್ರಯೋಗ ಮಾಡಿದಂತಹ "ನಿಮ್ಮಪ್ಪನ ಮನೆ ಗಂಟಲ್ಲ; ಕನ್ನಡ ಇವರ ತಾತನ ಮನೆ ಗಂಟಲ್ಲ" ಎಂಬ ಪದಗಳು. ನಂತರ ಶ್ರೀಮಾನ್ ಅಜೀಜ್ ಸೇಟ್‌ರವರು ಪ್ರಯೋಗ ಮಾಡಿದಂತಹ "ಒಂದು ವೇಳೆ ನಮಗೆ ಹೊಡೆಯಲು ಯಾರಾದರೂ ಮುಂದೆ ಬಂದರೆ ನಾವೂ ಸಹ ಅವರಿಗೆ ಹೊಡೆದುಬಿಡುತ್ತೇವೆ." ಎಂಬ ಪದಗಳು ನಂತರ ಶ್ರೀ ನಾರಾಯಣಕುಮಾರ್‌ರವರು ಪ್ರಯೋಗ ಮಾಡಿದಂತಹ "ಹಿಟ್ಟಿನ ಮುದ್ದೆ" ಈ ಪದ ಪ್ರಯೋಗಗಳನ್ನು ಈ ಸಭೆಯ ನಡವಳಿಕೆಯ ಘನತೆಗೆ ತಕ್ಕುದಲ್ಲವೆಂದು ಕಡತದಿಂದ ತೆಗೆದು ಹಾಕಿದ್ದೇನೆ.

Mr. Speaker.—I will now put the consideration motion to the vote of the House. The question is :

"That the Karnataka Educational Institutions (Prohibition of Capitation Fee) Bill, 1984 be taken into consideration"

The Motion was adopted.

ಶ್ರೀ ಕೆ. ಹೆಚ್. ರಂಗನಾಥ್.— ಇವತ್ತೇ ಬಿಲ್ಲನ್ನು ಪಾಸ್ ಮಾಡಬೇಕೂ ಅಂತ ಇದ್ದೀರಾ ?

ಅಧ್ಯಕ್ಷರು.— ಈಗಾಗಲೇ ಅದು ಮುಗಿದು ಕ್ಲಾಸ್ ಬೈ ಕ್ಲಾಸ್ ಕನ್ಸಿಡರೇಷನ್‌ಗೆ ಬಂದು ಬಿಟ್ಟಿದ್ದೇವೆ,

ಶ್ರೀ ಕೆ. ಹೆಚ್. ರಂಗನಾಥ್.— ಇದಕ್ಕಿಂತ ಮುಂಚೆಯೇ ನಾವು ಕೇಳಿಕೊಂಡಿದ್ದೆವು. ಆದರೆ ಮಂತ್ರಿಗಳು 5 ನಿಮಿಷದಲ್ಲಿ ಉತ್ತರ ಹೇಳಿಬಿಡುತ್ತೇನೆಂದು ಹೇಳಿದರು. ಅದಕ್ಕಾಗಿ ನಾವು ಸುಮ್ಮನೆ ಇದ್ದೆವು. ಇವತ್ತೇ ಪಾಸ್ ಮಾಡಿಸಬೇಕು ಅನ್ನುವುದಾದರೆ ನಾವೂ ರಾತ್ರಿ 9 ಘಂಟೆಯವರೆಗೆ ಕೂರುತ್ತೇವೆ.

ಅಧ್ಯಕ್ಷರು.— ಮೂವ್ ಮಾಡಿ ನೋಡೋಣ.

Clause by clause consideration

Clause – 2

Sri M. Veerappa Moily — Sir, I beg to move :

"That in sub clause (b) line 2 after the 'collected' the words "directly or indirectly" shall be inserted.

Sri K. H. Ranganath.— Sir, I beg to move :

"That in sub-clause (b) line 3 for the words 'but does not include' the word " including" shall be substituted.

Sir, I do not wish to move an amendment to sub-clause (c).

Sri N. Hutchamasthi Gowda.— Sir, I beg to move :

"That the following proviso shall be inserted after sub-clause (e)

"70% of the total number of seats in the respective colleges for medicine and engineering be reserved for the students of the rural areas who have had their education up to P.U.C. in the rural institutions."

Sri Bheemanna Khandre.— Sir, I beg to move :

"That the following proviso shall be inserted after sub-clause (e)

"70% of the total number of seats in the respective colleges for medicine and engineering be reserved for the students of the rural areas who have had their education upto P.U.C. in the rural institutions."

The question was proposed.

ಶ್ರೀ ಎಂ. ವೀರಪ್ಪ ಮೊಯಿಲಿ.— ಸನ್ಮಾನ್ಯ ಅಧ್ಯಕ್ಷರೆ, Clause 2 Sub Clause (b) says :

" 'Capitation Fee' means any amount, by whatever name called, paid or collected in excess of the fee prescribed under Section five, but does not include the deposit specified under the proviso to section 3;"

ಈಗ ನಮ್ಮ ಅನುಭವದ ಪ್ರಕಾರ ಕ್ಯಾಪಿಟೇಷನ್ ಫೀಜನ್ನು ಪ್ರತ್ಯಕ್ಷವಾಗಿ ಮಾತ್ರವಲ್ಲದೆ ಪರೋಕ್ಷವಾಗಿಯೂ ತೆಗೆದುಕೊಳ್ಳುತ್ತಾರೆಂದು ಹೇಳುತ್ತೇನೆ. ಅದಕ್ಕಾಗಿ ಡೈರೆಕ್ಟ್ಲಿ ಅಥವಾ ಇಂಡೈರೆಕ್ಟ್ಲಿ ಎಂದು ಹೇಳಿದ್ದೇವೆ. ಕೆಲವು ಕಡೆ ಏನಾಗಿದೆ ಎಂದರೆ, ಬೇರೆ ಬೇರೆ ಸಂಸ್ಥೆಗಳ ಹೆಸರಿನಲ್ಲಿ ಹಣವನ್ನು ಹುಂಡಿಗೆ ಹಾಕಿ ಎನ್ನುತ್ತಾರೆ. ಅಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಹುಂಡಿಗೆ ಹಾಕಿದರೆ ಲೆಕ್ಕಕ್ಕೆ ತೆಗೆದುಕೊಳ್ಳುವುದು 60 ಸಾವಿರ ಮಾತ್ರ. ತಿರುಪತಿಯಲ್ಲಿ ಮಾತ್ರ ಹುಂಡಿ ಪದ್ಧತಿ ಇದೆ ಎಂದರೆ ತಪ್ಪು, ಕಾಲೇಜಿನಲ್ಲಿ ಕೂಡ ಹುಂಡಿ ಪದ್ಧತಿ ಇದೆ. ಆದರೆ ಅದು ಯಾವ ದೇವರಿಗೆ ಹೋಗುತ್ತದೆಂದು ಈಗ ನಿಷ್ಕರ್ಷೆ ಆಗಬೇಕು.

ಒಬ್ಬ ಮಾನ್ಯ ಸದಸ್ಯರು.— ಹುಂಡಿ ಪದ್ಧತಿಯನ್ನು ಜಾರಿಗೆ ತಂದವರು ನೀವಲ್ಲವೆ ?

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ವಿದ್ಯಾ ಸಚಿವರಾದ ರಾಜಣ್ಣನವರಿಗೆ ಒಂದು ಶಕ್ತಿ ಕೊಡುವ ಸಲುವಾಗಿ ಇದನ್ನೆಲ್ಲಾ ಹೇಳುತ್ತಿದ್ದೇನೆ. ನೀವೇನೋ ಲೆಕ್ಕ ಪರಿಶೋಧನೆ ಮಾಡುತ್ತೇವೆಂದು ಹೇಳಿದಿರಿ; ಆದರೆ ಅದಕ್ಕೆ ಕಾನೂನು ಬಲ ಇರಬೇಕಲ್ಲ. ನೀವು ಕಾಲೇಜಿಗೆ ಹೋಗಿ ಬೇಕಾದರೆ ಚರ್ಚೆ ಮಾಡಬಹುದು. ಆದರೆ 2–3 ಲಕ್ಷ ರೂಪಾಯಿಗಳನ್ನು ಹುಂಡಿಗೆ ಹಾಕುತ್ತಾರಲ್ಲ ಅದು ಎಲ್ಲಿಗೆ ಹೋಗುತ್ತದೆಂಬುದನ್ನು ಪತ್ತೆ ಮಾಡುವುದಕ್ಕಾಗುವುದಿಲ್ಲ. ಬೇರೆ ಬೇರೆ ಸಂಸ್ಥೆಗಳ ಹೆಸರಿನಲ್ಲಿ ಹಾಕಿದ ಹಣದಿಂದ ಸಾಕಷ್ಟು ಚಾರಿಟಬಲ್ ಸಂಸ್ಥೆಗಳು ನಾಯಿಕೊಡೆಗಳಂತೆ ಹುಟ್ಟಿವೆ. ಅವುಗಳಿಗೆ ಕ್ಯಾಪಿಟೇಷನ್ ಫೀ ವಸೂಲ್ಮಾಡುವುದೇ ಕಸಬಾಗಿದೆ. ಅಂಥವನ್ನು ಗುರುತಿಸಿ ಸರ್ಕಾರ ತನ್ನ ಹತೋಟಿಯಲ್ಲಿಟ್ಟುಕೊಳ್ಳಬೇಕು. ಇಲ್ಲದಿದ್ದರೆ ಒಂದು ಕಡೆ ನಿಲ್ಲಿಸಬೇಕೆಂದು ಹೊರಟರೆ ಇನ್ನೊಂದು ಕಡೆ ಹುಲುಸಾಗಿ ಬೆಳೆಯುತ್ತವೆ. ಕ್ಯಾಪಿಟೇಷನ್ ಫೀ ಎಂದು ಏನು ಹೇಳಿದ್ದೀರಿ ಅದನ್ನು ಸ್ವಲ್ಪ ಗಮನಿಸಬೇಕು. ಏಕೆಂದರೆ, ಇದುವರೆಗೆ ಎರಡು ಲಕ್ಷ ರೂಪಾಯಿಗಳನ್ನು ವಸೂಲ್ಮಾಡುತ್ತಿದ್ದರೆ ಮುಂದೆ ಹತ್ತು ಲಕ್ಷ ರೂಪಾಯಿಗಳವರೆಗೆ

ವಸೂಲ್ಮಾಡತಕ್ಕ ಪ್ರಮೇಯ ಈ ಮಸೂದೆಯಿಂದ ಉದ್ಭವವಾಗಬಹುದು. ಆದ್ದರಿಂದ, ಡೈರೆಕ್ಟಲಿ ಅಥವಾ ಇಂಡೈರೆಕ್ಟಲಿ ಎಂಬ ಪದವನ್ನು ಸೇರಿಸಿದರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಯಾವುದೇ ಸಂಸ್ಥೆಗೆ ಯಾವುದೇ ರೂಪದಲ್ಲಿ, ತಂದೆಯ ಹೆಸರಿನಲ್ಲಿ ಅಥವಾ ಮಗನ ಹೆಸರಿನಲ್ಲಿ ಕೊಟ್ಟರೂ ಕೂಡ ಅದನ್ನು ಕಾನೂನು ಬಲದಿಂದ ನಿಯಂತ್ರಿಸತಕ್ಕ ಕ್ಲಾಸನ್ನು ಇದರಲ್ಲಿ ಸೇರಿಸಬೇಕೆಂದು ಹೇಳುತ್ತೇನೆ. ತಮಗೆ ಪ್ರಾಮಾಣಿಕವಾದ ಉದ್ದೇಶ ಇದೆ ಎಂದು ಭಾವಿಸುತ್ತೇನೆ. ಅದು ಇದ್ದರೆ ಅಧೀರರಾಗ ಬೇಕಾಗಿಲ್ಲ. ಈ ಪ್ರಯತ್ನದಲ್ಲಿ ತಮ್ಮ ಹಸ್ತ ನಡುಗಬಾರದು, ಗಟ್ಟಿಯಾಗಿ ನಿಲ್ಲಬೇಕು. ಅದು ಗಟ್ಟಿ ಯಾಗಿ ನಿಲ್ಲುವುದಕ್ಕೆ ಶಾಸನದ ತಿದ್ದುಪಡಿ ಮಾಡಿ ಎಂದು ಹೇಳುತ್ತೇನೆ. ಧೈರ್ಯದಿಂದ ಹುಂಡಿಯ ವ್ಯವಸ್ಥೆ ಯನ್ನು ತಪ್ಪಿಸಿ ಅದು ಯಾವ ದೇವರಿಗೂ ಹೋಗುವುದಿಲ್ಲ; ಮನುಷ್ಯರಿಗೆ ಹೋಗುತ್ತದೆ. ಮತ್ತು ಆ ಹಣ ಬೇರೆ ಬೇರೆ ರೂಪದಲ್ಲಿ ದುರುಪಯೋಗವಾಗುತ್ತದೆ. ಹಣ ಸಂಗ್ರಹ ಮಾಡಿದ್ದನ್ನು ನೋಡುವುದ ಕ್ಕಿಂತ ಖರ್ಚು ಮಾಡುವುದನ್ನು ಮುಖ್ಯವಾಗಿ ನೋಡಬೇಕು. ಈ ದೃಷ್ಟಿಯಲ್ಲಿ ನೀವು ಗಟ್ಟಿಯಾದ ಹಾಲನ್ನು ಕುಡಿಯಬೇಕೆಂಬ ಇಚ್ಛೆ ಇದ್ದರೆ ನಮ್ಮ ತಿದ್ದುಪಡಿಗೆ ಒಪ್ಪಿಕೊಳ್ಳಬೇಕಾಗುತ್ತದೆ.

Sri B Rachaiah.— The definition says: "Capitation fee means any amount, by whatever name called, paid or collected in excess of the fee prescribed under section 5, but does not include the deposit specified under the proviso to Section 3;". Sir, the words "by whatever means" are more comprehensive than the words "directly or indirectly".

Sri M. Veerappa Moily.— By whomsoever it is collected, by whatever name is collected, it is alright. You may call it donation or contribution or some other name. But collected by some other institutions ......

Sri A. Lakshmisagar (Minister for Law and Parliamentary Affairs) — It includes the jurisdiction namely, such persons acting on behalf. That is also there. Nobody can escape from this provision

Sri B. Rachaiah — If you are not able to define the word 'indirectly', there is no point in including that.

ಡಾ ವಿ. ಎಸ್ ಆಚಾರ್ಯ.— ಡೈರೆಕ್ಟಲಿ ಅಥವಾ ಇಂಡೈರೆಕ್ಟಲಿ ಎಂದು ಸೇರಿಸಿಕೊಂಡರೆ ಏನು ತೊಂದರೆ ಇದೆ ?

ಶ್ರೀ ಬಿ. ರಾಚಯ್ಯ. ರಿಸ್ಟ್ರಿಕ್ಟ್ ಮಾಡಿದ ಹಾಗೆ ಆಯಿತು.

ಡಾ. ವಿ. ಎಸ್. ಆಚಾರ್ಯ.— ಈಗ ಇರುವುದನ್ನು ನೋಡಿಕೊಂಡು ಡೈರೆಕ್ಟಲಿ ಅಥವಾ ಇಂಡೈ ರೆಕ್ಟಲಿ ಎಂದು ಸೇರಿಸಿಕೊಂಡರೆ ಏನೂ ತೊಂದರೆ ಇಲ್ಲ.

ಶ್ರೀ ಬಿ ರಾಚಯ್ಯ.— ಮಾನ್ಯ ಮೊಯಿಲಿಯವರು, ಸರ್ಕಾರ ಏನಾದರೂ ಇಂಥದ್ದು ಬಂದಾಗ ಕಠಿಣ ಕ್ರಮ ಕೈಗೊಳ್ಳಬೇಕಾದರೆ ಕೈ ಭದ್ರ ಇರಲಿ ಎಂದು ಹೇಳಿದರು; ಅದನ್ನು ಒಪ್ಪಿಕೊಳ್ಳುತ್ತೇನೆ. ಬಹಶಃ ಏನೂ ತೊಂದರೆ ಆಗಲಾರದು ಎಂದು ಅನ್ನಿಸುತ್ತದೆ. ಆದುದರಿಂದ, ಅಲ್ಲಿ ಪಾಯಿಂಟ್ ಇಲ್ಲ ಎಂದು ಹೇಳುವುದಕ್ಕೆ ಬದಲಾಗಿ ಡೈರೆಕ್ಟಲಿ ಅಥವಾ ಇಂಡೈರೆಕ್ಟಲಿ ಎಂದು ಇರಬೇಕೆಂಬುದನ್ನು ಒಪ್ಪಿ ಕೊಳ್ಳುವುದಕ್ಕೆ ತಯಾರಿದ್ದೇನೆ

ಶ್ರೀ ಎಂ ವೀರಪ್ಪ ಮೊಯಿಲಿ.— ನಾನು ಮಂತ್ರಿಗಳ ನಿಲುವನ್ನು ಸ್ವಾಗತಿಸುತ್ತೇನೆ.

ಶ್ರೀ ಕೆ ಹೆಚ್. ರಂಗನಾಥ್ (ಹಿರಿಯೂರು). – ಸಬ್ ಕ್ಲಾಸ್ (ಬಿ) ನಲ್ಲಿ "but does not include the deposit" ಎಂದು ಇದೆ. ಅದಕ್ಕೆ ನನ್ನ ತಿದ್ದುಪಡಿ ಏನೆಂದರೆ, "including" for the words "does not include" ಎಂದು ಸೇರಿಸಬೇಕೆಂದಿದ್ದೇನೆ. ಮೊದಲನೆಯದನ್ನು ಒಪ್ಪಿದ ಹಾಗೆ ಇದನ್ನೂ ಒಪ್ಪಿಯಾರು ಎಂದು ಕಾನೂನು ಮಂತ್ರಿಗಳು 'ಬರುವುದಿಲ್ಲ' ಎಂದು ಶಿಕ್ಷಣ ಮಂತ್ರಿಗಳಿಗೆ ಹೇಳುತ್ತಿದ್ದಾರೆ

Sri A. Lakshmisagar.— The collection of deposit is not going to be a permanent feature. We may specify a period and do away with it. For doing that this power is taken.

Sri K. H Ranganath.— I have not yet spoken on my amendment,

Sri A. Lakshmisagar.— I know your mind and what point you are making. I am only anticipating your argument in order to save time. Power is being taken. Deposit is only a temporary phase It is not going to be a permanent one. It is intended to help those Karnataka boys who would not be in a position to get the seats in the merit-cum-reservation pool. At least these seats should be available to Karnataka boys on a deposit scheme. According to the earlier practice a sum of Rs. 60,000/- non refund able was being collected. That is sought to be done away with.

ಶ್ರೀ ಕೆ. ಹೆಚ್. ರಂಗನಾಥ್.— ನನ್ನ ತಿದ್ದುಪಡಿ ಬಗ್ಗೆ ಇನ್ನೂ ನಾನು ಏನೂ ಹೇಳಿಲ್ಲ. ನನ್ನ ತಿದ್ದುಪಡಿಯ ಮೂಲ ಉದ್ದೇಶ ಏನೆಂದರೆ, ಈ ಶುಲ್ಕ ವಸೂಲಿ ಇರಕೂಡದು ಎಂದು. ಆದಕ್ಕಾಗಿ ಕ್ಲಾಸ್–3ಕ್ಕೆ ಕೂಡ ಒಂದು ತಿದ್ದುಪಡಿಯನ್ನು ಕೊಟ್ಟಿದ್ದೇನೆ. ಆ ತಿದ್ದುಪಡಿಯನ್ನು ಕೊಟ್ಟಿರುವುದರಿಂದ ಈ ತಿದ್ದುಪಡಿ ಅವಶ್ಯವಾಗಿ ಸಬ್ ಕ್ಲಾಸ್–(ಬಿ) ಯಲ್ಲಿ ಬರಬೇಕಾಗುತ್ತದೆ. ಮಸೂದೆ ಇದ್ದ ಹಾಗೆ ಒಪ್ಪುವುದಾದರೆ ಇದನ್ನೆಲ್ಲ ಹೇಳುತ್ತಿರಲಿಲ್ಲ ಈ ಶುಲ್ಕ ಹೋಗಬೇಕು, ಮಸೂದೆಯಲ್ಲಿ ಬದಲಾವಣೆ ಆಗಬೇಕೆಂಬ ಉದ್ದೇಶ ಇರುವುದರಿಂದ ಕ್ಲಾಸ್–3ನ್ನು ಬಿಡಬೇಕೆಂದು ತಿದ್ದುಪಡಿ ಕೊಟ್ಟಿದ್ದೇನೆ. ಅದನ್ನು ಅದರ ಬಗ್ಗೆ ಮಾತನಾಡುವಾಗ ಹೇಳುತ್ತೇನೆ. ಅದರ ಹಿನ್ನೆಲೆಯಲ್ಲಿ "... does not include deposit" ಎನ್ನುವ ಬದಲು "... include deposit" ಎಂಬ ಪದಗಳನ್ನು ಸೇರಿಸಬೇಕು. ಮಾನ್ಯ ಮಂತ್ರಿಗಳು ಚರ್ಚೆಯಲ್ಲಿ ಮಧ್ಯೆ ಮಾತನಾಡಿ ಕಟ್ ಆಫ್ ಸ್ಟೇಜಿಗೆ ನಿಲ್ಲುವುದರಿಂದ ಅದರಿಂದ ಕೆಳಗೆ ಬರತಕ್ಕವರಿಗೆ ಸೀಟು ಸಿಗುವುದಿಲ್ಲ ಎಂಬ ಮಾತನ್ನು ಹೇಳುತ್ತಾ 50 ಸಾವಿರ ರೂಪಾಯಿ ಡಿಪಾಸಿಟ್ ಕೊಟ್ಟರೆ ಅಂಥವರಿಗೆ ಸೀಟು ಸಿಗುತ್ತದೆ ಎಂದು ಹೇಳಿದರು. ಆದೂ ಕರ್ನಾಟಕದ ಹುಡುಗರಿಗೆ ಸಮಾಜದ ವ್ಯವಸ್ಥೆಯನ್ನು ನಾವು ನೋಡುವುದಾದರೆ ಇದು ಸಾಧ್ಯವೇ ಎಂದು ಯೋಚನೆ ಮಾಡಬೇಕಾಗುತ್ತದೆ. ಉದಾಹರಣೆಗೆ ಒಬ್ಬ ಹೈಸ್ಕೂಲಿನ ಉಪಾಧ್ಯಾಯನ ಮಗ ಇರುತ್ತಾನೆ. ಅವನಿಗೆ ಬರತಕ್ಕ ಸಂಬಳದ ಪ್ರಕಾರ ಅವನ ಮಗ ಜನರಲ್ ಪೂಲ್‌ನಲ್ಲಿ ಬರುತ್ತಾನೆ. ಆತ ಯಾವುದೇ ಜಾತಿ ವರ್ಗಕ್ಕೆ ಸೇರಿದರೂ ಜನರಲ್ ಪೂಲ್‌ನಲ್ಲೇ ಬರುತ್ತಾನೆ. ಕಟ್ ಆಫ್ ಸ್ಟೇಜಿಗೆ ಬಂದಾಗ ಅಂಥವರ ಮಗ ಇದ್ದರೆ ಅವನು 50 ಸಾವಿರ ರೂಪಾಯಿ ಕೊಡಬೇಕು ಎಂದರೆ ಅವನಿಗೆ ಎಲ್ಲಿಂದ ದುಡ್ಡು ಬರುತ್ತದೆ ? ಯಾವ ತರಹದ ಸಾಮಾಜಿಕ ನ್ಯಾಯ ಇದು ?

ಶ್ರೀ ಎ. ಲಕ್ಷ್ಮೀಸಾಗರ್.— ಹಿಂದೆ ಇತ್ತು.

ಶ್ರೀ ಕೆ ಹೆಚ್. ರಂಗನಾಥ್.— ಹಿಂದೆ ಸ್ವಾತಂತ್ರ್ಯವೇ ಬಂದಿರಲಿಲ್ಲ. ಆವಾಗ ಏನೋ ಇತ್ತು ಎಂದು ಹೇಳಿದರೆ ಏನರ್ಥ?

ಶ್ರೀ ಎ. ಲಕ್ಷ್ಮೀಸಾಗರ್.— ಹಿಂದೆ 60 ಸಾವಿರ ರೂಪಾಯಿ ಕೊಟ್ಟರೂ ಅದನ್ನು ವಾಪಸ್ ಕೊಡುತ್ತಿರಲಿಲ್ಲ ಈಗ 50 ಸಾವಿರ ರೂಪಾಯಿ ಕೊಟ್ಟರೆ ಅದನ್ನು ವಾಪಸ್ ಕೊಡುತ್ತೇವೆ.

ಶ್ರೀ ಕೆ ಹೆಚ್. ರಂಗನಾಥ್.— ಸರ್ಕಾರಿ ನೌಕರರಿಗೆ ಸೇರಬೇಕಾದರೆ ಆತ ಯಾವುದೇ ಜಾತಿಗೆ ಸೇರಿದ್ದರೂ ವರ್ಷಕ್ಕೆ 4500 ರೂಪಾಯಿಗಿಂತ ಕಡಿಮೆ ವರಮಾನ ಅವರ ಮನೆಯವರಿಗಿದ್ದರೆ ಅಂಥವರಿಗೆ 15 ಪರ್ಸೆಂಟ್ ರಿಸರ್ವೇಷನ್ ಎಂದು ಮಾಡಿದ್ದಾರೆ. ಇಲ್ಲಿ 50 ಸಾವಿರ ರೂಪಾಯಿ ಡಿಪಾಸಿಟ್ ಕಟ್ಟಬೇಕು ಎಂದರೆ 10 ವರ್ಷಗಳಿಗೆ ಬಡ್ಡಿ ಎಷ್ಟಾಯಿತು? 5 ವರ್ಷಗಳ ಫೀಸ್‌ಗಿಂತ ಕೂಡ ಜಾಸ್ತಿಯಾಗುತ್ತದೆಂದು ಮಾನ್ಯ ಪಿ. ಜಿ. ಆಚಾರ್ಯ ಅವರು ಹೇಳಿದರು. ಇದನ್ನೆಲ್ಲಾ ಗಣನೆಗೆ ತೆಗೆದುಕೊಳ್ಳುವಾಗ ಈ ಮಸೂದೆಯ ಮೂಲ ಉದ್ದೇಶ ಕ್ಯಾಪಿಟೇಷನ್ ಶುಲ್ಕ ರದ್ದಾಗಬೇಕು ಎಂದು ಇರುವುದರಿಂದ ನನ್ನ ಈ ತಿದ್ದುಪಡಿ ಅವಶ್ಯಕವಾಗುತ್ತದೆ. ಆದ್ದರಿಂದ "including deposit" ಎಂದು ಸೇರಿಸಬೇಕು ಎಂದು ಹೇಳುತ್ತೇನೆ. ಡಿಪಾಸಿಟ್ ತೆಗೆದುಕೊಳ್ಳದೆ ಮಾಡಬೇಕು ಎಂಬುದು ನನ್ನ ಅಭಿಪ್ರಾಯ. ಸಾಮಾಜಿಕ ನ್ಯಾಯ ದೊರಕಿಸಿಕೊಡುತ್ತೇವೆ ಎಂದು ಹೇಳುವ ಸರ್ಕಾರ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.— ಮಾನ್ಯ ಅಧ್ಯಕ್ಷರೆ, ಮೆರಿಟ್ ಪ್ರಕಾರ ಮೆಡಿಕಲ್ ಕಾಲೇಜುಗಳಲ್ಲಿ 90–92 ಪರ್ಸೆಂಟ್‌ವರೆಗೆ ಕಟ್–ಆಫ್ ಪಾಯಿಂಟ್ ಇರುತ್ತದೆ. ಕರ್ನಾಟಕದ ವಿದ್ಯಾರ್ಥಿಗಳಿಗೆ ಕ್ಯಾಪಿಟೇಷನ್ ಫೀಸ್ ಇಲ್ಲದೆ ಸೀಟು ಕೊಡಬೇಕು ಎಂದು ಮಾಡಿದರೂ ಕೂಡ ಎಷ್ಟು ಸೀಟುಗಳನ್ನು ಅವರಿಗೆ ಕೊಡಬೇಕಾಗಿತ್ತೋ ಅಷ್ಟನ್ನು ಕೊಡುವುದಕ್ಕಾಗಲಿಲ್ಲ. ಮುಂದಿನ ವರ್ಷ 20 ಪರ್ಸೆಂಟ್ ಜಾಸ್ತಿ ತೆಗೆದುಕೊಂಡರೆ ಇನ್ನೂ ಕಡಿಮೆ ಬರಬಹುದೇನೋ ಆದ್ದರಿಂದ ಈ ವರ್ಷ ಕರ್ನಾಟಕದವರೇ ಆಗಿದ್ದು ಮೆರಿಟ್ ಇದ್ದರೆ ಅಂಥಹವರು 60 ಸಾವಿರ ರೂಪಾಯಿ ಕ್ಯಾಪಿಟೇಷನ್ ಫೀಸ್ ಕೊಡುವ ಬದಲಾಗಿ 50 ಸಾವಿರ ರೂಪಾಯಿ ಡಿಪಾಸಿಟ್ ಕೊಟ್ಟರೆ ಅವರಿಗೆ ಸೀಟು ಕೊಡುವುದಲ್ಲದೆ ಅವರು

ಕೋರ್ಸ್ ಮುಗಿಸಿದ ಮೇಲೆ 5 ವರ್ಷದ ನಂತರ ಅವರ ಹಣವನ್ನು ವಾಪಸ್ ಕೊಡುತ್ತೇವೆ. ಇದನ್ನು ಕ್ಯಾಪಿಟೇಷನ್ ಫೀಸ್ ಎಂಬ ಡೆಫನಿಷನ್‌ನಲ್ಲಿ ಸೇರಿಸಿಕೊಳ್ಳುವುದಕ್ಕಾಗುವುದಿಲ್ಲ. ಮೆರಿಟ್ ಇರುವ ಕರ್ನಾಟಕದ ವಿದ್ಯಾರ್ಥಿಗಳಿಗೆ ಅನುಕೂಲವಾಗಲೀ ಎಂಬ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ ಕ್ಯಾಪಿಟೇಷನ್ ಶುಲ್ಕ ಕೊಡಬೇಕೆಂದರೆ ಕರ್ನಾಟಕದ ವಿದ್ಯಾರ್ಥಿಗಳಿಗೆ ಮೆರಿಟ್ ಇರುವವರಿಗೆ ಕಷ್ಟವಾಗುತ್ತದೆ, ಆದ್ದರಿಂದ ಅವರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ

ಶ್ರೀ ಕೆ.ಹೆಚ್. ರಂಗನಾಥ್. — 50 ಸಾವಿರ ರೂಪಾಯಿ ಇದ್ದರೆ ಡಿಪಾಸಿಟ್ ಮಾಡುತ್ತಾರೆ. ಇಲ್ಲದಿದ್ದರೆ ಏನು ಮಾಡುತ್ತಾರೆ?

ಶ್ರೀ ಬಿ ರಾಚಯ್ಯ.—ಮೊದಲು ಕ್ಯಾಪಿಟೇಷನ್ ಫೀಸ್ ಕಟ್ಟಬೇಕಾಗಿತ್ತು. ಈಗ ಇಷ್ಟಾದರೂ ರಿಯಾಯಿತಿ ಇದೆ. ಆದ್ದರಿಂದ ಇದಕ್ಕೆ ಒಪ್ಪಿಗೆ ಕೊಡಬೇಕಾಗಿ ಕೇಳಿಕೊಳ್ಳುತೇನೆ. ತಾವು ಕಳುಹಿಸಿರುವ ತಿದ್ದುಪಡಿಯನ್ನು ದಯಮಾಡಿ ವಾಪಸ್ ತಗೆದುಕೊಳ್ಳಿ ಸ್ವಾಮಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಹಳ್ಳಿಗಾಡಿನಿಂದ ಬರತಕ್ಕ ಮಕ್ಕಳಿಗೆ ಹೆಚ್ಚಿನ ಸಹಾಯ ದೊರಕಿಸಿಕೊಡಬೇಕು ಎಂಬುದು ನನ್ನ ತಿದ್ದುಪಡಿ. ನನಗೆ ತಿಳಿದಮಟ್ಟಿಗೆ ಆಡಳಿತ ಪಕ್ಷದಲ್ಲಿರತಕ್ಕ ಬಹಳ ಮಂದಿ ಶಾಸಕರು ಕೂಡ ಇದೇ ಅಭಿಪ್ರಾಯವನ್ನುಳ್ಳವರಾಗಿದಾರೆ ಎಂಬುದು ಅವರ ಭಾಷಣದಿಂದ ಸ್ಪಷ್ಟವಾಗಿ ಗೊತ್ತಾಗಿದೆ. ಆದ್ದರಿಂದ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದು ಸೂಕ್ತ. ನಾನು ಈ ವಿಚಾರದಲ್ಲಿ ಕಾನೂನುಮಂತ್ರಿಗಳ ಜೊತೆ ಮಾತನಾಡಿ ಇದು ಕಾನೂನುಬದ್ಧವಾಗಿದೆಯೇ ಎಂದು ತಿಳಿದುಕೊಳ್ಳುವುದಕ್ಕೆ ಪ್ರಯತ್ನಪಟ್ಟೆ ಅವರು ಹೇಳಿದರು, ಕೋರ್ಟ್ ತೀರ್ಮಾನ ಇರುವುದರಿಂದ ಇದನ್ನು ಒಪ್ಪಿಕೊಳ್ಳುವುದು ಕಷ್ಟವಾಗಬಹುದು ಎಂದು. ನಾನು ಅದನ್ನು ಆಮೇಲೆ ಓದಿದೆ. ಅದರಲ್ಲಿ ರೂರಲ್ ಏರಿಯಾಸ್‌ಗೆ ಎಂದು ಅಷ್ಟಕ್ಕೆ ಮಾತ್ರ ತೀರ್ಮಾನ ಕೊಟ್ಟಿರುವುದಿದೆ. ನಾವು ಕೊಟ್ಟಿರತಕ್ಕ ತಿದ್ದುಪಡಿಯಲ್ಲಿ

"who have had their education up to PUC in the rural institutions irrespective of caste and religion ..."

ಎಂದು ಸೇರಿಸಿದ್ದೇವೆ ಈ ರೀತಿ ಇರುವುದರಿಂದ ಇದಕ್ಕೆ ಕೋರ್ಟಿನ ತೀರ್ಮಾನ ಅಡ್ಡಿ ಬರಲಾರದು ಎಂಬುದು ನನ್ನ ಅಭಿಪ್ರಾಯ. ಕೃಷಿ ಕಾಲೇಜುಗಳಲ್ಲಿ ಹಳ್ಳಿಗಾಡಿನಿಂದ ಬರತಕ್ಕ ಮಕ್ಕಳಿಗೆ 15 ಅಂಕಗಳನ್ನು ಹೆಚ್ಚಿಗೆ ಕೊಟ್ಟು ಅವರಿಗೆ ಸಹಾಯವಾಗುವ ರೀತಿಯಲ್ಲಿ ಮಾಡಿದ್ದಾರೆ. ಇದೇ ರೀತಿ ಮೆಡಿಕಲ್ ಮತ್ತು ಇಂಜನಿಯರಿಂಗ್ ಕಾಲೇಜುಗಳಿಗೂ ಅನ್ವಯಿಸಿದರೆ ಸಹಾಯಕವಾಗುತ್ತದೆ. ಈಗ ಅವರಿಗೆ ಕೊಡುತ್ತಿರತಕ್ಕ ಸೌಲಭ್ಯ ಸಾಲದು ಆದ್ದರಿಂದ ಅವರಿಗೆ 70 ಪರ್ಸೆಂಟ್ ಸ್ಥಾನಗಳನ್ನು ರಿಸರ್ವ್ ಮಾಡಬೇಕೆಂಬುದು ನನ್ನ ಉದ್ದೇಶ. ದಯಮಾಡಿ ಈ ನನ್ನ ಉದ್ದೇಶ ಸಫಲವಾಗುವಂತೆ ನೋಡಬೇಕು. ಹಳ್ಳಿಗಾಡಿನಲ್ಲಿರುವ ಮಕ್ಕಳಿಗೆ ಸಹಾಯವಾಗಬೇಕು ಎಂಬ ಆಸೆ ಮಾನ್ಯ ಮಂತ್ರಿಗಳಿಗೂ ಇರುವುದರಿಂದ ಇದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ.

ಶ್ರೀ ಪ ಪಾಪತಿ.— ಹಳ್ಳಿಗಾಡಿನ ಮಕ್ಕಳಿಗೆ ಬಹಳ ಕಷ್ಟವಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಪೇಟೆಯಲ್ಲಿರುವವರೆಲ್ಲಾ ದೊಡ್ಡ ಶ್ರೀಮಂತರೇನಲ್ಲ ಇಲ್ಲೂ ಕೊಳಚೆ ಪ್ರದೇಶದಲ್ಲಿರುವ ಜನ ಇದ್ದಾರೆ, ಗಾಡಿ ಎಳೆಯುತಕ್ಕವನ ಮಗ ಇರುತ್ತಾನೆ, ಕಾರ್ಮಿಕರ ಮಕ್ಕಳಿರುತ್ತಾರೆ.

ಅಧ್ಯಕ್ಷರು. ಅವರು ತಿದ್ದುಪಡಿ ಮೇಲೆ ಮಾತನಾಡಿದ್ದಾರೆ. ಮಂತ್ರಿಗಳ ಉತ್ತರ ಏನು ಎಂದು ನೋಡೋಣ,

ಶ್ರೀ ಪಂಪಾಪತಿ.— ಪೇಟೆಯಲ್ಲೂ ಬಡವರಿದ್ದಾರೆ.

ಶ್ರೀ ಹೆಚ್.ಸಿ ಶ್ರೀಕಂಠಯ್ಯ.— ಅವರು ರಿಸರ್ವೇಷನ್‌ನಲ್ಲಿ ಬರುತ್ತಾರೆ.

ಶ್ರೀ ಪಂಪಾಪತಿ.—ಮಿಲ್‌ಗಳಲ್ಲಿ ಕೆಲಸ ಮಾಡುವವರು ಶ್ರೀಮಂತರೆ? ಅವರನ್ನೂ ಇದರಲ್ಲಿ ಸೇರಿಸಿ.

ಅಧ್ಯಕ್ಷರು.— ನೀವು ತಿದ್ದುಪಡಿ ಕಳುಹಿಸಿಲ್ಲ ಕಳುಹಿದ್ದರೆ ನಾವು ಮಾತನಾಡಬಹುದಾಗಿತ್ತು.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ನನ್ನ ತಿದ್ದುಪಡಿಯಲ್ಲಿ ಹಳ್ಳಿಗಾಡಿನ ರೈತ ಕಾರ್ಮಿಕರ ಮಕ್ಕಳಿಗೂ ಅನ್ವಯಿಸುವಂತೆ ಇದೆ ಇದರಿಂದ ಪಂಪಾಪತಿಯವರಿಗೆ ಸಂತೋಷ ಆಗಲೇಬೇಕು.

ಶ್ರೀ ಬಿ. ರಾಚಯ್ಯ — ಮಾನ್ಯ ರಂಗನಾಥ್ ಅವರಿಗೆ ಡಿಪಾಸಿಟ್‌ಗೆ ಸಂಬಂಧಪಟ್ಟಂತೆ ಅವರು ಕೊಟ್ಟಿರುವ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಹುಚ್ಚಮಾಸ್ತಿಗೌಡರ ತಿದ್ದುಪಡಿ ಬಗ್ಗೆ ಹೇಳಬೇಕೆಂದರೆ ಮೆರಿಟ್ ಪೂಲ್‌ನಲ್ಲಿ ಸೀಟ್ ಕೊಟ್ಟಾಗ ಪಟ್ಟಣದಲ್ಲಿ ಬಂದು ಸೇರಿಕೊಂಡಿರತಕ್ಕ ಹಳ್ಳಿಗಾಡಿನ ಜನರೇನಿದ್ದಾರೆ ......

ಶ್ರೀ ಎಂ. ವೀರಪ್ಪ ಮೊಯಿಲಿ.— ಅವರು ಹೇಗೆ ಸೇರಿಕೊಂಡಿದ್ದಾರೆ?

ಶ್ರೀ ಎನ್ ಹುಚ್ಚಮಾಸ್ತಿ ಗೌಡ.—ನಾನು ಹೇಳುವುದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು.

ಶ್ರೀ ಬಿ. ರಾಚಯ್ಯ.— ಹೇಗೆ ಸೇರಿಕೊಂಡಿದ್ದಾರೆಂಬುದನ್ನು ಹೇಳಬೇಕಾ? ಹಳ್ಳಿಗಾಡಿನಿಂದ ಬಂದು ಸರ್ಕಾರಿ ನೌಕರಿಗೆ ಮತ್ತು ದೊಡ್ಡ ದೊಡ್ಡ ಜಾಗಗಳಲ್ಲಿ ಬಂದು ಪಟ್ಟಣದಲ್ಲಿ ಸೇರಿಕೊಂಡಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಹಳ್ಳಿಗಾಡಿನಲ್ಲಿಂದ ಬಂದು ಈ ಊರುಗಳಲ್ಲಿ ನೆಲೆಸಿದ್ದಾರಲ್ಲಾ ಅವರ ಮಕ್ಕಳಿಗೆ ಇತರರಿಗೆ ಇರತಕ್ಕ ಎಲ್ಲಾ ಸೌಕರ್ಯಗಳೂ ಇವೆ. ಆದರೆ ಹಳ್ಳಿಗಾಡಿನಲ್ಲಿ ಪಿ.ಯು.ಸಿ. ವರೆಗೆ ಓದಿರುವವರಿಗೆ ಈ ಅನುಕೂಲ ಇಲ್ಲ. ಅವರಿಗೂ ಈ ಅನುಕೂಲ ಸಿಗಬೇಕು ಎನ್ನುವುದು ನಮ್ಮ ಉದ್ದೇಶ.

ಶ್ರೀ ಬಿ. ರಾಚಯ್ಯ. — ನಾನು ಅವರು ತಂದಿರತಕ್ಕದ್ದನ್ನು ತತ್ವಶಃ ಒಪ್ಪುತ್ತೇನೆ. ಹಳ್ಳಿಗಾಡಿನಲ್ಲಿ ಓದತಕ್ಕ ಮಕ್ಕಳಿಗೆ ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿ ಓದತಕ್ಕ ಮಕ್ಕಳಿಗೆ ಅಂಕಗಳನ್ನು ಹೋಲಿಸಿ ನೋಡಿದರೆ ಏನು ವ್ಯತ್ಯಾಸ ಇದೆ ಇದನ್ನು ಸರಿಪಡಿಸಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಇದರ ಬಗ್ಗೆ ಯಾವ ರೀತಿ ಮಾಡಬೇಕು ಎನ್ನುವ ಬಗ್ಗೆ ದಯಮಾಡಿ ರೂಲ್ಸ್ ಮಾಡತಕ್ಕ ಕಾಲದಲ್ಲಿ ಪರ್ಯಾಲೋಚಿಸಿ ಅದರ ಪ್ರಕಾರ ಮಾಡುವುದಕ್ಕೆ............ ...

ಶ್ರೀ ಎನ್. ಹುಚ್ಚಮಾಸ್ತಿಗೌಡ. — ಆಕ್ಟ್‌ನಲ್ಲಿ ಇಲ್ಲದಿರುವುದನ್ನು ರೂಲ್ಸ್‌ನಲ್ಲಿ ಸೇರಿಸುವುದಕ್ಕಾಗುತ್ತದೆಯೋ?

ಶ್ರೀ ಬಿ ರಾಚಯ್ಯ.—ಮಾನ್ಯ ಸದಸ್ಯರು 70 ಪರ್ಸೆಂಟ್ ರಿಸರ್ವೇಷನ್ ಎಂದು ಹೇಳುತ್ತಿದ್ದಾರೆ. ಆದರೆ ಈಗಾಗಲೇ, ಬ್ಯಾಕ್‌ವರ್ಡ್ ಕ್ಲಾಸ್‌ಗೆ, ಎಸ್.ಸಿ.ಎಸ್‌ಟಿ.ಗೆ ಬಿ.ಟಿ.ಗೆ ಹಾಗೂ ಸ್ಪೆಷಲ್ ಗ್ರೂಪ್‌ಗೆ ಎಲ್ಲಾ ಸೇರಿ ಒಟ್ಟು 67 ಪರ್ಸೆಂಟ್ ರಿಸರ್ವೇಷನ್‌ನ್ನು ಈಗಾಗಲೇ ಇಡಲಾಗಿದೆ. ಆ 67 ಪರ್ಸೆಂಟ್ ಒಳಗೆ ಈ 70 ಪರ್ಸೆಂಟ್‌ನ್ನು ಹಳ್ಳಿಗಾಡಿನ ಜನರಿಗೆ ಇಡಬೇಕೆಂದು ನಿಮ್ಮ ಅರ್ಥವೇ? ಈ ಬಗ್ಗೆ ಕಾನೂನನ್ನು ನೋಡಿಸಿ ಯಾವ ರೀತಿ ತೆಗೆದುಕೊಳ್ಳಬೇಕು ಹಾಗೂ ಹೇಗೆ ಹಳ್ಳಿಯ ವಿದ್ಯಾರ್ಥಿಗಳಿಗೆ ಅವಕಾಶ ಒದಗಿಸಬೇಕು ಎನ್ನುವ ಬಗ್ಗೆ ನೋಡಬೇಕಾಗುತ್ತದೆ. ಇದನ್ನೆಲ್ಲಾ ಸರ್ಕಾರ ಪರಿಶೀಲನೆ ಮಾಡಿ ಅಡ್ಮಿಷನ್ ರೂಲ್ಸ್‌ನಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ, ದಯಮಾಡಿ ಇದಕ್ಕೆ ಇನ್‌ಸಿಸ್ಟ್ ಮಾಡಬೇಡಿ ಎಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಹಳ್ಳಿಗಾಡಿನಲ್ಲಿ ಇರತಕ್ಕ ಮಕ್ಕಳು ಎಂದರೆ ಯಾರು ಎನ್ನುವುದನ್ನು ನಾವು ಪರಿಶೀಲನೆ ಮಾಡಬೇಕು. ಹೋದ ವರ್ಷ ಮೆಡಿಕಲ್ ಕಾಲೇಜಿನಲ್ಲಿ 8 ಜನ ಹಳ್ಳಿಗರ ಮಕ್ಕಳಿಗೆ ಸೀಟ್ ಸಿಕ್ಕಿದೆ. ಹಾಗೂ ಆಗ ಪಟ್ಟಣದ ಜನರ ಮಕ್ಕಳಿಗೆ ಎಷ್ಟು ಸಿಕ್ಕಿದೆ ಎಂಬುದನ್ನು ಪರಿಶೀಲನೆ ಮಾಡಿದರೆ ನಾವು ತಂದಿರತಕ್ಕ ಪದ್ಧತಿ ಅವಶ್ಯಕವೆಂದು ಸರ್ಕಾರವೇ ಒಪ್ಪಿಕೊಳ್ಳುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ಆಲೋಚನೆ ಮಾಡಿ ಒಪ್ಪಿಕೊಂಡರೆ ಬಹಳ ಅನುಕೂಲವಾಗುತ್ತದೆ. ದಯಮಾಡಿ ಇದನ್ನು ಒಪ್ಪಬೇಕೆಂದು ಹೇಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ). — ಇವತ್ತಿನ ದಿವಸ ಮೆಡಿಕಲ್ ಕಾಲೇಜುಗಳಲ್ಲಿ 0.5, 0.10 ಪರ್ಸೆಂಟ್‌ನಷ್ಟು ಹಳ್ಳಿಗಾಡಿನ ಮಕ್ಕಳಿಗೆ ಓದಲು ಅವಕಾಶ ಸಿಕ್ಕಿದ್ದರೆ ನಾನು ಈ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಇವತ್ತು ಇಡೀ ದೇಶದಲ್ಲಿ ಲೆಕ್ಕ ಹಾಕಿ ನೋಡಿದರೆ ಬಡತನದ ರೇಖೆಗಿಂತಾ ಕೆಳಗೆ ಶೇಕಡಾ 50 ಜನ ಇದ್ದು ಅವರಲ್ಲಿ ಶೇಕಡಾ 90 ರಷ್ಟು ಜನ ಹಳ್ಳಿಗಾಡು ಪ್ರದೇಶದಲ್ಲಿ ಇದ್ದಾರೆ. ಕಳೆದ 30 ವರ್ಷಗಳಿಂದಲೂ ನೋಡುತ್ತಿದ್ದೇನೆ, ಇವತ್ತಿನ ದಿವಸ ಹಳ್ಳಿಗಾಡಿನ ಜನರಿಗೆ ಕೊಟ್ಟಿರತಕ್ಕ ಪ್ರಯೋಜನ ಅವರಿಗೆ ದಕ್ಕುತ್ತಾ ಇಲ್ಲ. ಲೈಟಿನ ಸೌಲಭ್ಯವಾಗಲೀ, ನೀರಿನ ಸೌಲಭ್ಯವಾಗಲೀ, ಇತರೇ ಸೌಲಭ್ಯವಾಗಲೀ ಅವರಿಗೆ ಸಿಗುತ್ತಾ ಇಲ್ಲ. ಇವತ್ತು ಹಳ್ಳಿಗಾಡಿನ ಮತ್ತು ಪಟ್ಟಣ ಪ್ರದೇಶದ ಮಕ್ಕಳ ಎಸ್.ಎಸ್.ಎಲ್.ಸಿ ಯಲ್ಲಿನ ತೇರ್ಗಡೆ ನೋಡಿ. ಇದರಿಂದ ಅವರಿಗೆ ಏನು ಪ್ರಯೋಜನ ಸಿಕ್ಕಿದೆ ಎಂಬುದು ಗೊತ್ತಾಗುತ್ತದೆ. ಇವತ್ತು ಏನು ಹರಿಬರಿಯಲ್ಲಿ ಅವರಿಗೆ ರಿಸರ್ವೇಷನ್ ಕೊಟ್ಟಿದ್ದೀರಿ ಅದು ಅವರಿಗೆ ತಲುಪಿಲ್ಲ. ಇವತ್ತಿನ ದಿವಸ ರಾಚಯ್ಯನವರ ಜನರಿಗೆ, ಅವರ ಮಕ್ಕಳಿಗೆ ಅವರ ಅಕ್ಕ ಭಾವಂದಿರಿಗೆ ಜಾತಿಯ ಹೆಸರಿನಲ್ಲಿ ಸಹಾಯ ಸಿಕ್ಕಿದೆ. ಇವತ್ತು ಬೇರೆ ಬಡವರಿಗೆ ಸಹಾಯ ಸಿಕ್ಕಿಲ್ಲ. ಆದ್ದರಿಂದ ಇವತ್ತು ಏನು ಇಂಬ್ಯಾಲೆನ್ಸ್ ಆಗಿದೆ ಅದನ್ನು ಸರಿಪಡಿಸುವ ದೃಷ್ಟಿಯಿಂದ ಅವರ ಬಗ್ಗೆ ಪ್ರಾವಿಷನ್ ಇಡಬೇಕಾಗುತ್ತದೆ. ಮಾನ್ಯ ಮಂತ್ರಿಗಳು ರೂಲ್ಸ್‌ನಲ್ಲಿ ತರುತ್ತೇವೆಂದು ಹೇಳಿದರು. ಆಕ್ಟ್‌ನಲ್ಲಿ ಏನು ಇಲ್ಲವೋ ಅದನ್ನು ರೂಲ್ಸ್‌ನಲ್ಲಿ ತರುವುದಕ್ಕೆ ಆಗುವುದಿಲ್ಲ. ಆದ್ದರಿಂದ ತಾವು ಇದನ್ನು ಒಪ್ಪಿಕೊಂಡು ಏನು 70 ಪರ್ಸೆಂಟ್ ಜನ ಇದ್ದಾರೋ ಅವರ ಜನಸಂಖ್ಯೆಗೆ ಅನುಗುಣವಾಗಿ ರಿಸರ್ವೇಷನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ

ಶ್ರೀ ಬಿ ರಾಚಯ್ಯ. — ಜಾತಿಯ ಆಧಾರದ ಮೇಲೆ ರಿಸರ್ವೇಷನ್ ಎಂದು ಹೇಳುತ್ತಿದ್ದಾರೆ. ಆದರೆ ಈ ದೇಶದ ಪ್ರಧಾನಿಯವರೇ ಈ ರಿಸರ್ವೇಷನ್‌ನ್ನು ಸಾಮೂಹಿಕವಾಗಿ, ಶೈಕ್ಷಣಿಕವಾಗಿ ಯಾರು ಯಾರು ಹಿಂದುಳಿದವರು ಇದ್ದಾರೆ ಅವರಿಗೆ ಮುಂದುವರಿಸಿಕೊಂಡು ಹೋಗುತ್ತೇವೆಂದು ಹೇಳಿರುವಾಗ ತಾವು ಬಹುಶಃ ಇದನ್ನು ಬದಲಾವಣೆ ಮಾಡಬೇಕೆಂದು ಹೇಳಿದರೆ ಮಾಡುವುದಕ್ಕಾಗುವುದಿಲ್ಲ. ಬಹುಶಃ ಇವತ್ತು ಹರಿಜನ ಗಿರಿಜನರಲ್ಲಿ ಯಾರು ಮುಂದೆ ಇದ್ದಾರೆ ಅವರು ಮಾರ್ಕ್ಸ್ ತೆಗೆದುಕೊಂಡು ಮುಂದೆ ಬಂದಿದ್ದಾರೆಯೋ ವಿನಃ ಸ್ಕಾಲರ್‌ಶಿಪ್ ಆಗಲೀ, ಸಂಭಾವನೆಯನ್ನಾಗಲೀ ತೆಗೆದುಕೊಂಡು ಬಂದಿಲ್ಲ. ಇವತ್ತಿನ ದಿವಸ ಅವರಿಗೂ ಮಾನಿಟರಿ ಲಿಮಿಟ್ಸ್‌ನ್ನು ಫಿಕ್ಸ್ ಮಾಡಿ 3,800 ರೂಪಾಯಿಗಿಂತಾ ಹೆಚ್ಚು

ವರಮಾನ ಬರುವಂತಹವರಿಗೆ ಈ ಒಂದು ಸೌಕರ್ಯ ಸಿಕ್ಕುವುದಿಲ್ಲ. ಇವರು ಏನು ಎಲ್ಲಾ ಪರಿಜನರ ಮಕ್ಕಳಿಗೆ ಇದು ಸಿಗುತ್ತದೆಂದು ಹೇಳಿದರು ಅದು ತಪ್ಪು ಎಂದು ಹೇಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.— ಇವತ್ತಿನ ದಿವಸ ಕ್ಲಾಸ್ 1 ಮತ್ತು ಕ್ಲಾಸ್ 2 ಮಾತ್ರ ಇನ್ನಿತರ ವರ್ಗದ ಪೋಸ್ಟ್‌ಗಳಿಗೆ, ಮಂತ್ರಿಗಳ, ದೊಡ್ಡ ದೊಡ್ಡ ಅಧಿಕಾರಿಗಳ, ಎಂ.ಎಲ್.ಎ.ಗಳ ಮಕ್ಕಳೇ ಬರುತ್ತಿದ್ದಾರೆ ಎಂಬುದನ್ನು ನಾನು ರೆಕಾರ್ಡ್ ತಂದು ತೋರಿಸಬಲ್ಲೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಮಾತನಾಡುವಾಗಲೆಲ್ಲಾ ಮಿನಿಸ್ಟರ್ ಮಕ್ಕಳು ಎಂದು ಹೇಳುತ್ತಿರುತ್ತಾರೆ. ಇವತ್ತಿನ ದಿವಸ ಮಿನಿಸ್ಟರ್ ಮಕ್ಕಳು ಯಾರೂ ಮುಂದೆ ಒಂದು ಜಾಸ್ತಿ ಓದುವುದಕ್ಕಾಗಿಲ್ಲ. ನಮ್ಮ ಮಗ ನನ್ನ ಜೊತೆ ರಾಜಕೀಯದಲ್ಲಿ ಇದ್ದಾನೆ. ವಿದ್ಯಾಭ್ಯಾಸದಲ್ಲಿ ಮುಂದುವರಿದಿಲ್ಲ. ಇವತ್ತು ನಮ್ಮವರು ಯಾರು ಐ.ಎ.ಎಸ್ ಅಧಿಕಾರಿ ಆಗಿದ್ದಾರೆ ಹೇಳಿ ಸ್ವಾಮಿ ?

ಶ್ರೀ ಭೀಮಣ್ಣ ಖಂಡ್ರೆ.— 6–8 ವರ್ಷಗಳ ಹಿಂದಿನ ರೆಕಾರ್ಡ್ ತೆಗೆಸಿ ನೋಡಿ.

ಶ್ರೀ ಬಿ ರಾಚಯ್ಯ.— ಅಧ್ಯಕ್ಷರೇ, ನಿನ್ನೆಯ ದಿವಸ ಅಮೇರಿಕಾದ ಒಬ್ಬ ಆಥರ್ ಅವರು ಸಮಾಜವಾದಿ ರಾಷ್ಟ್ರಗಳಲ್ಲಿ ಸಮಾಜದಲ್ಲಿ ಹಿಂದುಳಿದಿರುವವರ ಬಗ್ಗೆ ಏನು ಮಾಡಬೇಕು ಎನ್ನುವ ಬಗ್ಗೆ ಒಂದು ಪುಸ್ತಕ ಒಂದು ಬಿಡುಗಡೆ ಮಾಡಿದ್ದಾರೆ. ಅದು ನಿನ್ನೆಯ ದಿವಸ ಪ್ರಕಟಣೆ ಆಗಿದೆ. ಅದನ್ನು ಎಲ್ಲರೂ ನೋಡಲಿ. ಎಲ್ಲಿಯವರೆಗೆ ಜಾತೀಯತೆ ಇರುತ್ತದೆ ಅಲ್ಲಿಯವರೆಗೆ ರಿಸರ್ವೇಷನ್ ಇರಬೇಕಾಗುತ್ತದೆ.

ಶ್ರೀ ಭೀಮಣ್ಣ ಖಂಡ್ರೆ.— ಸಮಾಜವಾದ ಮತ್ತು ಜಾತೀಯತೆ ಒಂದಕ್ಕೊಂದು ಬೆರೆಯುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ ರಾಚಯ್ಯ.— ಈಗ ಅವರು 70 ಪರ್ಸೆಂಟ್ ಎಂದು ಹೇಳಿದ್ದಾರೆ. ಈಗಾಗಲೇ 62 ಪರ್ಸೆಂಟ್‌ನಷ್ಟು ರಿಸರ್ವೇಷನ್ ಇದೆ. ಅದರಲ್ಲಿ ಈ 70 ಪರ್ಸೆಂಟ್‌ನ್ನು ಸೇರಿಸಬೇಕೇ ಅಥವಾ ಬೇರೆ 70 ಪರ್ಸೆಂಟ್ ರಿಸರ್ವೇಷನ್ ಇಡಬೇಕೇ ಎಂಬ ಜಿಜ್ಞಾಸೆ ಇದೆ ಈ ಬಗ್ಗೆ ಉತ್ತರ ಪ್ರದೇಶದಲ್ಲಿ ಹೈಕೋರ್ಟಿನ ಒಂದು ಆರ್ಡರ್ ಸಹ ಇದೆ. ಅಗ್ರಿಕಲ್ಚರ್ ಕಾಲೇಜಿನಲ್ಲಿ 10 ಪರ್ಸೆಂಟ್ ರೈತರ ಮಕ್ಕಳಿಗೆ ಕೊಡಬೇಕೆಂದಾಗ ಕೂಡಾ ಇದೇ ರೀತಿ ಅಡ್ಡಿಯನ್ನು ತಂದರು ಅವರನ್ನು ಎಕ್ಸಾಮಿನ್ ಮಾಡಬೇಕು, ನೇಗಿಲು ಹಿಡಿಯಲು ಬರುತ್ತದೆಯೋ ಎಂದು ಕೇಳಬೇಕೆಂದೆಲ್ಲಾ ಆಯಿತು. ಆದರೆ ಆ ಒಂದು ಪದ್ಧತಿ ಮುಂದುವರಿಯುತ್ತಿದೆ

ಶ್ರೀ ಭೀಮಣ್ಣ ಖಂಡ್ರೆ.— ಮಾನ್ಯ ಮಂತ್ರಿಗಳು 70 ಪರ್ಸೆಂಟ್ ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಅಷ್ಟು ಆಗದಿದ್ದರೆ ಇವರಿಗೆ 25 ಪರ್ಸೆಂಟ್ ಕೊಡಿ ಎಂದು ನಾನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಈ ಬಗ್ಗೆ ತಾವು ಸಾಂಕೇತಿಕವಾಗಿ ಒಪ್ಪಿಕೊಳ್ಳಿ ಸ್ವಾಮಿ.

ಶ್ರೀ ಬಿ. ರಾಚಯ್ಯ.— ತಮ್ಮ ಕಳಕಳಿ ಏನು ಇದೆ ಎಂಬ ಬಗ್ಗೆ ಸರ್ಕಾರ ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿದೆ. ಅವಶ್ಯಕತೆ ಇದ್ದರೆ, ಯಾವ ರೀತಿ ತಿದ್ದುಪಡಿ ತರಬೇಕೋ ಅದಕ್ಕೆ ಅವಕಾಶ ಕೊಡಿ ಎಂದು ಕೇಳಿದ್ದೇವೆ. ಈಗ ತಾವು ಹೇಳತಕ್ಕದ್ದು ಒಪ್ಪಿಕೊಂಡರೆ ಕೋರ್ಟಿನಲ್ಲಿ ನಿಲ್ಲುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ಸೂಕ್ತವಾದ ತಿದ್ದುಪಡಿ ಮಾಡುತ್ತೇವೆ ಎಂದು ಹೇಳಿ,

Clause-2

Mr. Speaker—I will now put amendment No. 1 to the vote of the House moved by hon. member Sri M. Veerappa Moily. The question is :

"That in sub-clause (b) line 2 after the word 'collected' the words "directly or indirectly" shall be inserted."

The amendment was adopted

Mr. Speaker.— I will now put amendment No.2 to the vote of the House moved by hon. member Sri K. H. Ranganath. The question is :

"That in sub-clause (b) line 3 for the words, 'but does not include' the ward 'including' shall be substituted."

The amendment was negatived.

Mr. Speaker.— I will put amendment No. 24 to the vote of the House moved by Sri N. Hutchmasthi Gowda. The question is :

"That the following proviso shall be inserted after sub-clause (e)"

70% of the total number of seats in the respective colleges for medicine and engineering be reserved for the students of the rural areas who have had their education up to P.U.C. in the rural institutions."

The amendment was negatived

Mr. Speaker.— I will now put amendment No. 25 to the vote of the House moved by Sri Bhimanna Khandre The question is :

"That the following proviso shall be inserted after sub-clause (e) :

"70% of the total number of seats in the respective colleges for medicine and engineering be reserved for the students of the rural areas who have had their education upto P.U.C. in the rural institutions irrespective of Caste and religion."

The amendment was negatived

Mr. Speaker. – Now, the question is :

"That clause No. 2 as amended do stand part of the Bill."

The Motion was adopted and clause No. 2 as amend was added to the Bill.

Clause–3

Sri K.H. Ranganath.— Sir. I beg to move :

"That the proviso to the Clause shall be deleted."

The question was proposed

Sri M. Veerappa Moily.— Sir, I beg to move :

"That the proviso to Clause 3 shall be deleted,"

The question was proposed

ಶ್ರೀ ಕೆ.ಹೆಚ್. ರಂಗನಾಥ್.— ಮಾನ್ಯ ಅಧ್ಯಕ್ಷರೇ. ಈ ಮಸೂದೆ ಟೈಟಲ್‌ನಲ್ಲಿ ದಿ ಕರ್ನಾಟಕ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ (ಪ್ರಾಹಿಬಿಷನ್ ಆಫ್ ಕ್ಯಾಪಿಟೇಷನ್ ಫೀ) ಬಿಲ್ 1984 ಎಂದು ಇದೆ. ಮಾನ್ಯ ಸದಸ್ಯರಾದ ಮಹೇಶ್ವರಪ್ಪನವರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಪೂರ್ವ ಪೀಠಿಕೆ ಪ್ರಿಯಾಂಬಲ್ ಏನಿದೆ ಅದನ್ನು ನಾವು ಮಸೂದೆಯಲ್ಲಿ ಅಳವಡಿಸಬೇಕಾದ ಆಗತ್ಯತೆ ಏನೂ ಇಲ್ಲ ಎಂದು ಹೇಳಿದರು. ಅದನ್ನು ಹೇಳುತ್ತಾ ರಾಜ್ಯಾಂಗವನ್ನು ಕೂಡ ಉಲ್ಲೇಖ ಮಾಡಿದರು. ಶೀರ್ಷಿಕೆ, ಪ್ರಿಯಾಂಬಲ್ ನೋಡುವುದಾದರೆ, ಕ್ಲಾಸ್ ಥ್ರಿ ನೋಡುವುದಾದರೆ ಹೆಸರು ಮಾತ್ರ ಪ್ರಿಯಾಂಬಲ್‌ನಲ್ಲಿ ಏನು ವಿಚಾರ ವ್ಯಕ್ತ ಮಾಡಿದ್ದಾರೆ ಅದನ್ನು ಮೂರನೇ ಕ್ಲಾಸ್‌ನಲ್ಲಿ ಮಾತ್ರ ಅಳವಡಿಸಿದ್ದಾರೆ. Not withstanding anything contained in any law for th time being inforce, no capitation fee shall collected by or on behalf of any educational institution or by any person who is incharge of or is responsible for the management of such institution. ಎಂದು ಹೇಳಿದ್ದಾರೆ. ಮುಂದೆ ಪ್ರೊವೈಡೆಡ್ ಅಂಥ ಹೇಳಿ ಈ ಉದ್ದೇಶ ಏನು ಇದೆ ಟೈಟಲ್‌ನಲ್ಲಿರತಕ್ಕದ್ದು, ಪ್ರಿಯಾಂಬಲ್‌ನಲ್ಲಿರತಕ್ಕದ್ದು ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಹೇಳಿರತಕ್ಕದ್ದು ಉದ್ದೇಶ ಏನಿದೆ ಇದನ್ನು ಪ್ರಾವಿಸೋದಲ್ಲಿ ತೆಗೆದು ಹಾಕಿರುವುದು ಕಾಣುತ್ತದೆ. ಆದ್ದರಿಂದ, ಇದನ್ನು ತೆಗೆದು ಬಿಟ್ಟರೆ, ಈ ಮಸೂದೆಯ ಹೆಸರು ಬದಲಾವಣೆ ಆಗತಕ್ಕ ಪರಿಸ್ಥಿತಿ ಬರುತ್ತದೆ. ಈ ಮಸೂದೆಯು ಹೆಸರಿಗೂ ಈ ಪ್ರಾವಿಸೋನಲ್ಲಿರತಕ್ಕ ವಿಚಾರಕ್ಕೂ ಸಂಬಂಧ ಬರುವುದಿಲ್ಲ. ಬಹಳ ಮಟ್ಟಿಗೆ ಆಗ ಏನು ಹೇಳಬೇಕಾಗುತ್ತದೆ. "ಕರ್ನಾಟಕ ಎಜುಕೇಷನ್ ಇನ್‌ಸ್ಟಿಟ್ಯೂಷನ್ ಕ್ಯಾಪಿಟೇಷನ್ ರೆಗ್ಯುಲೇಷನ್ ಬಿಲ್" ಎಂದು ಬೇರೆ ಹೆಸರು ಕೊಡಬೇಕಾಗುತ್ತದೆ. ಈಗ ತೆಗೆದಿದ್ದೇವೆ ಎಂದು ಹೇಳಿ. ಬಿಲ್ಲಿನ ಒಳಗೆ 5 ವರ್ಷ ಎಂದು ಹೇಳಿದ್ದೀರಿ. ಮುಂದೆ 5ವರ್ಷ ಮುಂದುವರಿಸಿಕೊಂಡು ಹೋಗಲಿಕ್ಕೂ ಅಡ್ಡಿ ಬರುವುದಿಲ್ಲ. ಉದ್ದೇಶ ಏನು ಅಂದರೆ, ಸರ್ಕಾರದ ಉದ್ದೇಶಕ್ಕೂ ಮತ್ತು ಈ ಮನೆಯಲ್ಲಿ ನಿನ್ನೆಯ ದಿವಸ ಮತ್ತು ಈ ದಿವಸ ವ್ಯಕ್ತವಾಗಿರತಕ್ಕ ಎಲ್ಲ ಸದಸ್ಯರ ಉದ್ದೇಶದ ಬಗ್ಗೆ, ಪಕ್ಷಾತೀತವಾಗಿ ಒಂದೇ ಉದ್ದೇಶ ವ್ಯಕ್ತವಾಗಿದೆ ಈ ಸಭೆಯಲ್ಲಿ, ಆ

ಉದ್ದೇಶವನ್ನು ಸಫಲಗೊಳಿಸುವುದಕ್ಕೆ ಈ ಮಸೂದೆಯಲ್ಲಿ ಈ ಪ್ರಾವಿಸೋ ಅಡ್ಡ ಬರುವುದರಿಂದ, ಈ ಪ್ರಾವಿಸೋ ಬಿಟ್ಟು ಬಿಡತಕ್ಕದ್ದು ಸೂಕ್ತ. ಇಲ್ಲದೇ ಇದ್ದರೆ ತಮ್ಮ ಉದ್ದೇಶ ಏನು ಇದೆ, ಅದು ಸಾರ್ಥಕ ಆಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತಾ 5 ವರ್ಷದವರೆಗೆ ಕಾಯುವುದಕ್ಕೆ ಮುಂಚೆ ಈ ವರ್ಷದಿಂದ ಈ ಉದ್ದೇಶ ಜಾರಿಗೆ ಬರಲಿ ಎನ್ನುವ ಉದ್ದೇಶದಿಂದ ನಾನು ಈ ತಿದ್ದುಪಡಿಯನ್ನು ಮಂಡಿಸಿದ್ದೇನೆ. ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ರಾಚಯ್ಯ.— ಈ ಪ್ರಾವಿಸೋ ಬಿಟ್ಟರೆ, ಈ ಮಸೂದೆ ಉದ್ದೇಶವೇ ಹೋಗುತ್ತದೆ. ನಾನು ಮೊದಲೇ ಇದರ ಬಗ್ಗೆ ವಿವರಿಸಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್.— ತಾವು ಈ ಪ್ರಾವಿಸೋ ತೆಗೆದರೆ ಉದ್ದೇಶ ಪೂರ್ತಿಯಾಗುತ್ತದೆ.

ಶ್ರೀ ಬಿ ರಾಚಯ್ಯ.— ಹಂತಹಂತವಾಗಿ ತೆಗೆಯುತ್ತೇವೆಂದು ಹೇಳಿದ್ದೇವೆ. ಈಗ ಇರತಕ್ಕ ಕಾಲೇಜುಗಳು ಏನಿವೆ, 11-7-83 ರಿಂದ ಹಿಂದೆ ಯಾವ ಕಾಲೇಜುಗಳು ಸ್ಥಾಪನೆಯಾಗಿದ್ದವು, ಅವು ಇನ್ನು ನಾಲ್ಕೈದು ವರ್ಷ ಇಷ್ಟಿಷ್ಟು ಅಂಥ ದುಡ್ಡು ಕಲೆಕ್ಟ್ ಮಾಡಲಿಕ್ಕೆ ಅವಕಾಶವಾಗಿದೆ. ಇನ್ನು ಈಗ 11-7-83 ರಿಂದ ಬರತಕ್ಕ ಯಾವ ಕಾಲೇಜುಗಳಿಗೂ ಕ್ಯಾಪಿಟೇಷನ್ ಫೀ ಕಲೆಕ್ಟ್ ಮಾಡತಕ್ಕ ಅವಕಾಶ ಇಲ್ಲ. ಬಿ.ಎಡ್., ಮತ್ತು ಇನ್ನಿತರ ಕಾಲೇಜುಗಳು ಏನಿವೆ ಅಲ್ಲಿ ಕಲೆಕ್ಟ್ ಮಾಡಲಿಕ್ಕೆ ಆಗುವುದಿಲ್ಲ. ಅಂದ ಮೇಲೆ ಹೊಸದಾಗಿ ಪ್ರಾರಂಭವಾದ ಕಾಲೇಜುಗಳಲ್ಲಿ ಹಣ ಕಲೆಕ್ಟ್ ಮಾಡಲಿಕ್ಕೆ ಅವಕಾಶ ಇಲ್ಲ. ಈಗ ಇರತಕ್ಕ ಕಾಲೇಜುಗಳಿಗೆ ವಸೂಲು ಮಾಡತಕ್ಕ ಅವಕಾಶ ಇದೆ. ಮಾನ್ಯ ಮೊಯಿಲಿಯವರು ಸಾಮಾಜಿಕ ನ್ಯಾಯ ಎಂದು ಹೇಳಿದ್ದಾರೆ. ಅವರು ಹೇಳತಕ್ಕದ್ದು ಇದರಲ್ಲಿಯೂ ಸೇರಿದೆ. ಆದ ರಿಂದ, ಇನ್ನೂ ನಾಲ್ಕು ವರ್ಷ ವಸೂಲು ಮಾಡಲಿಕ್ಕೆ ಅವಕಾಶ ಇದೆ ಎಂದು ಹೇಳಿದ್ದೇನೆ. ಹಣಕಾಸಿನ ಪರಿಸ್ಥಿತಿ ಉತ್ತಮ ಆದರೆ ಅಂಥ ಸಂದರ್ಭದಲ್ಲಿ ಸರ್ಕಾರ ಇದರ ಬಗ್ಗೆ ವಿಚಾರ ಮಾಡ ಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ. — ಅಧ್ಯಕ್ಷರೇ, ಮಾನ್ಯ ರಂಗನಾಥ್ ಅವರು ಬಹಳ ಪ್ರಾಮುಖ್ಯ ವಾದ ಪ್ರಾವಿಸೋ ಹೇಳಿದ್ದಾರೆ.

Mr. Speaker.— It is the essence of the Bill.

Sri M. Veerappa Moily.— It is the essence. It is stated, this undesirable practice beside contributing to large scale commercialisation of education has not been conducive to the maintenance of educational standards and it is considered necessary to effectively curb this evil practice in public interest by providing for prohibition of collection of captation fee. That means it is not necessary to effectivelly curb for five years. ಈ ಎರಡು ಉದ್ದೇಶದಿಂದ ತಿದ್ದುಪಡಿ ಮಾಡಿದರೆ ಪ್ರಾವಿಸೋ ಇರುವುದು ಸಾರ್ಥಕವಾಗುತ್ತದೆ. ಇಲ್ಲದಿದ್ದರೆ ಅದಕ್ಕೆ ಇದಕ್ಕೆ ಏನೂ ಸಂಬಂಧವಿರುವುದಿಲ್ಲ. ಮೊದಲು ನಮ್ಮ ಮೇಲೆ ತಾವು ಕ್ಯಾಪಿಟೇಶನ್ ಫೀಗೆ ಪ್ರೋತ್ಸಾಹ ಕೊಡುತ್ತಿದ್ದೀರಿ ಎಂದು ಹೇಳುತ್ತಿದ್ದೀರಿ. ಈಗ ನಾವು ತೆಗೆದುಬಿಡಿ ಎಂದು ಹೇಳುತ್ತಿದ್ದೇವೆ. ತಾವು ಆ ಬಗ್ಗೆ ಚುನಾವಣೆಯಲ್ಲಿ ಹೇಳಿಬಂದಿದ್ದೀರಿ. ತಾವು ಏನು ಪ್ರಣಾಳಿಕೆಯಲ್ಲಿ ಹೇಳಿದ್ದೀರಿ ಅದಕ್ಕೆ ನಾವು ಅಮೆಂಡ್‌ಮೆಂಟ್ ತರುತ್ತಿದ್ದೇವೆ. ನೀವು 5 ವರ್ಷಗಳ ಮೇಲೆ ನೋಡುತ್ತೇವೆಂದು ಹೇಳುತ್ತಿದ್ದೀರಿ ಆದುದರಿಂದ ಇದು ಕ್ಲಿಯರ್ ಆಗಿಲ್ಲವೆಂದು ನಾನು ಹೇಳುತ್ತಿದ್ದೇನೆ. ಇದರಿಂದ ಇದನ್ನು ಇನ್ನೊಂದು ಎಲೆಕ್ಷನ್ ಆದಮೇಲೆ ತೆಗೆಯುತ್ತೇವೆಂದು ಅರ್ಥವಾಗುತ್ತದೆ. ತಾವು ಇನ್ನೊಂದು ಎಲೆಕ್ಷನ್‌ಗೆ ಮಾನಿಫೆಸ್ಟೋ ಮಾಡಬೇಕೆಂದು ಉದ್ದೇಶ ಇಟ್ಟುಕೊಂಡಿದ್ದೀರಾ?

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.— It is a slow death..........

ಅಧ್ಯಕ್ಷರು.— There can be slow poisoning but not slow death.

ಶ್ರೀ ಎಂ. ವೀರಪ್ಪ ಮೊಯಿಲಿ.— ಇದು ಒಂದು ರೀತಿಯ ಸ್ಲೋ ಪಾಯ್ಸನಿಂಗ್ ಆಗಿದೆ ಇದನ್ನು ನೀವು ಹೀಗೇ ಬಿಟ್ಟು ಇದಕ್ಕೆ ತಾವು ಪಾಯ್ಸನ್ ಕೊಡದೇ ಹೋದರೆ ಇದು ನಿಮಗೇ ಪಾಯ್ಸನ್ ಆಗುತ್ತದೆ. ಇದು ನಿಮಗೆ ಇನ್‌ಸ್ಟೆಂಟೇನಿಯಸ್ ಪಾಯ್ಸನ್ ಆಗುತ್ತದೆಂದು ಹೇಳುತ್ತೇನೆ.

ಶ್ರೀ ವಿ. ಎಸ್. ಆಚಾರ್ಯ—ನೀತಿ ಮತ್ತು ವ್ಯವಹಾರದಲ್ಲಿ ಸಂಘರ್ಷ ಇದ್ದಹಾಗೆ ಕಾಣುತ್ತದೆ. ನೀತಿ ಎಂದು ಹೇಳಿಕೊಂಡು ವ್ಯವಹಾರವನ್ನು ಅಳವಡಿಸಿಕೊಂಡಿದ್ದಾರೆ. ಟೈಟಲ್ ಮತ್ತು ಪ್ರಿಯಾಂಬಲ್ ಎರಡೂ ಉಳಿಯಬೇಕೆಂದು ಹೇಳುತ್ತಿದ್ದಾರೆ. ಇವತ್ತು ಪ್ರಿಯಾಂಬಲ್ ತೆಗೆದರೆ ಇವರ ವ್ಯವ ಹಾರವೇ ಹೋಗುತ್ತದೆ. ಟೈಟಲ್ ಸಾರ್ಥಕವಾಗಬೇಕೆಂದರೆ ಅದು 5 ವರ್ಷಗಳ ನಂತರ ಖಂಡಿತಾ ಸಾರ್ಥಕವಾಗುತ್ತದೆಂದು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.— ಕೇಂದ್ರ ಸರ್ಕಾರದವರಿಂದ ಹಣವನ್ನು ಕೊಡಿಸಿದ್ದರೆ ನಾವು ಇದನ್ನು ಮಾಡಬಹುದಾಗಿತ್ತು.

ಶ್ರೀ ಕೆ. ಹೆಚ್. ರಂಗನಾಥ್.— ನಾವು ಈಗ ಫೆಡರಲ್ ಸೆಟ್ ಅಪ್‌ನಲ್ಲಿ ಇದ್ದೇವೆ. ರಾಜ್ಯದ ಪೂರ್ತಿ ಕಾಲೇಜುಗಳನ್ನು ಮಾಡುವುದಕ್ಕೆ ಅವಕಾಶ ಕೊಟ್ಟು ಆ ನಂತರ ಒಂದು ದಿವಸ ಇವನ್ನು ತೆಗೆಯಬೇಕೆಂದು ಹೇಳಿದರೆ, ಈ ಬಗ್ಗೆ ಕೇಂದ್ರದವರು ಹಣವನ್ನು ಒದಗಿಸಬೇಕು ಎಂದರೆ ಎಷ್ಟು ಹಣ ಬೇಕಾಗುತ್ತದೆ ? ನಾವು ದೇಶವನ್ನು ಸಮಗ್ರವಾಗಿ ನೋಡಬೇಕಾಗುತ್ತದೆ. ಸುಮ್ಮನೆ ಅಲ್ಲಿ ನಮ್ಮ ಪಕ್ಷ ಇದೆ ಎಂದು ಮಾತನಾಡುವುದು ಅಲ್ಲ. ನೀವು ಎಲ್ಲಕ್ಕೂ ಕೇಂದ್ರ ಸರ್ಕಾರವನ್ನು ತೋರಿಸುವುದಾದರೆ ಎಜ್ಯುಕೇಷನನ್ನು ಸೆಂಟ್ರಲ್ ಲಿಸ್ಟ್‌ಗೆ ಕೊಡಿ ಸ್ವಾಮಿ. 1971 ರಲ್ಲೇ ನಾವು ಆ ಬಗ್ಗೆ ರೆಸಲ್ಯೂಷನ್‌ನ್ನು ಮಾಡಿದ್ದೇವು.

ಶ್ರೀ ಎಸ್. ಆರ್. ಬೊಮ್ಮಾಯಿ — ಈ ಬಗ್ಗೆ ಕೇಂದ್ರ ಸರ್ಕಾರದವರನ್ನು ಹಣ ಕೊಡಿ ಎಂದು ಕೇಳುವುದು ಕಷ್ಟವಾಗುತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರದವರೇ ಒಂದು ಕಾನೂನು ಮಾಡುತ್ತೇವೆಂದು ಹೇಳಿದ್ದರು. ಅವರೇ ಇದನ್ನು ಮಾಡಿದ್ದರೆ ಈ ಸಮಸ್ಯೆ ಬರುತ್ತಾ ಇರಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ಈ ಕಾನೂನನ್ನು ನಾವೇ ಮಾಡುತ್ತೇವೆ ಎಂದು ತಾವೇ ಮುಂದೆ ಬಂದಮೇಲೆ ಕೇಂದ್ರದವರ ಮೇಲೆ ಏಕೆ ಹೇಳುತ್ತೀರಿ ? ಇದಕ್ಕೆ ಕೇಂದ್ರದವರಿಂದ ಹಣವನ್ನು ಕೇಳಬೇಕಾಗುತ್ತದೆ ಎಂದು ತಾವು ಚುನಾವಣಾ ಭರವಸೆ ಕೊಡುವಾಗ ಗೊತ್ತಾಗಲಿಲ್ಲವೇ ? ಚುನಾವಣಾ ಪ್ರಣಾಳಿಕೆಯಲ್ಲಿ ಸುಳ್ಳು ಭರವಸೆ ಕೊಟ್ಟು ಜಾರಿಕೊಳ್ಳುವುದಕ್ಕೆ ಏಕೆ ಹೋಗುತ್ತೀರಿ ?

Mr Speaker.— Let us confine ourselves to the amendments.

ಶ್ರೀ ಎಸ್. ಆರ್. ಬೊಮ್ಮಾಯಿ.— ಕೇಂದ್ರ ಆರೋಗ್ಯ ಮಂತ್ರಿಗಳು ಈ ಬಗ್ಗೆ ಕಾನೂನು ತರುವ ಭರವಸೆಯನ್ನು 4 ವರ್ಷಗಳಿಂದ ಕೊಡುತ್ತಿದ್ದಾರೆ. ಅವರೇ ಮಾಡಬಹುದಿತ್ತೆಂದು ನಾನು ಹೇಳಿದೆ; ಅಷ್ಟೆ.

Clause-3

Mr. Speaker.— I will now put amendment no. 4 to the vote of the House moved by hon. Member Sri K. H. Ranganath and Sri M. Veerappa Moily. The question is :

'That 'the proviso to the Clause shall be deleted'.

The amendment was negatived.

Mr. Speaker.— I will now put clause 3 to the vote of the House. The question is :

'That clause 3 do stand part of the bill'

The motion was adopted.

Clause 3 was added to the bill

Clause-4

Mr. Speaker.— Now I will take up amandment nos. 5, 6, 7, 8 and 9 moved by hon Member Sri K. H. Ranganath.

Sri K. H. Ranganath.— Sir, I beg to move :

'That Proviso to sub-clause (1) a)(i) shall be deleted'

'That sub-clause (1)(b) shall be deleted'

The question was proposed.

Sri K. H. Ranganath — Sir, I beg to move :

'That sub-clause (2) of Clause 4 shall be deleted'

'That sub-clause (3) of Clause 4 shall be deleted'

The question was proposed.

Sri K. H. Ranganath.— Sir, the Leader of Oppositon Sri M. Veerappa Moily has already spoke about this clause. In clause 4(i) they have said 'Government may, in the interest of excellence of education, fix any higher minimum qualification for any course of study' ಸ್ವಾಮಿ, ನಾವು ಇವತ್ತು ವಿಶ್ವವಿದ್ಯಾನಿಲಯಗಳನ್ನು ಸ್ವಾಯತ್ತ ಸಂಸ್ಥೆಗಳನ್ನಾಗಿ ಮಾಡಿರುವುದು ಅಷ್ಟೇ ಅಲ್ಲ, ಅವುಗಳಿಗೆ ಪೂರ್ಣ ಅಧಿಕಾರವನ್ನು ಕೊಟ್ಟಿರುವಾಗ ಆ ಕಾನೂನನ್ನು ಮತ್ತೆ

ಸರ್ಕಾರ ತೆಗೆದುಕೊಳ್ಳುವ ಒಂದು ವ್ಯವಸ್ಥೆಯನ್ನು ಇದರಲ್ಲಿ ಮಾಡಲಾಗಿದೆ. ಇದೂ ಕೂಡಾ 'fix any higher minimum qualification' ಎಂದು ಹೇಳಿರತಕ್ಕ ಮಾತು ಸಮಂಜಸವಾಗುವುದಿಲ್ಲ ವೆಂದು ನನಗನ್ನಿಸುತ್ತದೆ. ಇವತ್ತು ವಿಶ್ವವಿದ್ಯಾನಿಲಯದಲ್ಲಿ ಅಕೆಡೆಮಿಕ್ ಕೌನ್ಸಿಲ್, ಸಿಂಡಿಕೇಟ್, ಸೆನೆಟ್ ಇವೆ. ಮತ್ತು ಅಲ್ಲಿ ತಜ್ಞರು ಸಹಾ ಇರುತ್ತಾರೆ. ಇವತ್ತು ಎಲ್ಲವನ್ನೂ ವಿಚಾರ ಮಾಡಿ ತೀರ್ಮಾನ ತೆಗೆದುಕೊಳ್ಳುವ ಒಂದು ವ್ಯವಸ್ಥೆ ಈಗ ಇರುವಾಗ, ಇವತ್ತು ಸರ್ಕಾರವೇ ಈ ಒಂದು ತೀರ್ಮಾನ ತೆಗೆದುಕೊಳ್ಳುವುದು ಸರಿಯಲ್ಲ. ಇವತ್ತು ಯಾವುದೇ ಸರ್ಕಾರ ಇರಬಹುದು, ಯಾರೇ ಮಂತ್ರಿಗಳು ಇರಬಹುದು, ನಮ್ಮ ತೀರ್ಮಾನಗಳು ಕಾರಣಾಂತರದಿಂದ ರಾಜಕೀಯ ಒತ್ತಡಕ್ಕೆ ಒಳಗಾಗುತ್ತವೆಂಬು ದನ್ನು ನಾವುಗಳು ಒಪ್ಪಲೇಬೇಕಾಗುತ್ತದೆ. ಇಂತಹ ಒತ್ತಡಗಳಿಂದ ಒಂದು ತೀರ್ಮಾನ ತೆಗೆದುಕೊಳ್ಳು ವುದಕ್ಕೆ ಇದು ಸಹಾಯವಾಗುತ್ತದೆಯೇ ವಿನಃ ಜ್ಯುಡಿಷಿಯಲ್ ಡಿಕ್ಷನ್ ಪ್ರಕಾರ ತೀರ್ಮಾನ ತೆಗೆದುಕೊಳ್ಳಲು ಇದು ಸಹಾಯಕವಾಗುವುದಿಲ್ಲ. ಆ ಒಂದು ದೃಷ್ಟಿಯಿಂದ ಈ 'Proviso' ಅನ್ನು ಕೈಬಿಡಬೇಕೆಂದು ಹೇಳಿ ತಿದ್ದುಪಡಿಯನ್ನು ಕೊಟ್ಟಿದ್ದೇನೆ. ಕ್ಲಾಸ್ 4 (1) (ಎ) ನಲ್ಲಿ ಈ ಒಂದು ತಿದ್ದು ಪಡಿಯನ್ನು ಸೂಚಿಸಿದ್ದೇನೆ. ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಬೇಕು ಎನ್ನುವ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಹಾಗೂ ಸದನದ ಸದಸ್ಯರು ಈ ತಿದ್ದುಪಡಿಯನ್ನು ಒಪ್ಪಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.— ಅಧ್ಯಕ್ಷರೇ, ಅಕೆಡಮಿಕ್ ಕೌನ್ಸಿಲ್‌ರವರು ಮಿನಿಮಮ್ ಕ್ವಾಲಿಫಿಕೇಷನ್ ಎಷ್ಟು ಇರಬೇಕು ಮತ್ತೆ ಯಾವ ಯಾವ ಕೋರ್ಸ್‌ಗೆ ಎಷ್ಟು ಸೀಟುಗಳನ್ನು ಹಂಚಬೇಕೆಂದು ತೀರ್ಮಾನ ಮಾಡುತ್ತಾರೆ. ಆ ಕೋರ್ಸ್‌ಗಳಿಗೆ ಕ್ವಾಲಿಫಿಕೇಷನ್ ಅವರು ಶಿಫಾರಸ್ಸು ಮಾಡಿದ ಮೇಲೇ ನಾವು ತೀರ್ಮಾನವನ್ನು ಮಾಡುತ್ತೇವೆ, ಸರ್ಕಾರ ಈ ಕಾಲೇಜುಗಳಿಗೆ ಹಣವನ್ನು ಕೊಡುತ್ತಿದ್ದು, ಅವರಿಂದ ಸರ್ಕಾರಕ್ಕೆ ಶಿಫಾರಸ್ಸು ಬಂದಮೇಲೆ ಸರ್ಕಾರ ತೀರ್ಮಾನವನ್ನು ತೆಗೆದುಕೊಳ್ಳುತ್ತದೆ. ಅಂತಿಮವಾಗಿ ಸರ್ಕಾರದ ತೀರ್ಮಾನ ಆಗಬೇಕೆಂದು ಹೇಳಿ ಇದನ್ನು ನಾವು ತೆಗೆದುಕೊಂಡಿದ್ದೇವೆ.

Mr Speaker —I will now put amendment no. 5 to the vote of the House The question is

'That proviso to sub-clause (1)(a)(i) shall be deleted"

The amendment was negatived.

Sri K H Ranganath — Sir, I beg to move:

'That sub-clause (1)(b) shall be deleted'

The question was proposed.

Sri K. H Ranganath. — Sir, in Clause 4 - sub-clause (i)(b) it is said :

'the maximum number of students that could be admitted to a course of study in an educational institution shall be such as may be fixed by the Government from time to time'.

ಸ್ವಾಮಿ, ಇಲ್ಲಿ ಸ್ವಲ್ಪ ಹೊರನೋಟಕ್ಕೆ ಒಂದು ರೀತಿ ತೋರಿದರೆ ಇರತಕ್ಕಂಥ ಪರಿಸ್ಥಿತಿ ಇದೆ. ಪೋಸ್ಟ್ ಗ್ರಾಜುಯೇಟ್ಸ್ ಸ್ಟೂಡೆಂಟ್ಸ್‌ಗೆ ಈ ತೊಂದರೆ ಬರಬಹುದು ಎಂದು ಕಾಣುತ್ತದೆ. ಈಗ ಪೋಸ್ಟ್ ಗ್ರಾಜುಯೇಟ್ಸ್‌ಗೆ ಎಲ್ಲಿ ಎಷ್ಟು ಸೀಟ್ಸ್ ಕೊಡಬೇಕು ಎನ್ನುವ ಪರಿಸ್ಥಿತಿ ಬರಬಹುದು. ಆಗ ಸರ್ಕಾರ ತನಗೆ ಇಷ್ಟಬಂದಹಾಗೆ ಸೀಟ್ಸ್‌ಗಳನ್ನು ಹೆಚ್ಚು ಮಾಡತಕ್ಕಂಥ ಅವಕಾಶ ಇದರಲ್ಲಿ ಆಗುತ್ತದೆ.

"The maximum number of students that could be admitted to a course of study"

ಯಾವ ಸೀಟ್ಸ್, ಯಾವ ಕೋರ್ಸ್ ಎನ್ನುವುದು ಇಲ್ಲಿ ಸ್ಪಷ್ಟಪಡಿಸಿಲ್ಲ. ಎಷ್ಟು ಎನ್ನು ವುದನ್ನು ಕೂಡ ಸ್ಪಷ್ಟಪಡಿಸಿಲ್ಲ. ಇದು ಗೌವರ್ನಮೆಂಟ್ ಮೆಡಿಕಲ್ ಮತ್ತು ಇಂಜಿನೀಯರಿಂಗ್ ಕಾಲೇಜು ಗಳಿಗೂ, ಪ್ರೈವೇಟ್ ಕಾಲೇಜುಗಳಿಗೂ ಸಂಬಂಧಪಟ್ಟಿರುವುದರಿಂದ, ಎಂ.ಎಸ್; ಎಂ.ಡಿ; ಹೀಗೆ ಬೇರೆ ಬೇರೆ ಕೋರ್ಸ್ ಏನು ಇದೆ ಅವಕ್ಕೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ನಿಗದಿ ಮಾಡಿದ್ದಾರೆ. ಪ್ರೊಫೆಸರ್ಸ್ ಇಷ್ಟಿರಬೇಕು. ಸ್ಟೂಡೆಂಟ್ಸ್ ಇಷ್ಟು ಇರಬೇಕು. ಇಷ್ಟು ಫೆಸಿಲಿಟೀಸ್ ಇದ್ದರೆ ಇಷ್ಟಿಷ್ಟು ಇರಬೇಕೆಂದು ನಿಗದಿಮಾಡಿದ್ದಾರೆ. ಈ ನಿಯಮದಲ್ಲಿ ಯಾವ ಕೋರ್ಸ್ ಎನ್ನುವುದು ಸ್ಪಷ್ಟವಾಗಿ ಇಲ್ಲದೆ ಇರುವುದರಿಂದ, ಸರ್ಕಾರದವರು ಅದನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಅನುಕೂಲವಾಗ ತಕ್ಕಂಥದ್ದಕ್ಕೆ ಅವಕಾಶ ಇರುವುದರಿಂದ, ನಾವು ಇದನ್ನು ಕೈಬಿಡಬೇಕೆಂದು ಹೇಳಿ ಈ ಒಂದು ತಿದ್ದುಪಡಿ ಯನ್ನು ಏನು ತಂದಿದ್ದೇನೆ, ಈ ತಿದ್ದುಪಡಿ ಹಿಂದೆ ಇರತಕ್ಕಂಥ ಉದ್ದೇಶವನ್ನು ಒಪ್ಪುತ್ತೀರೆಂದು ಭಾವಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಂಗನಾಥ್‌ರವರು ಹೇಳಿದ ಹಾಗೆ ವಾದ ಮಾಡುವ ವಿಷಯದ ಬಗ್ಗೆ ಗಮನಹರಿಸಬೇಕು. ಯಾವುದೇ ಕ್ಲಾಸ್ 4.1 (ಬಿ) ಬಗ್ಗೆ ಜನರಲ್ ಪ್ರಿನ್ಸಿಪಲ್ ಇಲ್ಲದೆ ಇರುವುದರಿಂದ ಯೂನಿವರ್ಸಿಟಿಗೂ ಮತ್ತು ಸರಕಾರಕ್ಕೂ ಸಂಘರ್ಷಣೆ ನಡೆಯುತ್ತಲೇ ಇರುತ್ತದೆ. ಆದ್ದರಿಂದ Better you agree for this amendment. ಇದನ್ನು ದಯವಿಟ್ಟು ಆಲೋಚನೆ ಮಾಡಿ.

"the maximum number of students that could be admitted to a course of study in any educational instiution shall be such as may be fixed by the Government from time to time."

It will be an arbitrary power that the Government is taking over. ಆದ್ದರಿಂದ

"May be fixed by the Government from time to time subject to the consultation with the Indian Medical Council and the University". ಎಂದು ಮಾಡಲು ಸಲಹೆ ಮಾಡುತ್ತೇನೆ

Mr. Speaker.— That is not the amendment before us. Please confine to the amendment.

Sri M. Veerappa Moily.— Sir, if the Government is ready to make compromise this can be adopted. I am telling this in connection with that amendment only. It gives blanket powers to the Government. ಈ ಬ್ಲಾಂಕೆಟ್ ಪವರನ್ನು ತೆಗೆದುಕೊಂಡ ಸರ್ಕಾರ ಯೂನಿವರ್ಸಿಟಿ, ಐ.ಎಂ.ಸಿ. ಮೇಲೆ ಸವಾರಿ ಮಾಡಿದಂತಾಗುತ್ತದೆ. ದಯವಿಟ್ಟು ಇಲ್ಲಿ ಆಲೋಚನೆ ಮಾಡಿದರೆ ಒಳ್ಳೆಯದು. ಡಿಸ್ಟ್ರಿಬ್ಯೂಷನ್ ಸೀಟ್ಸ್ ಎಂದು ಏನು ಹೇಳಿದ್ದೀರಿ ಸಬ್ ಕ್ಲಾಸ್ 2(1)ರಲ್ಲಿ ....

Mr Speaker.— Please confine your speach to the amendment.

Sri M. Veerappa Moily.— Therefore, I suggest that

"in consultation with the University or norms fixed by the University and the Indian Medical Council as the case may be". ಇದನ್ನು ತಾವು ಒಪ್ಪದೆ ಇದ್ದರೆ ಯೂನಿವರ್ಸಿಟಿಯ ಸ್ವಾಯತ್ತತೆಯ ಮೇಲೆ ಮತ್ತು ಎಜುಕೇಷನ್ ಸ್ಟ್ಯಾಂಡರ್ಡ್ಸ್ ಯಾವುದನ್ನು ಉಳಿಸಬೇಕೆಂದು ಹೇಳುತ್ತೀರಿ ಅದರ ಉದ್ದೇಶ ತಪ್ಪಾಗುತ್ತದೆಂದು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).— ಮಾನ್ಯ ಅಧ್ಯಕ್ಷರೇ, ಈ ಒಂದು ವರ್ಷದಲ್ಲಿ ವಿಶ್ವವಿದ್ಯಾನಿಲಯದವರು ಯಾವ ಒಂದು ಶಿಫಾರಸು ಮಾಡಿದ್ದಾರೆ ಆದರ ಮೇಲೆ ಒಂದು ಸೀಟನ್ನು ಕೊಟ್ಟಿಲ್ಲ. ವಿಶ್ವವಿದ್ಯಾನಿಲಯಗಳು ಅಫಿಲಿಯೇಷನ್ ಕೊಡಬೇಕಾದರೆ ಕೆಲವೊಂದು ನಾರಮ್ಸ್ ಇರುತ್ತದೆ. ಐ. ಎಂ. ಸಿ. ಯವರು ಹೇಳಿದ್ದನ್ನೆಲ್ಲ ಒಪ್ಪಿಕೊಳ್ಳಬೇಕು. ಕೆಲವೊಂದು ವಿಶ್ವವಿದ್ಯಾನಿಲಯಗಳು ಇಂಜಿನಿಯರಿಂಗ್ ಕಾಲೇಜುಗಳನ್ನು ಮಂಜೂರು ಮಾಡಬೇಕಾದರೆ ಬಿಲ್ಡಿಂಗ್ ಇದೆಯೇ, ಲ್ಯಾಬೋರೇಟರಿ ಇದೆಯೇ ಎಕ್ವಿಪ್‌ಮೆಂಟ್ಸ್ ಇದೆಯೇ, ಟೀಚಿಂಗ್ ಸ್ಟಾಫ್ ಸರಿಯಾಗಿ ಇದೆಯೇ ಇದನ್ನೆಲ್ಲ ಸರಿಯಾಗಿ ನೋಡದೆ ಶಿಫಾರಸು ಮಾಡಿರುತ್ತಾರೆ. ಅವರು ಇದನ್ನೆಲ್ಲ ನೋಡುತ್ತಾರೆಂದು ಸರ್ಕಾರ ತಿಳಿದುಕೊಳ್ಳಬಾರದು. ಅದನ್ನೆಲ್ಲ ನೋಡಿಕೊಂಡು ಮಾಡಿರುತ್ತಾರೆಂದು ಅವರು ಶಿಫಾರಸು ಮಾಡಿದ್ದಕ್ಕೆಲ್ಲ ಮಂಜೂರಾತಿಯನ್ನು ಕೊಡುವುದಕ್ಕಾಗುವುದಿಲ್ಲ. ಮುಖ್ಯವಾಗಿ ಅವರು ಶಿಫಾರಸು ಮಾಡಿದಂಥ ಕಾಲದಲ್ಲಿ ಅದನ್ನೆಲ್ಲ ನೋಡಿಯೇ ಶಿಫಾರಸು ಮಾಡಬೇಕು, ಅವರು ಇದೆಲ್ಲ ಒಡಿತವನ್ನು ಇಟ್ಟುಕೊಂಡು ಮಾಡುತ್ತಾರೆಂದು ತಿಳಿದುಕೊಂಡಲ್ಲಿ, ಪದೇ ಪದೇ ಅಲಕ್ಷ್ಯ ಹೆಚ್ಚು ಮಾಡಿಕೊಂಡು ಹೋಗುತ್ತಾರೆ.

Mr Speaker.— Now I will put the amendment no. 6 to the vote of the House. The question is :

"That Sub-Clause (i) (b) shall be deleted"

The amendment was negatived.

Sri K. H. Ranganath — Sir, I beg to move :

"That Sub-Clause (2) shall be deleted"

The question was proposed

ಶ್ರೀ ಕೆ. ಹೆಚ್. ರಂಗನಾಥ್.— ಸ್ವಾಮಿ ಇದರಲ್ಲಿ ಹೆಚ್ಚು ಹೇಳಬೇಕಾದ್ದು ಏನೂ ಇಲ್ಲ. ನಾನು ತಂದಿರುವ ಅಮೆಂಡ್‌ಮೆಂಟ್ ಕ್ಲಾಸ್ 3, ಮೂಲ ಉದ್ದೇಶಕ್ಕೆ ಸಂಬಂಧಪಟ್ಟಿರುವುದರಿಂದ ಇದರ

ಮೇಲೆ ಹೆಚ್ಚಿಗೆ ಹೇಳಬೇಕಾದ್ದು ಏನೂ ಇಲ್ಲ. ನಾನು ತಿದ್ದುಪಡಿಯನ್ನು ಏತಕ್ಕೆ ಕೊಟ್ಟಿದ್ದೇನೆ ಎಂದರೆ ನನ್ನ ಉದ್ದೇಶ ಪ್ರಾವಿಸೋ ಹೋದಮೇಲೆ ಇದು ಕಾನ್‌ಸಿಕ್ವೆನ್ಸಿಯಲ್ ಆದ್ದರಿಂದ ಎಲ್ಲಿ ಸರ್ಕಾರಕ್ಕೆ ಹಿತ ವಾಗಿರುತ್ತದೆ ಅಲ್ಲಿ ಸರ್ಕಾರ ನಿಗಾ ಮಾಡತಕ್ಕಂಥದ್ದು ವಗೈರೆ ಬರುವುದಿಲ್ಲ. ಯೂನಿವರ್ಸಿಟಿಯ ಎಲ್ಲಾ ವಿಚಾರಗಳನ್ನು ನೀವೇ ತೆಗೆದುಕೊಂಡಿರುವುದರಿಂದ ಅವೆಲ್ಲವನ್ನೂ ವಜಾ ಮಾಡಿ, ಪ್ರಜಾಪ್ರಭುತ್ವ ಎಂದು ಹೇಳತಕ್ಕಂಥ ಜನ ನೀವು. ಆದ್ದರಿಂದ ಈ ತಿದ್ದುಪಡಿ ಅಗತ್ಯ.

Mr. Speaker.— Now I will put the amendment No. 8 to the vote of the House The question is,

"That Sub- Clause (2) shall be deleted"

The amendment was negatived.

Sri K. H. Ranganath— Sir, I beg to mave:

"That Sub-Clause (3) shall be deleted"

The question was proposed.

Sri K. H. Ranganath.— "an educational institution required to fill seats in accordance with item (i) of sub clause (b) of clause (2) shall form a committee to select candidates for such seats" ಹೀಗೆ ಎಂದು ಇದೆ. ಇದು ಕೂಡ ಕಾನ್‌ಸಿಕ್ವೆನ್ಸಿಯಲ್ ಆಗಿ ಇರತಕ್ಕಂಥದ್ದು A nominee each of the Government and the University to which such educational institution is affiliated shall be included as members in such committee". ಹಾಗೆಂದು ಹೇಳಿದ್ದೀರಿ, ಏತಕ್ಕೆ ಇಟ್ಟುಕೊಳ್ಳಿ.

ಶ್ರೀ ಬಿ. ರಾಚಯ್ಯ — ಆ ಅಮೆಂಡ್‌ಮೆಂಟ್ ಆಗುವುದಿಲ್ಲ.

Mr Speaker.— Now I will put the amendment No. 9 to the vote of the House. The question is,

"That Sub-Clause (3) shall be deleted"

The amendment was negatived.

Mr. Speaker.— Now I will put Clause 4 to the vote of the House. The question is,

"That Clause 4 do stand part of the Bill"

The motion was adopted.

Clause 4 was added to the Bill

ಡಾ॥ ವಿ. ಎಸ್. ಆಚಾರ್ಯ.— ಮಾನ್ಯ ಅಧ್ಯಕ್ಷರೇ, ಇಲ್ಲಿ ಸರ್ಕಾರಕ್ಕೆ ಸ್ವೀಪಿಂಗ್ ಪವರ್ ಕೊಡುತ್ತಿದ್ದೇವೆ ಆದ್ದರಿಂದ ....

Mr. Speaker.— At this stage you cannot raise it. I am putting clause by clause to the vote. Please co-operate. I am only trying to bring to your notice the procedure. The procedure is only the amendment which are moved will be there. You have not sent any amendment.

ಶ್ರೀ ಬಿ. ರಾಚಯ್ಯ.— ಈ ವಿಷಯದಲ್ಲಿ ಈಗಾಗಲೇ ನಾನು ಮಾನ್ಯ ಸದಸ್ಯರ ಜೊತೆ ಮಾತ ನಾಡಿದ್ದೇನೆ. ಅಷ್ಟೇ ಅಲ್ಲ, ಇದಕ್ಕೆ ಏನು ತಿದ್ದುಪಡಿ ತರಬೇಕೋ ಅದನ್ನು ತರುತ್ತೇವೆಂದು ಹೇಳಿದ್ದೇನೆ.

Dr. V. S. Acharya.— I don't propose to send any amendment. I want a categorical assurance from the Government before this bill is passed In Clause 4 (2)(a) it is said: 'the number of seats set apart as Government seats' Sir, this is a very crucial point....

Mr. Speaker.— We are now at clause by clause consideration stage. If there is no amendment moved by you how can I ask the Minister to reply that point ....

ಡಾ॥ ವಿ. ಎಸ್. ಆಚಾರ್ಯ.— ಶೇಕಡಾ 50 ರಷ್ಟು ಸೀಟ್‌ಗಳಿಗೆ ಕಡಿಮೆ ಇಲ್ಲದಂತೆ ಮೆಡಿಕಲ್ ಕಾಲೇಜುಗಳಲ್ಲಿ ಮೆರಿಟ್ ಆಧಾರದ ಮೇಲೆ ಕೊಡಬೇಕೆಂದಿದ್ದಾರೆ. ಈ ಬಗ್ಗೆ ಹೇಳುವುದಾದರೆ.......

Mr. Speaker. — You cannot raise at this stage. Please under-

stand the procedure. Now, I will put Clause 4 to the vote of the House. The question is :

'That Clause 4 do stand part of the bill'

The motion was adopted.

Clause 4 was added to the bill

Clause - 5

Sri M. Veerappa Moily.— Sir, I beg to move :

'That in sub-clause (1) line 3 the word "or any other fee or deposit or other amount" shall be deleted'

'That in sub-clause (1) line 3 the words "or deposit or other amount shall be deleted'

Sri K. H. Ranganath.— Sir, I beg to move :

'That in sub-clause (2) the words "or accept deposits" shall be deleted'

The question was proposed.

Sri B. Rachaiah. They are all conseqaential Amendments.

Sri M. Veerappa Moily.— They are not consequential amendments. It doesn't directly relate to Clause-3. It doesn't look like that. It may be connected but it also serves independent purpose. ಇದರ ಒಂದು ಪರಿಣಾಮ ಏನಾಗುತ್ತದೆಂದರೆ, ಕ್ಯಾಪಿಟೇಷನ್ ಫೀ ಬೇಡ ಎಂದು 5 ವರ್ಷದ ಮೇಲೆ ಕಾನೂನು ಮಾಡಬಹುದು ಇಲ್ಲವೇ ಮೊದಲೇ ಮಾಡಬಹುದು. If it is tution fee I can understand. To a certain extent we can allow. But we fail to understand the word 'any other fee or deposit; ಇದನ್ನು ನೋಡಿದಾಗ, ಕ್ಯಾಪಿಟೇಷನ್ ಫೀಯನ್ನು ಹೆಬ್ಬಾಗಿಲ ಮೂಲಕ ಕಳುಹಿಸಿ ಮತ್ತೆ ಹಿತ್ತಲ ಬಾಗಿಲ ಮೂಲಕ ಕರೆಸಿಕೊಂಡಂತೆ ಆಗುತ್ತದೆ It is a very mischievous word ಇಲ್ಲಿ ಡ್ರಾಫ್ಟ್ ಮಾಡುವಾಗ ಒಂದು ರೀತಿಯ ಸ್ಟೈಲ್‌ನಲ್ಲಿ ಮಾಡುತ್ತಾರೆ. ಇದರಿಂದ ಮುಂದೆ ಹೈಕೋರ್ಟಿನಲ್ಲಿ ಇಲ್ಲವೇ ಮತ್ತೊಂದು ಕಡೆ ಏನೋ ಕಾರಣ ಕೊಟ್ಟು ಈ ಖಾಸಗೀ ಕಾಲೇಜಿನವರು ಚಾಪೆಯ ಕೆಳಗೆ ನುಸುಳಿಕೊಂಡುಬಿಡುತ್ತಾರೆ. ಡೆಪಾಜಿಟ್ ಅಥವಾ ಬೇರೆ ರೀತಿಯ ಫೀ ಎಂದು ಹೇಳಿದರೆ ಅವರುಗಳು ಬೇರೆ ರೀತಿಯಿಂದ ವಸೂಲಿ ಮಾಡಲು ಸಾಧ್ಯವಾಗುತ್ತದೆ. ಇದು ಬಹಳ ವೇಗ್ ಆಗಿದೆ ಇದರಿಂದ ಮತ್ತೆ ಕ್ಯಾಪಿಟೇಷನ್ ಫೀಯನ್ನು ವಸೂಲಿ ಮಾಡುವುದಕ್ಕೆ ಅವಕಾಶವಾಗುತ್ತದೆ. To a certain extent we can agree that Government by notification regulate the tution fee; but the word 'any other fee or deposit' requires consideration. ಇದು ನಿಮ್ಮ ಮೂಲ ಉದ್ದೇಶಕ್ಕೆ ಕೊಡಲಿ ಏಟು ಬೀಳುತ್ತದೆ. ಆದ್ದರಿಂದ ತಾವು ಇದನ್ನು ಪ್ರತಿಷ್ಠೆಯಿಂದ ನೋಡಬೇಡಿ. ಈ ರೀತಿಯಿಂದ ನೀವು ಇದನ್ನು ಪಾಸ್ ಮಾಡಿದರೆ ಈ ಮಸೂದೆಯಿಂದ ಏನೂ ಸಾರ್ಥಕವಾಗುವುದಿಲ್ಲ. ಆದ್ದರಿಂದ ನನ್ನ ಒಂದು ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್. — ಇಲ್ಲಿ ಇಂಡಿಪೆಂಡೆಂಟ್ ಕ್ಲಾಸ್ ಎಂದು ಇದ್ದರೂ ಸಹ ಡೆಫಿನಿಷನ್ ಕ್ಲಾಸ್ 2 (ಬಿ)ನ್ನು ಏನು ಹೇಳಿದ್ದಾರೆಂಬುದನ್ನು ನೋಡೋಣ.

Clause 2(b) "Capitation fee" means any amount, by whatever name classed, paid or collected in excess of the fee prescribed under section 5, but does not include the deposit specified under the proviso to section 3 ಎನ್ನುವ ಮಾತನ್ನು ಹೇಳಿದ್ದಾರೆ ಮತ್ತೆ ಕ್ಲಾಸ್ (5) ರಲ್ಲಿ ರೆಗ್ಯುಲೇಷನ್ ಆಫ್ ಫೀ ಬಗ್ಗೆ ಏನು ಹೇಳಿದ್ದಾರೆ, ಇಲ್ಲಿಯೂ ಕೂಡ ಯಾವುದು ಎಂದು ಸ್ಪಷ್ಟಪಡಿಸಿಲ್ಲ. ಇದರ ಜೊತೆಗೆ ನೋಟಿಫಿಕೇಷನ್ ಮುಖಾಂತರ ಇದನ್ನು ರೆಗ್ಯುಲೇಟ್ ಮಾಡುವ ಅಧಿಕಾರವನ್ನು ಸರ್ಕಾರದವರ ತೆಗೆದುಕೊಂಡಿದ್ದಾರೆ. ಈ ಬಗ್ಗೆ ಮಾನ್ಯ ಮೊಯ್ಲಿ ಅವರು ಹೇಳಿದಂತೆ ಸ್ವಲ್ಪ ವಿಚಾರ ಮಾಡುವುದಿದೆ. ಸರ್ಕಾರದವರು ಈ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕು. ನಮ್ಮ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಆಗದಿದ್ದರೆ ಇದರ ಬಗ್ಗೆ ಸರ್ಕಾರದ ಮೂಲಕವಾದರೂ ತಕ್ಷಣವೇ ಒಂದು ತಿದ್ದುಪಡಿ ತರುವುದು ಒಳ್ಳೆಯದು. ಈ ನನ್ನ ಅಭಿಪ್ರಾಯವನ್ನು ಸರ್ಕಾರದ ಮುಂದಿಟ್ಟಿದ್ದೇನೆ ಮತ್ತು ಈಗ ತಂದಿರುವ ತಿದ್ದುಪಡಿಗೆ ನಾನು ಬೆಂಬಲ ಕೊಡುತ್ತೇನೆ.

Dr. V·S. Acharya.—In clause 5 it is said 'It shall be competent for the Government, by notification, to regulate the tuition fee or any other fee or deposit or other amount ...... ಎಂದು ಇದೆ ಇದಕ್ಕೆ ಮಾನ್ಯ ಮೊಯ್ಲಿ ಅವರು ಈ ಕೆಳಕಂಡಂತೆ ತಿದ್ದುಪಡಿ ತಂದಿದ್ದಾರೆ.

"or any other fee or deposit or other amoun" shall be deleted. I see the danger even in this. The experience has been very bad. ಏಕೆಂದರೆ ಸರ್ಕಾರದವರು ಇದಕ್ಕೆ ಸಂಬಂಧಪಟ್ಟಂತೆ ರೂಲ್ಸ್‌ಗಳನ್ನು ಆಗಾಗ್ಗೆ ಪಬ್ಲಿಷ್ ಮಾಡುತ್ತಾರೆ. ಕ್ಲಾಸ್-5ರಲ್ಲಿ ರೆಗ್ಯುಲೇಷನ್ ಆಫ್ ಫೀ ಬಗ್ಗೆ ಹೇಳಿದ್ದಾರೆ. ಆದರೆ ಇತ್ತೀಚೆಗೆ ಸರ್ಕಾರದವರೇ ಹೊರಡಿಸಿರುವಂತಹ ಒಂದು ಆರ್ಡರ್‌ನಲ್ಲಿ ಈ ಕೆಳಕಂಡಂತೆ ಹೇಳಿದ್ದಾರೆ :—

No private medical college in the State shall collect any tuition fee exeeding a sum of Rs. 5,000 per year per student in any category of student admitted to that college. ಇಲ್ಲಿರುವಂತಹ ಮುಖ್ಯವಾದ ಪ್ರಶ್ನೆಯೆಂದರೆ, ಈ ಮೊದಲು ಒಂದು ನಾರವ್ಸ್ ಇತ್ತು. ಅದೇನೆಂದರೆ, ನಮ್ಮ ರಾಜ್ಯದಲ್ಲಿ ಮೆಡಿಕಲ್ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಏಡೆಡ್ ಮೆಡಿಕಲ್ ಕಾಲೇಜುಗಳಿಲ್ಲ. ಆದರೆ ಇಂಜಿನಿಯರಿಂಗ್ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಏಡೆಡ್ ಮತ್ತು ಅನ್-ಏಡೆಡ್ ಕಾಲೇಜುಗಳಿವೆ. ಈ ಹಿಂದೆ ಸರ್ಕಾರದ ಇಂಜಿನಿಯರಿಂಗ್ ಕಾಲೇಜ್‌ಗಳಲ್ಲಿ ಎಷ್ಟು ಫೀ ತೆಗೆದುಕೊಳ್ಳಲಾಗುತ್ತದೋ ಅದರ ಎರಡರಷ್ಟು ಫೀಯನ್ನು ಏಡೆಡ್ ಕಾಲೇಜುಗಳಲ್ಲಿ ಮತ್ತು ಅನ್-ಏಡೆಡ್ ಕಾಲೇಜುಗಳಲ್ಲಿಯಾದರೆ, ಅದರ ನಾಲ್ಕರಷ್ಟು ಫೀಯನ್ನು ತೆಗೆದುಕೊಳ್ಳಬೇಕು ಅದಕ್ಕಿಂತ ಹೆಚ್ಚು ತೆಗೆದುಕೊಳ್ಳಬಾರದೆಂದು ಇದೆ. ಅಂದರೆ, ಸರ್ಕಾರದ ಕಾಲೇಜುಗಳಲ್ಲಿ 450 ರೂಪಾಯಿಗಳ ಫೀ ಇದ್ದರೆ ಅನ್-ಏಡೆಡ್ ಕಾಲೇಜುಗಳಲ್ಲಿ ಈ ಫೀ 1800 ಕ್ಕಿಂತ ಹೆಚ್ಚಾಗಬಾರದೆಂದಿದ್ದರೂ ಕೂಡ 1982 ನೇ ಇಸವಿಯಲ್ಲಿ ಇದನ್ನು 3 ಸಾವಿರ ರೂಪಾಯಿಗಳಿಗೆ ಏರಿಗೊಳಿಸಿದರು ಈಗ ಇದನ್ನು ಸಹ ಯಾರನ್ನೂ ಕೇಳದೆ 5000 ರೂಪಾಯಿಗಳೆಂದು ಮಾಡಿದ್ದಾರೆ. ಇದು ಸರಿಯಲ್ಲ. ಬಡವರು ಇಷ್ಟೊಂದು ಹಣ ಕೊಡುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದ ಕ್ಲಾಸ್ (5) ಏನಿದೆ, ಇದರ ಬಗ್ಗೆ ಸರ್ಕಾರದಿಂದ ನಮಗೆ ಒಂದು ಸ್ಪಷ್ಟವಾದ ಭರವಸೆ ಬೇಕು. ಇದಕ್ಕೆ ಸಂಬಂಧಪಟ್ಟಂತೆ ಈಗ ತಂದಿರುವ ತಿದ್ದುಪಡಿಯು ಬಹಳ ಮಹತ್ವದಿಂದ ಕೂಡಿದೆ. ಇವೊತ್ತು ಮೆಡಿಕಲ್ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಿಗೆ ಸಂಬಂಧಪಟ್ಟಂತೆ ನಮಗೆ ಒಂದು ಸ್ಪಷ್ಟವಾದಂಥ ಭರವಸೆ ಬೇಕು. ಸರ್ಕಾರದ ಕಾಲೇಜುಗಳಲ್ಲಿ 450 ಫೀ ಇರುವಾಗ ಅನ್-ಏಡೆಡ್ ಕಾಲೇಜುಗಳಲ್ಲಿ 5000 ರೂಪಾಯಿಗಳ ಫೀ ಕೊಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಪೋಸ್ಟ್-ಮ್ಯಾನ್ ಮಗ; ದರ್ಜಿಯ ಮಗ, ಹಜಾಮನ ಮಗಳು, ಫರ್‌ವಾಲಿ ಮಗ ಇವೊತ್ತು ಇಷ್ಟೊಂದು ಫೀ ಕೊಟ್ಟು ಮೆಡಿಕಲ್ ಕಾಲೇಜ್ ಸೇರಬೇಕೆಂದರೆ ಕಷ್ಟವಾಗುತ್ತದೆ. ಈಗಿನ ನಿಯಮದ ಪ್ರಕಾರ ವರ್ಷಕ್ಕೆ 5 ಸಾವಿರದಂತೆ 5 ವರ್ಷಗಳಲ್ಲಿ 25 ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಸ್ವಾಮಿ ನಮ್ಮ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಬಿ. ಬಿ ಶೆಟ್ಟರ ಕ್ಷೇತ್ರದಲ್ಲಿ ಒಬ್ಬ ಹಜಾಮರ ಹುಡುಗಿಗೆ ಪಿ. ಯು. ಸಿ. ಮೆರಿಟ್ ಮೇಲೆ ಸೀಟು ಸಿಕ್ಕಿತ್ತು. ಆದರೆ ಆಕೆ ಕೊಡಬೇಕಾಗಿದ್ದ 5 ಸಾವಿರ ರೂಪಾಯಿಗಳನ್ನು ಕೊಡಲಿಕ್ಕೆ ಆಗದೆ ಆಕೆ ಸೀಟನ್ನು ಕಳೆದುಕೊಂಡಳು. ಇಂಥ ಪ್ರಸಂಗಗಳು ಬೇಕಾದಷ್ಟು ನಡೆಯುತ್ತಿವೆ.

ಶ್ರೀ ಬಿ. ರಾಚಯ್ಯ.—ಸ್ವಾಮಿ ಅಂಥವರಿಗೆ ಫ್ರೀ ಷಿಪ್ ಕೊಡುತ್ತಾರೆ.

ಶ್ರೀ ವಿ. ಎಸ್ ಆಚಾರ್ಯ.—ಸ್ವಾಮಿ ಯಾವ ಫ್ರೀಷಿಪ್ ಕೂಡಾ ಕೊಟ್ಟಿಲ್ಲ. ಆಕೆಗೆ ಸಿಕ್ಕಿದ ಸೀಟು ಕಳೆದುಕೊಂಡಿದ್ದಾಳೆ. ಸ್ವಾಮಿ, ಕ್ಯಾಪಿಟೇಷನ್ ಫೀ ಕೊಟ್ಟು ಸೀಟು ದೊರಕಿಸಿಕೊಂಡವರನ್ನೇ ಒಂದು ದೃಷ್ಟಿಯಲ್ಲಿ ನೋಡುತ್ತಾರೆ. ಸರ್ಕಾರದಿಂದ ಸೀಟು ದೊರಕಿಸಿಕೊಂಡವರನ್ನೇ ಮತ್ತೊಂದು ದೃಷ್ಟಿಯಲ್ಲಿ ನೋಡುತ್ತಾರೆ. ಆದ್ದರಿಂದ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದಂಥ ಒಂದು ಹೇಳಿಕೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಅಧ್ಯಕ್ಷರು.—ಮಾನ್ಯ ಮಂತ್ರಿಗಳ ಏನೋ ಉತ್ತರ ಹೇಳುವುದಕ್ಕೆ ನಿಂತಿದ್ದಾರೆ. ಅವರು ಉತ್ತರ ಹೇಳಿ ಮುಗಿಸಲಿ. ಆಮೇಲೆ ನೋಡೋಣ.

ಶ್ರೀ ವಿ ಎಸ್ ಆಚಾರ್ಯ.—ಸ್ವಾಮಿ ಇವತ್ತು ಮೆಡಿಕಲ್ ಮತ್ತು ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಒಂದು ಸೀಟು ಬೇಕೆಂದರೆ ಸುಮಾರು ಒಂದೂವರೆ ಮತ್ತು ಎರಡು ಲಕ್ಷ ರೂಪಾಯಿಗಳು ಬೇಕಾಗುತ್ತದೆ

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಈಗ ಪಾಲಿಟೆಕ್ನಿಕ್‌ಗಳಲ್ಲಿ ಒಂದೇ ಸಾವಿರ ರೂಪಾಯಿ [illegible] ವ್ಯವಸ್ಥೆ ಅನ್ವಯಿಸ ಮಾಡಿಕೊಟ್ಟಿದ್ದೇವೆ. ಸ್ವಾಮಿ ಇಂಜಿನಿಯರ್ ಕಾಲೇಜುಗಳಲ್ಲಿ [illegible] ಬೇಕಾದರೆ ಕಾಣನು ಮಾಡಿದ್ದೇವೆ.

ಶ್ರೀ ವಿ. ಎಸ್. ಆಚಾರ್ಯ.— ತಾವು ಹೇಳುತ್ತಿರುವುದು ಇನ್ನು ಹೊಸದಾಗಿ ಕಾನೂನು ಮಾಡ ಬೇಕೆಂದೇ ?

ಅಧ್ಯಕ್ಷರು.— ಆ ಬಗ್ಗೆ ತಾವು ಒಂದು ಅಮೆಂಡ್‌ಮೆಂಟ್ ಇದ್ದರೆ ಕಳುಹಿಸಿಕೊಡಿ.

ಶ್ರೀ ಬಿ. ರಾಚಯ್ಯ.— ಸ್ವಾಮಿ ಈ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ ಆದಕ್ಕೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.— ಸ್ವಾಮಿ ಯಾವ ಡೆಫನೇಷನ್‌ನಲ್ಲಿ ಈ ಕ್ಯಾಪಿಟೇಷನ್ ಫೀಜು ಬರುತ್ತದೆ ?

You have defined the 'Capitation Fee' like this. Capitation Fee means 'any amount' by whatever name called, paid or collected in excess of the fee prescribed under section 5, but does not include the deposit specified under the provision to section 3. To regulate the tuition fee or any other fee or deposit or other amount.......

Sri M. Veerappa Moily.— They are idiomatory draft.......

Sri S. R Bommai.— Please read clause 5-regulation of fees along with the definition of Capitation fee ... ನಾವು 5 ವರ್ಷದವರೆಗೂ ಯೋಚನೆ ಮಾಡುವುದಕ್ಕೆ ಅವಕಾಶವಿದೆ. ಅಷ್ಟರಲ್ಲಿ ನಾವು ಡಿಪಾಜಿಟ್ ಮತ್ತು ಡೊನೇಷನ್ ತಗೆದು ಕೊಳ್ಳುವುದನ್ನು ಸಂಪೂರ್ಣವಾಗಿ ನಿಲ್ಲಿಸಬಹುದು. 5 ವರ್ಷಗಳು ಆದ ಮೇಲೆ ಮತ್ತೆ ನಾವು ತೆಗೆದು ಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಸ್ವಾಮಿ Any other ಅಂದರೆ ಯಾವ್ಯಾವುದು ?

ಶ್ರೀ ಎಸ್. ಆರ್. ಬೊಮ್ಮಾಯಿ.— ಈಗ ಕಾಲೇಜಿನಲ್ಲಿ ಬೇರೆ ಬೇರೆ ಹೆಸರಿನಲ್ಲಿ ಯೂನಿಯನ್‌ಗಳು ಇರುತ್ತವೆ. ಸ್ಪೋರ್ಟ್ಸ್, ಟ್ಯೂಷನ್ ಫೀಜು ಇತ್ಯಾದಿ ಆದರೂ ಕೂಡ ಆ ಎಲ್ಲಾ ಬಾಬುಗಳಲ್ಲಿ ಹಣವನ್ನು ವಸೂಲು ಮಾಡಿದರೂ ಕಡ್ಡಾಯ ರಸೀದಿಯನ್ನು ಕೊಡಬೇಕು.

Sri K H Rananath.— Then, it is only to harass the institutions. What is meant by 'other amount'. ಆ ಹಣ ಕ್ಯಾಪಿಟೇಷನ್ ಫೀಜು ಎಂದು ಹೇಳುತ್ತೀರೋ ಅಥವಾ ಡಿಪಾಜಿಟ್ ಹಣವೆಂದು ಹೇಳುತ್ತೀರೋ. ಆದ್ದರಿಂದ ತಾವು ಇದನ್ನು ಸ್ವಲ್ಪ ಯೋಚನೆ ಮಾಡಿದರೆ ಒಳ್ಳೆಯದು.

ಶ್ರೀ ಅಜೀಜ್ ಸೇಠ್.— ಮಾನ್ಯ ಸದಸ್ಯರು ಸ್ವಲ್ಪ ಯೋಚನೆ ಮಾಡಿ ಎಂದು ಹೇಳಿದ್ದಾರೆ. ಆದ್ದರಿಂದ ಸರ್ಕಾರ ಸ್ವಲ್ಪ ಯೋಚನೆ ಮಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಬಿ. ರಾಚಯ್ಯ.— ಸ್ವಾಮಿ, ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ

Mr. Speaker.— I will now put amendment No. 10 to the vote of the House. The question is :

'That the words "or any other fee or deposit or other amount" shall be deleted'.

The amendment was negatived.

Mr Speaker— I will now put amendment No. 11 to the vote of the House. The question is :

'That in sub-clause (1) line 3 the words "or deposit or other amount" shall be deleted'.

The amendment was negatived

ಡಾ|| ವಿ. ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೇ ನಿನ್ನೆಯ ದಿವಸ ನಾವು ಅನೇಕ ವಿಷಯಗಳಿಗೆ ಸಂಬಂಧಪಟ್ಟ ಹಾಗೆ ಸಹಕಾರವನ್ನು ಕೊಟ್ಟಿದ್ದೇವೆ. ಸ್ವಾಮಿ ನಮ್ಮ ತಾಲ್ಲೂಕಿನಲ್ಲಿ ಒಬ್ಬ ಮೆರಿಟ್ ಸ್ಟೂಡೆಂಟ್‌ಗೆ 5 ಸಾವಿರ ರೂಪಾಯಿಗಳನ್ನು ಕಟ್ಟದೆ ಇದ್ದುದರಿಂದ ಸೀಟು ಸಿಕ್ಕಲಿಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಈ ಮನೆಯಲ್ಲಿ ಹಾಜರಿದ್ದಾರೆ. ಅವರು ಇದರ ಬಗ್ಗೆ ಒಂದು ನಿಖರವಾದಂಥ ಉತ್ತರ ಕೊಟ್ಟರೆ ಒಳ್ಳೆಯದು. ತಾವು ಹೇಳುವುದೇನೆಂದರೆ ಹಾವು ಸಾಯಲೂ ಬಾರದು ಕೋಲು ಮುರಿಯಲೂ ಬಾರದು ಎಂದು. ಆ ರೀತಿಯಾದರೆ ನಮಗೆ ಬಹಳ ಕಷ್ಟವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಅವರು ಏನು ಹೇಳಿದ್ದಾರೋ ನಮಗೇನು ಗೊತ್ತು ?

ಅವರು ಏನು ಹೇಳಿದ್ದಾರೆಂದು ನಮಗೂ ಗೊತ್ತಾಗಬೇಕು ?

Dr. V S. Acharya.— We do not want to have any exclusive talk on this ಕರ್ನಾಟಕದ ಜನರಿಗೆ ಗೊತ್ತಾಗಬೇಕು.

Mr Speaker.— Let us know, we are in the House.

Sri Mallikarjuna M. Kharge.— Let us know, what they have discused ? What is that private discussion ?

Dr V. S. Acharya — It was not a private discussion. ಮಾನ್ಯ ಆರೋಗ್ಯ ಸಚಿವರಾದ ಸಿಂಧ್ಯರವರು ಇಲ್ಲಿಯೇ ಇದ್ದಾರೆ. ಕಳೆದವರ್ಷ ಏನು ಚರ್ಚೆಯಾಯಿತು ಆ ಒಂದು ಅನುಭವದಲ್ಲಿ ಅವರೂ ಪಾಲುದಾರರು. ಮಂಗಳೂರು ಮೆಡಿಕಲ್ ಕಾಲೇಜು ಮ್ಯಾನೇಜ್‌ಮೆಂಟ್‌ನವರು ವಿದ್ಯಾರ್ಥಿಗಳಿಂದ, ಟ್ಯೂಷನ್ ಫೀ ಎಂದು 5 ಸಾವಿರ ಚಿಲ್ಲರೆ ಹಣವನ್ನು ವಸೂಲಿ ಮಾಡುತ್ತಿದ್ದಾರೆಂದು, ವಿದ್ಯಾರ್ಥಿಗಳಿಗೂ ಮ್ಯಾನೇಜ್‌ಮೆಂಟ್‌ನವರಿಗೂ ಜಗಳ ಆದಾಗ, ಮಾನ್ಯ ಸಿಂಧ್ಯರವರು ನಮ್ಮನ್ನು ಕರೆದುಕೊಂಡು ಹೋಗಿ ಮಾತುಕತೆ ನಡೆಸಿ, ವರ್ಷಕ್ಕೆ 3 ಸಾವಿರ ರೂಪಾಯಿ ಟ್ಯೂಷನ್ ಫೀ ಯನ್ನು ತೆಗೆದುಕೊಳ್ಳುವಂತೆ ಒಪ್ಪಿಸಿ ಬಂದಿದ್ದಾರೆ. ಈಗ ಕಾಯಿದೆ ರೂಪದಲ್ಲಿ ತೆಗೆದುಕೊಂಡು ಬಂದು ಏಕಾಏಕಿ 5 ಸಾವಿರ ರೂಪಾಯಿಗಳಿಗೆ ಏರಿಸಿದ್ದೀರಿ, ಇಂತಹ ಪ್ರಸಂಗಗಳು ಬಂದರೆ ಇದಕ್ಕೆ ಯಾರು ಜವಾಬ್ದಾರರು ? ಇದಕ್ಕೆ ನೀವು ಉತ್ತರ ಕೊಡಬೇಕು. ನಮಗೆ ಓಟು ಕೊಟ್ಟಂತಹ ಜನರಿಗೆ ನಾವು ಏನು ಹೇಳಬೇಕು ? ಸೆಕ್ಷನ್ (5)ರಲ್ಲಿ ಒಂದು ಮಾತು ಇದೆ. ಅದು ಈ ರೀತಿ ಇದೆ :

"It shall be competent for the Government, by notification to regulate the tution fee or any other fee or deposit...... "

I am afraid that this is very dangerous.

Mr. Speaker.— You are talking about which amendment.

Dr. V S Acharya — Clause 5, sub-section 1.

Mr. Speaker.— You cannot interrupt now.

Dr. V. S. Acharya.— Sir, did I interrupt or obstructed any time ? I am always co-operative. ಕ್ಯಾಪಿಟೇಷನ್ ಫೀಯನ್ನು ತೆಗೆದು ಟ್ಯೂಷನ್ ಫೀ ಯನ್ನು ಒಮ್ಮೆಲೇ ಏರಿಸಿದರೆ ಹೇಗೆ ?

ಅಧ್ಯಕ್ಷರು —ದಯವಿಟ್ಟು ನನಗೆ ಸಹಾಯ ಮಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ. — ಮಂಗಳೂರು ಮೆಡಿಕಲ್ ಕಾಲೇಜು ಮತ್ತು ಮಣಿಪಾಲ್ ಕಾಲೇಜಿನವರು 1 ವರ್ಷಕ್ಕೆ 15 ರಿಂದ 20 ಸಾವಿರದವರೆಗೆ ಫೀಯನ್ನು ಕಲೆಕ್ಟ್ ಮಾಡುತ್ತಿದ್ದುದು ನಿಜ. ಫೀ ಯನ್ನು ಜಾಸ್ತಿ ಕಲೆಕ್ಟ್ ಮಾಡಿದ್ದರಿಂದ ವಿದ್ಯಾರ್ಥಿಗಳು ಮುಷ್ಕರ ಮಾಡಿದರು. ನಾನು ಡಾ|| ಆಚಾರ್ಯರವರು ಮತ್ತು ಇನ್ನಿತರರು ಸೇರಿಕೊಂಡು ಮ್ಯಾನೇಜ್‌ಮೆಂಟ್‌ನವರೊಂದಿಗೆ ಸಭೆಯನ್ನು ನಡೆಸಿ, ಫೀ ಯನ್ನು ಶೇಕಡ 50ರಷ್ಟು ಕಡಿಮೆ ಮಾಡಿರತಕ್ಕದ್ದು ನಿಜ. ಸರ್ಕಾರಿ ಕಾಲೇಜುಗಳಲ್ಲಿ 480 ರೂಪಾಯಿ ಟ್ಯೂಷನ್ ಫೀ ತೆಗೆದುಕೊಳ್ಳುತ್ತಾರೆ. ಖಾಸಗಿ ಕಾಲೇಜುಗಳಲ್ಲಿ ಸರ್ಕಾರಿ ಮೆರಿಟ್‌ನ ಮೇಲೆ ಏನು ವಿದ್ಯಾರ್ಥಿಗಳನ್ನು ಕಳುಹಿಸಿರುತ್ತೇವೆ ಅವರ ಹತ್ತಿರ 5 ಸಾವಿರ ರೂಪಾಯಿ ತೆಗೆದುಕೊಳ್ಳಬೇಕೆಂದು ಸರ್ಕಾರದ ಆಜ್ಞೆ ಮಾಡಿರತಕ್ಕದ್ದು ನಿಜ. ಒಂದೊಂದು ಕಾಲೇಜುಗಳಲ್ಲಿ 15 ಸಾವಿರ ರೂಪಾಯಿಗಳ ವರೆಗೂ ತೆಗೆದುಕೊಳ್ಳುತ್ತಾರೆ. ನಾವು 5 ಸಾವಿರ ರೂಪಾಯಿ ತೆಗೆದುಕೊಳ್ಳಬೇಕೆಂದು ಆಜ್ಞೆ ಮಾಡಿದ್ದೇವೆ. ಅವರು ಜಾಸ್ತಿ ತೆಗೆದುಕೊಳ್ಳುತ್ತಾರೆಂಬುದನ್ನು ನಾನು ಒಪ್ಪುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ವರ್ಷಕ್ಕೆ 3 ಸಾವಿರ ರೂಪಾಯಿ ತೆಗೆದುಕೊಳ್ಳುವುದು ಸಾಕೆಂದು ಒಪ್ಪಿಕೊಂಡಿರುವಾಗ, ಈಗ 5 ಸಾವಿರ ತೆಗೆದುಕೊಳ್ಳಬೇಕೆಂದು ಏತಕ್ಕೆ ಮಾಡಿದ್ದೀರಿ ?

ಡಾ| ವಿ ಎಸ್. ಆಚಾರ್ಯ. — ಮಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಇಡೀ ರಾಜ್ಯದಲ್ಲಿಯೇ ಅತಿ ಹೆಚ್ಚು ಫೀ ಕಲೆಕ್ಟ್ ಮಾಡುತ್ತಿದ್ದಾರೆ

Sri P. G. R. Sindhya.— Let me make my submission Why don't you hear me. 12 ಸಾವಿರ 14 ಸಾವಿರ ಹೀಗೆ ಕಲೆಕ್ಟ್ ಮಾಡುತ್ತಿದ್ದಾರೆ. ನಾವು ನೀವು ಸೇರಿಕೊಂಡು ಅದನ್ನು ಕಡಿಮೆ ಮಾಡಿದ್ದು ನಿಜ. ಸರ್ಕಾರಿ ಕಾಲೇಜುಗಳಲ್ಲಿ ಫಸ್ಟ್ ಇಯರ್ ಡಿಗ್ರಿಗೆ 480 ರೂಪಾಯಿ ಚಾರ್ಜ್ ಮಾಡುತ್ತಿದ್ದಾರೆ. ಖಾಸಗಿಯವರು ಕೊನೆಯಪಕ್ಷ 1 ಸಾವಿರ ರೂಪಾಯಿ ಕಲೆಕ್ಟ್ ಮಾಡಬೇಕೆಂದು ನನ್ನ ಅಭಿಪ್ರಾಯ, ಅದನ್ನು ನಾನು ವಿಚಾರ ಮಾಡುತ್ತಿದ್ದೇನೆ. ಹಾಗೆ ಮಾಡಿದಾಗ ಸಹಜವಾಗಿ 4 ಸಾವಿರ ರೂಪಾಯಿ ಆಗುತ್ತದೆ.

Sri M. Vearappa Moily.— Just to made Rs. 500/- rational do not increase this fee. That is not the argument.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಇಲ್ಲ. No.

ಶ್ರೀ ಎಂ. ವೀರಪ್ಪ ಮೊಯಿಲಿ.— ಇದು ಸರಿಯಲ್ಲ. ಡ್ಯಾಪನಲೈಸ್ ಮಾಡುವುದಕ್ಕೆ ಮೇಲಿನಿಂದ ಕೆಳಗೆ ತರಲಿಕ್ಕೆ ಆಗುವುದಿಲ್ಲ.

ಅಧ್ಯಕ್ಷರು.— ಇಲ್ಲಿ ಪ್ರಶ್ನೆ ಇರತಕ್ಕದ್ದು ಇಷ್ಟೆ. ಫೀ ಕಲೆಕ್ಷನ್ ಮಾಡುವಾಗ ಯಾವರೀತಿ ಮಾಡಲಾಗುತ್ತದೆ, ಅದಕ್ಕೆ ರೂಲ್ಸ್ ಫ್ರೇಮ್ ಮಾಡುತ್ತೇವೆಂದು ಹೇಳಿದ್ದಾರೆ, ಆಕ್ಟ್‌ನಲ್ಲಿ ಏನಿವೆ, ಆಕ್ಟ್‌ನಲ್ಲಿ ಏನೂ ಹೇಳಿಲ್ಲ. ಆದ್ದರಿಂದ "any other fee" ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳಿದ್ದಾರೆಂದರೆ : while framing the rules, I will call all the Leaders of Opposition and then we will decide. We are trying to frame the rules now. Kindly help me in conducting the business of the House. If you want to discuss, I have no objection.

ಶ್ರೀ ಕೆ. ಹೆಚ್. ರಂಗನಾಥ್. - 'other amount' ಅಂದರೆ ಜಾಸ್ತಿಯಾಗುತ್ತದೆ.

Mr. Speaker.— At this stage. How do I go into the merits of the case ? We are at the stage of clause by clause considetion.

Dr. V. S. Acharya.— Sir, the Hon. Minister replied in general. He did not touch this point.

ಅಧ್ಯಕ್ಷರು.— ತಾವು ನನಗೆ ಹೇಳಿದರೆ ಹೇಗೆ ? ನೀವು ಗೈಡ್ ಮಾಡಿ.

ಶ್ರೀ ಬಿ. **ರಾಚಯ್ಯ.**— ಪವರ್ಸ್ ತೆಗೆದುಕೊಂಡರೆ ಏನು ? ರೂಲ್ಸ್ ಮಾಡುತ್ತಿದ್ದೇವೆಂದು ಹೇಳಿದ್ದೇನೆ.

Sri M. Veerappa Moily — The Hon. Member is trying to get an assurance from the Government that arbitrarily they are not going to use it. Let the Government give an assurance ಮಾಡುವುದಿಲ್ಲವೆಂದು ಏನು ಗ್ಯಾರಂಟಿ ಇದೆ ? ನೀವು ರೂಲ್ಸ್ ಯಾವರೀತಿ ಮಾಡುತ್ತೀರಿ ಎಂದು ನಮಗೆ ಗೊತ್ತಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೆ, ಯಾವುದೇ ವಿಚಾರದಲ್ಲಿ ಸರ್ಕಾರ ಆರ್ಬಿಟ್ರರಿ ಮಾಡುವುದಕ್ಕೆ ಹೋದರೆ, ಅದನ್ನು ಕೇಳಲಿಕ್ಕೆ ನೀವು ಇದ್ದೀರಿ, ಹೈಕೋರ್ಟಿನವರು ಇದ್ದಾರೆ. ಈ ರೀತಿ ತಪ್ಪು ತಿಳುವಳಿಕೆ ಮಾಡಿಕೊಳ್ಳುವುದು ಬೇಡ. ಫೀನಲ್ಲಿ ವ್ಯತ್ಯಾಸ ಬರುವುದಿಲ್ಲ. ಮಾನ್ಯ ಆಚಾರ್ಯರವರ ಮನಸ್ಸಿನ ಆತಂಕ ಏನಿವೆ ಅನ್ನುವುದು ನನಗೆ ಗೊತ್ತಿವೆ. ಅವರು ಅನೇಕ ಸಲ ನನ್ನ ಹತ್ತಿರ ಚರ್ಚೆ ಮಾಡಿದ್ದಾರೆ. ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ನಾನೂರು ರೂಪಾಯಿ ತೆಗೆದುಕೊಳ್ಳುತ್ತಾರೆ, ಈಗ 5 ಸಾವಿರ ರೂಪಾಯಿ ಏತಕ್ಕೆ ಮಾಡಿದ್ದೀರಿ ಅಂದರೆ ನಾನು ಅದರ ಬಗ್ಗೆ ಒಂದು ಮಾತು ಹೇಳಲಿಕ್ಕೆ ಬಯಸುತ್ತೇನೆ. ಖಾಸಗಿ ಕಾಲೇಜುಗಳವರಿಗೆ ಯಾವುದೇ ರೀತಿಯ ಸಬ್ಸಿಡಿ ಕೊಡಲಿಕ್ಕೆ ನಾವು ತಯಾರಿಲ್ಲ. ಕ್ಲಿನಿಕಲ್ ಫೆಸಿಲಿಟೀಸ್ ಅವರೇ ಮಾಡಿಕೊಳ್ಳಬೇಕು, ನಾವು ಅವರಿಗೆ ಆಸ್ಪತ್ರೆಗಳನ್ನು ಎರವಲು ಕೊಡುವುದು ಸರಿಯಲ್ಲ. ಅದಕ್ಕೆ ನಾವು ತಯಾರಾಗಿಲ್ಲ. ಅವರು ಕ್ಯಾಪಿಟೇಷನ್ ಫೀ ತೆಗೆದುಕೊಂಡು, ತಮ್ಮ ಇನ್‌ಫ್ರಾಸ್ಟ್ರಕ್ಚರ್ ಬಿಲ್ಡಿಂಗ್, ಆಸ್ಪತ್ರೆಯನ್ನು ಮಾಡಿಕೊಂಡು ನಡೆಸುವುದು ಹೇಗೆ? ರಿಕರಿಂಗ್ ಎಕ್ಸ್‌ಪೆಂಡಿಚರ್ ಎಲ್ಲಿಂದ ಬರಬೇಕು ? ಐದು ವರ್ಷ ಆದಮೇಲೆ ಕ್ಯಾಪಿಟೇಷನ್ ಫೀಯನ್ನು ರದ್ದು ಮಾಡುತ್ತೇವೆ. ಆ ಭಾರವನ್ನು ಸರ್ಕಾರ ವಹಿಸಿಕೊಳ್ಳಲಿಕ್ಕೆ ತಯಾರಾಗಿಲ್ಲ. ಮಹಾರಾಷ್ಟ್ರದಲ್ಲಿ ಈ ವರ್ಷ 20 ರಿಂದ 25 ಇಂಜನಿಯರ್ ಕಾಲೇಜುಗಳನ್ನು ಪ್ರಾರಂಭ ಮಾಡಿದ್ದಾರೆ. ವಿದ್ಯಾರ್ಥಿಗಳಿಂದ 12 ರಿಂದ 13 ಸಾವಿರ ರೂಪಾಯಿ ಫೀ ವಸೂಲಿ ಮಾಡುತ್ತಿದ್ದಾರೆ. ಇಂಜನಿಯರಿಂಗ್ ಕಾಲೇಜು ಮತ್ತು ಮೆಡಿಕಲ್ ಕಾಲೇಜುಗಳು ನಮ್ಮ ಪ್ರಿಯಾರಿಟಿಗೆ ಸರಿಯಾಗಿ ಇರಬೇಕು. ಫೀಸ್ ಕಡಿಮೆ ಮಾಡಬೇಕು, ಕಡಿಮೆ ಮಾಡಬೇಕೆಂದು ನಿಮ್ಮ ಅಭಿಪ್ರಾಯ ಇದ್ದರೆ ಕಡಿಮೆ ಮಾಡೋಣ. ಆದರೆ ಇದೆ ಹೊತ್ತಿಗೆ ಕುಡಿಯುವ ನೀರು ಕೊಡಲಿಕ್ಕೆ ಆಗುವುದಿಲ್ಲ, ರಸ್ತೆ ಮಾಡಿಕೊಡಲಿಕ್ಕೆ ಆಗುವುದಿಲ್ಲ, ನೀರಾವರಿ ಯೋಜನೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಪ್ರಪಂಚದಲ್ಲಿಯೇ ಇಷ್ಟು ಕಡಿಮೆ ಫೀ ತೆಗೆದುಕೊಳ್ಳತಕ್ಕ ಎಜುಕೇಷನ್ ಸಂಸ್ಥೆಗಳು ಎಲ್ಲೂ ಇಲ್ಲ.

ಒಬ್ಬ ಮಾನ್ಯ ಸದಸ್ಯರು.— ಪಶ್ಚಿಮ ಬಂಗಾಳದಲ್ಲಿ ಕಡಿಮೆ ಇದೆಯಲ್ಲಾ ;

ಶ್ರೀ ರಾಮಕೃಷ್ಣ ಹೆಗಡೆ.— ನಾನು ಫೋನ್ ಮಾಡಿಸಿ ತಿಳಿದುಕೊಂಡಿದ್ದೇನೆ. ಅಲ್ಲೂ ಕಡಿಮೆ ಯೇನು ಇಲ್ಲ. ಅಲ್ಲಿಯ ಓವರ್‌ಡ್ರಾಫ್ಟ್ ಎಷ್ಟು ಇದೆ ಎಂಬುದು ನಿಮಗೆ ಗೊತ್ತಿದೆಯೆ? 191 ಕೋಟಿ ರೂಪಾಯಿ ಇತ್ತು. 1984-85 ರ ಪ್ಲಾನ್‌ಸೈಜ್ ಹೋದ ವರ್ಷಕ್ಕಿಂತ ಸಣ್ಣದು ಆಯಿತು. ನಾವು ಅದನ್ನು ನಕಲು ಮಾಡೋಣವೇ. ಆ ರೀತಿ ಇದ್ದರೆ ಆಗಬಹುದು. ನಮ್ಮ ದೇಶದಲ್ಲಿರುವ ಹಾಗೆ ಬೇರೆ ಯಾವ ದೇಶದ ಮೆಡಿಕಲ್ ಕಾಲೇಜಿನಲ್ಲಿ ಫೀಜ್ ಇದೆ ಹೇಳಿ. ಆದ್ದರಿಂದ, ನಾವು ಇದರ ಬಗ್ಗೆ ಚರ್ಚೆ

ಮಾಡೋಣ; ಅದಕ್ಕೆ ನನ್ನ ವಿರೋಧ ಇಲ್ಲ. ನನ್ನನ್ನು ಬೇಕಾದರೆ ಕನ್‌ವಿನ್ಸ್ ಮಾಡಿ; ಇಲ್ಲದಿದ್ದರೆ, ನಿಮ್ಮನ್ನು ನಾವು ಕನ್‌ವಿನ್ಸ್ ಮಾಡುತ್ತೇವೆ ಈಗ ಫೀಜ್ ಎಷ್ಟಿರಬೇಕೆಂದು ಇಲ್ಲಿ ಇಲ್ಲ. ಆದ್ದರಿಂದ, ಆ ರೀತಿ ಮಾಡಬಾರದೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ತಮಗೆ ಸಾಕಷ್ಟು ಬುದ್ಧಿವಂತಿಕೆ ಇದೆ, ಅನುಭವ ಇದೆ.

ಶ್ರೀ ಪಿ. ಜಿ. ಒಡೆಯರಾಜ್.— ಹೀಗೆ ಮೇಲಕ್ಕೆ ಏರಿಸಿ ಅವರ ಬೆಂಬಲ ತೆಗೆದುಕೊಂಡರೆ ?

ಶ್ರೀ ಎಂ. ವೀರಪ್ಪ ಮೊಯಿಲಿ.— ಡಾ॥ ಆಚಾರ್ಯ ಅವರಿಗೆ ಬುದ್ಧಿವಂತಿಕೆ ಇದೆ ಆದರೆ ಜನರಿಗೆ ಬುದ್ಧಿವಂತಿಕೆ ಇರಬೇಕಲ್ಲ ? ನಿಮ್ಮ ಬುದ್ಧಿವಂತಿಕೆಯಿಂದ ಜನರು ಏನು ಮಾಡುತ್ತಾರೆ ? ನಿಮ್ಮ ಬುದ್ಧಿವಂತಿಕೆಯಿಂದ ಜನರಿಗೆ ಕಷ್ಟವಾಗಿದೆ. ಇದು ಫೀಜಿಗೆ ಮತ್ತು ರೆಗ್ಯುಲೇಷನ್‌ಗೆ ಸಂಬಂಧ ಪಟ್ಟದ್ದು. ಕ್ಯಾಪಿಟೇಷನ್ ಫೀಜನ್ನು 5 ವರ್ಷದವರೆಗೆ ಇಡುತ್ತಿದ್ದೀರಿ; ಜೊತೆಯಲ್ಲಿ ಫೀಜ್ ಕೂಡ ಇರುವಾಗ "any amount or accepted deposits" ಎಂಬುದು ಬರುತ್ತದೆ. ಇಲ್ಲಿ ವಿಚಾರ ಇರುವುದು ಇಷ್ಟೆ. ಅದೂ ಕೂಡ ಮುಖ್ಯ ಮಂತ್ರಿಗಳು ಹೇಳಿದ ಮೇಲೆ ಉದ್ಭವವಾಯಿತು. ಮಹಾರಾಷ್ಟ್ರದ ಖಾಸಗಿ ಕಾಲೇಜುಗಳಲ್ಲಿ 5 ಸಾವಿರ ಅಥವಾ 7 ಸಾವಿರ ರೂಪಾಯಿ ಟ್ಯೂಷನ್ ಫೀ ಇದ್ದರೆ 50 ಸಾವಿರ ರೂಪಾಯಿ ಕ್ಯಾಪಿಟೇಷನ್ ಫೀ ಇರುತ್ತದೆ. ಇಲ್ಲಿ 5 ಸಾವಿರ ರೂಪಾಯಿ ಟ್ಯೂಷನ್ ಫೀ ಜೊತೆಗೆ 2 ಲಕ್ಷ ರೂಪಾಯಿ ಕ್ಯಾಪಿಟೇಷನ್ ಫೀ ಅಲ್ಲದೆ 50 ಸಾವಿರ ರೂಪಾಯಿ ಡಿಪಾಸಿಟ್ ಕೊಡಬೇಕೆಂದರೆ ಆಗುವುದಿಲ್ಲ. ಆದ್ದರಿಂದ, ಆಚಾರ್ಯ ಅವರು ಏನು ಹೇಳುತ್ತಿದ್ದಾರೆಂದರೆ ಕ್ಯಾಪಿಟೇಷನ್ ಫೀ ಇರುವವರೆಗೆ ಡಿಪಾಸಿಟ್ ಸ್ಕೀಂ ಇರಬಾರದು ಮತ್ತು ಟ್ಯೂಷನ್ ಫೀ ಅನ್ನು 5 ಸಾವಿರ ರೂಪಾಯಿಗೆ ಏರಿಸಿದ್ದು ಕೂಡ ತಪ್ಪು ಎಂದು. ಖಾಸಗೀ ಕಾಲೇಜುಗಳಲ್ಲಿ ಸರ್ಕಾರೀ ಕಾಲೇಜುಗಳಿಗಿಂತ 4 ಪಟ್ಟು ಫೀ ಜಾಸ್ತಿ ಇರಬೇಕೇ ಹೊರತು ಅದಕ್ಕಿಂತ ಹೆಚ್ಚು ಇರಬಾರದು. ಅದಕ್ಕೆ ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ ಅದಕ್ಕೆ ಒಪ್ಪಿಕೊಳ್ಳುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಬಿ. ರಾಚಯ್ಯ.— ಆ ಬಗ್ಗೆ ಚರ್ಚೆ ಮಾಡೋಣ, ರೂಲ್ಸ್‌ನಲ್ಲಿ ಮಾಡುತ್ತೇವೆಂದು ಹೇಳಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕತ್ತಿ ಹರಿತ ಮಾಡಿ ಅದನ್ನು ಜೋಪಾನವಾಗಿ ಇಡುತ್ತೇವೆಂದು ಹೇಳಿದ ಹಾಗೆ ಹೇಳುವುದು ಸರಿಯಲ್ಲ. ವಿದ್ಯಾರ್ಥಿಗಳ ಮೇಲೆ ನಿಮ್ಮ ಅಸ್ತ್ರವನ್ನು ಪ್ರಯೋಗ ಮಾಡಬೇಡಿ.

Mr Speaker —Now, I will put amendment No. 12 to the vote of the House The question is :

'That in sub-clause (2) he words :"or accept deposits" shall be deleted."

The amendment was negatived.

ಶ್ರೀ ಎಂ. ವೀರಪ್ಪ ಮೊಯಿಲಿ.— ಡಾ॥ ಆಚಾರ್ಯ ಅವರು ನಿಮ್ಮ ಬಲೆಯಲ್ಲಿ ಸಿಕ್ಕಿಹೋದರು.

ಶ್ರೀ ರಾಮಕೃಷ್ಣ ಹೆಗಡೆ. —ನೀವು ಹೋದ ಹಾದಿಯಲ್ಲಿ ಡಾ॥ ಆಚಾರ್ಯ ಅವರು ಎಂದೂ ಹೋಗುವುದಿಲ್ಲವೆಂದು ನಾನು ನಿಮಗೆ ಭರವಸೆ ಕೊಡುತ್ತೇನೆ.

Sri K. H. Rahganath.— Sir, I beg to move :

"That in sub-clause (2) for the words "or permitted under the proviso to Section 3" the words "other than the fee permitted under sub-clause (1) of clause 5" shall be substituted "

The question was proposed.

ಶ್ರೀ ಕೆ. ಹೆಚ್. ರಂಗನಾಥ್.— ಇದರ ಬಗ್ಗೆ ಏನು ಹೆಚ್ಚು ಹೇಳಬೇಕಾದುದು ಇಲ್ಲ. ನನ್ನ ಉದ್ದೇಶ ಏನೆಂದರೆ, ಡಿಪಾಸಿಟ್, ಕ್ಯಾಪಿಟೇಷನ್ ಎಲ್ಲಾ ಇರುವುದರಿಂದ ಫೀಜ್ ಅಲ್ಲದೆ ಬೇರೆ ಏನನ್ನೂ ವಸೂಲು ಮಾಡಬಾರದು ಎಂದು.

ಶ್ರೀ ಬಿ. ರಾಚಯ್ಯ.— ಬ್ಯಾಂಕಿನಲ್ಲಿ ಡಿಪಾಸಿಟ್ ಮಾಡಬೇಕು. ಇದರ ಉದ್ದೇಶ ಏನೆಂದರೆ ಹಣ ದುರುಪಯೋಗ ಆಗದೆ ಇರಲಿ ಎಂದು ಬ್ಯಾಂಕಿನಲ್ಲಿ ಇಡುತ್ತಿದ್ದೇವೆ.

Mr. Speaker.—Now. I will put amendment No. 13 to the vote of the House. The question is :

"That in sub-clause (2) for the words 'or permitted under the proviso to Section 3' the words "other than the fee permitted under sub-clause (1) of 5" shall be substituted "

The amendment was negatived.

Sri K. H. Rauganath.— Sir, I beg to move :

"That in sub-clause (3) the words "or capitation fee or deposits or other amount" shall be deleted."

The question was proposed.

Sri M. Veerappa Moily.— Sir, I beg to move

"That in sub-clause (3) the words "or Capitation fee or deposits or" shall be deleted."

The question was proposed

Sri B. Rachaiah.— It cannot be accepted Sir.

Mr. Speaker.— Now, I will put amendment No. 15 to the vote of the House. The question is :

"That in sub-clause (3) the words "or Capitation fee or deposits or other amount" shall be deleted."

The amendment was negatived

Mr. Speaker.—Now, I will put amendment No. 16 to the vote of the House, The question is :

"That in sub-clause (3) the words "or Capitation fee or deposits or" shall be deleted."

The amendment was negatived

Sri K.H. Ranganath—Sir, I beg to move.

"That in sub-clause (4) line 2, the words" or capitation fee or deposits or other amount" shall be deleted."

The question was proposed

Mr. Speaker.— The question is :

"That in sub-clause (4) line 2, the words "or Capitation fee or deposits or other amount" shall be deleted."

The amendment was proposed

Sri M. Veerappa Moily.— Sir, I beg to move :

"That sub-clause (4) shall be deleted."

The question was proposed

Sri M. Veerappa Moily.— Sir, sub-clause (4) of Clause 5 is vague. They say

"All monies received by any educational institution by way of fee or capitation fee or deposits or other amount on shall be deposited in the account of the institution in any Scheduled Bank and shall be applied and expended for the improvement of the institution and the development of the educational facilities and for such other related purposes and to such extent and in such manner as may be specified by order of the Government."

What exactly do they mean by "such other related purpose"? I can understand the development of the educational institution. I can understand the improvement of the institution. ನೀವು ಏನು ಮಾಡಿದರೂ ನಿಯಂತ್ರಣ ಮಾಡಿದ ಹಾಗೆ ಇರಬೇಕು. "May be related" ಅಂದರೆ ಸರ್ಕಾರ ಸ್ಪೆಸಿಫೈ ಮಾಡಬಹುದು. ಹೊಸದಾಗಿ deprive ಮಾಡಿದರೆ ಹೈಕೋರ್ಟಿಗೆ ಹೋಗುತ್ತಾರೆ.

"As related" ಎಂದು ಆರ್ಡರ್ ತೆಗೆದುಕೊಳ್ಳುತ್ತಾರೆ. It will be an instrument to harass them. It will also give legal advise to escape from your clutches. It is absolutely very vague. This kind of drafting has become usual so that it could be struck down in the High Court ಆದ್ದರಿಂದ ಇಂಥ ಕ್ಲಾಸನ್ನು ಇಟ್ಟು ಮೂಲ ಉದ್ದೇಶಕ್ಕೆ ಅಡ್ಡ ಬರತಕ್ಕ ಕೆಲಸ ಮಾಡಬಾರದು.

ಶ್ರೀ ಬಿ. ರಾಚಯ್ಯ.— ಈ ಕ್ಲಾಸನ್ನು ತಾವು ಸರಿಯಾಗಿ ಓದಿದರೆ ನಾವು ಏನು ಉದ್ದೇಶ ಇಟ್ಟುಕೊಂಡಿದ್ದೇವೆಂಬುದು ಅರ್ಥವಾಗುತ್ತದೆ

ಶ್ರೀ ಕೆ.ಹೆಚ್. ರಂಗನಾಥ್.— ರೂಲ್ಸ್ ಮಾಡಿ "specified by order" ಎಂದು ಮಾಡಿ. ಇಲ್ಲದಿದ್ದರೆ, ಇವತ್ತು ನಾಳೆ ನಾಡಿದ್ದು ಒಂದೊಂದು ಆರ್ಡರ್ ಮಾಡಬಹುದು.

Sri B. Rachaiah.— Sir, It reads thus :

"All monies received by any educational institution by way of fee or capitation fee or deposits or other amount shall be deposited in the account of the institution, in any Scheduled Bank and shall be applied and expended for the improvement of the institution and the development of the educational facilities and for such other related purposes and to such extent and in such manner as may be specified by order by the Government."

ಶ್ರೀ ಎಂ. ಎಸ್. ಕೃಷ್ಣನ್. ಕೆಳಗೆ ಕೊಡುವವರಿಗೆ ಎಲ್ಲಿ ರಶೀತಿ ಕೊಡುತ್ತಾರೆ? ಮೇಲೆ ಕೊಡುವವರಿಗೆ ಮಾತ್ರ ಕೊಡುತ್ತಾರೆ.

ಶ್ರೀ ಬಿ. ರಾಚಯ್ಯ.— ರಶೀತಿ ಇಲ್ಲದಿದ್ದರೆ ಡಿಪಾಸಿಟ್ ಮಾಡಬಾರದು. ಸರ್ಕಾರದ ಅನುಮತಿ ಇಲ್ಲದೆ ಯಾವ ಅಭಿವೃದ್ಧಿ ಚಟುವಟಿಕೆಗಳನ್ನೂ ಕೈಗೊಳ್ಳಕೂಡದು ಅಂದಾಗ ಸರ್ಕಾರದ ಉದ್ದೇಶ ಏನು?

Sri M. Veerappa Moily.—"Here ...such other related purpose...." ಆದರೆ ಇದು ಏನು ತೋರಿಸುತ್ತದೆ ಎಂದರೆ ಒಬ್ಬ ಆರ್ಟಿಸ್ಟ್‌ನ ಕೈಯಲ್ಲಿ ಪಿಕ್ಚರ್ ಬರೆಸಿಬಿಟ್ಟು ಆಮೇಲೆ ಅದಕ್ಕೆ ಮಸಿ ಬಳಿದ ಹಾಗಾಯಿತು.

Sri B. Rachaiah.— "...Such other related purpose...." ಅಂತ ಇದ್ದರೂ ಕೂಡ ನಾವೇನೋ ಅವರಿಗೆ ಸಿನಿಮಾ ಥಿಯೇಟರ್ ಕಟ್ಟಿಸಲಿಕ್ಕೆ ಬಿಡೋದಿಲ್ಲಾ.

Sri K H Ranganath — " Specified by order.. " ಅಂತ ಇರುವುದರಿಂದ ನೀವು ನಾಳೆ ಒಂದು ರೂಲು ಮಾಡಬಹುದು, ನಾಳಿದ್ದು ಒಂದು ರೂಲು ಮಾಡಬಹುದು. Why this type of legislation?

Mr. Speaker.— Now, I will put clause-5 to the vote of the House. The question is :

"That Clauae 5 do stand part of the Bill."

The Motion was adopted

Clause 5 was added to the Bill

Clause-6

Mr. Speaker.— There is an amendment by Sri M. Veerappa Moily. I request him to move the amendment :

Sri M. Veerappa Moily.— Sir, I beg to move—

"That sub-clause (1) shall be deleted."

The question was proposed

Sri M. Veerappa Moily.— Sir, here they have said that—

"The Government may regulate the expenditure of educational institutions and the maintaince of accounts by them in such manner as may be prescribed. The Government may require such educational institutions to submit such returns or statements as it may deem necessary for carrying out the purpose of

this Act." ನೀವು ಎಕ್ಸ್‌ಪೆಂಡಿಚರ್ ರೆಗ್ಯುಲೇಟ್ ಮಾಡಬೇಕು ಅಂತ ಹೇಳಿದ್ದೀರಾ, ನೀವು ಎಕ್ಸ್‌ಪೆಂಡಿಚರ್ ರೆಗ್ಯುಲೇಟ್ ಮಾಡಬೇಕು ಎಂದರೆ ನೀವು "as may be prescribed ..." ಎಂದರೆ ಏನು ಅರ್ಥ? Any account, the Government Auditor or the Auditor appointed by them He has to scrutinise it. There is no pith as far as this regulation is concerned.

Sri B Rachaiah.— This regulation is necessary and it cannot be deleted.

Mr. Speaker.— The question is.

"That Sub-clause (1) shall be deleted."

The amendment was negatived

Mr. Speaker.— Now, I will put Clause-6 to the vote of the House The question is.

"That Clause-6 do stand part of the Bill."

The Motion was adopted

Clause 6 was added to the Bill

Clauses 7 & 8

Mr. Speaker.— Since there are no amendments in Clauses 7 and 8, I will put them now to the vote of the House. The question is :

"That Clauses 7 and 8 do stand part of the Bill."

The Motion was adopted

Clauses 7 & 8 were added to the Bill.

Clause 9

Sri K.H. Ranganath.— Sir, I beg to move :

"That in sub-clause (a)(1) for the words "Gazetted Officer" the words "Class I Senior Scale Officer" shall be substituted."

The question was proposed

Sri K H. Ranganath.— Here " any officer not below the rank of a Gazetted Officer ..." ಅಂತ ಇದೆ. ಬಿಲೋ ದಿ ಗೆಜಿಟೆಡ್ ಆಫೀಸರ್ ಅಂದರೆ ಯಾರು? ಸಬ್ ರಿಜಿಸ್ಟ್ರಾರ್‌ರವರನ್ನೇ ತೆಗೆದುಕೊಳ್ಳಿ, ತಹಸೀಲ್ದಾರರನ್ನೇ ತೆಗೆದುಕೊಳ್ಳಿ, ಸಬ್ ಡಿವಿಷನಲ್ ಮ್ಯಾಜಿಸ್ಟ್ರೇಟ್‌ರವರನ್ನೇ ತೆಗೆದುಕೊಳ್ಳಿ ಅವರೆಲ್ಲಾ ಗೆಜಿಟೆಡ್ ಆಫೀಸರೇ. ಇವನ್ನು ಪ್ರಾಕ್ಟಿಕಲ್ ಆಗಿ ನೋಡಿದರೆ ಮಾನ್ಯ ಮಂತ್ರಿಗಳೇ ಅರ್ಥ ಮಾಡಿಕೊಳ್ಳುತ್ತಾರೆ ನಾನೇನು ಅವರಿಗೆ ಹೇಳಬೇಕಾದ್ದಿಲ್ಲ. ಇಂಥ ದೊಡ್ಡ ದೊಡ್ಡ ಸಂಸ್ಥೆಗಳ ಅಕೌಂಟ್ಸ್ ಅನ್ನು ಚೆಕ್ ಮಾಡಬೇಕಾದರೆ ಹೆಚ್ಚು ಜವಾಬ್ದಾರಿಯುತವಾದಂಥ ಗೆಜಿಟೆಡ್ ಆಫೀಸರ್ ಅನ್ನು ಆ ಸಂಸ್ಥೆಗೆ ಹಾಕಿದರೆ ಉತ್ತಮ. ಅದಕ್ಕೆ ನಾನು ಹೇಳುತ್ತಿದ್ದೇನೆ.

Here they have mentioned thus :

"Any officer not below the rank of a Gazetted Officer, may, authorised by the State Government in this behalf, may, at any time during the normal working hours of any educational institution enter such institution or any premises thereof or any premises belonging to the management...." ಎಂದು ಇದೆ. ಅನುದಾನದ ಇಂಥಾ ಒಂದು ದೊಡ್ಡ ಸಂಸ್ಥೆಗೆ ಬಿಲೋ ದಿ ರ್‍ಯಾಂಕ್ ಆಫ್ ಗೆಜಿಟೆಡ್ ಆಫೀಸರ್ ಅನ್ನು ಹಾಕತಕ್ಕಂಥಾದ್ದು ಸರಿಯಲ್ಲ. ಇದಕ್ಕೆ ಕ್ಲಾಸ್ ಒನ್ ಸೀನಿಯರ್ ಸ್ಕೇಲ್ ಆಫೀಸರ್ ಅನ್ನು ಹಾಕಬೇಕೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇದನ್ನು ಒಪ್ಪಿಕೊಂಡರೆ ಸರ್ಕಾರಕ್ಕೆ ಏನೂ ತೊಂದರೆಯಾಗುವುದಿಲ್ಲ. ದಯಮಾಡಿ ಸರ್ಕಾರ ಇದನ್ನು ಒಪ್ಪಿಕೊಳ್ಳಬೇಕು ಹಾಗೂ ಈ ಸದನ ನನ್ನ ಈ ತಿದ್ದುಪಡಿಗೆ ಒಪ್ಪಿಗೆ ಕೊಡಬೇಕೆಂದು ನಾನು ಕೇಳುತ್ತೇನೆ.

Mr. Speaker.—Now, there is another amendment by Sri K.H. Ranganath I request him to move the amendment.

Sri K H. Ranganath.— Sir, I beg to move :

"That in sub-clause (a) (1) line 5 after the words "enter" the words "with the prior intimation to" shall be inserted."

The question was proposed

ಶ್ರೀ ಕೆ. ಹೆಚ್. ರಂಗನಾಥ್. — ಅಧ್ಯಕ್ಷರೆ, ಇದರಲ್ಲಿ ಪ್ರಿಯರ್ ಇಂಟಿಮೇಷನ್ ಇರಬೇಕು ಏತಕ್ಕೆಂದರೆ ಅವರನ್ನು ಇನ್‌ಕಂಟ್ಯಾಕ್ಸ್‌ನವರು ರೇಡ್ ಮಾಡಿದ ಹಾಗೆ ಮಾಡತಕ್ಕಂಥಾದ್ದು ಸರಿಯಲ್ಲ. ಅವರು ಇಟ್ಟಿರತಕ್ಕಂಥಾ ಲೆಕ್ಕವನ್ನು ಚೆಕ್ ಮಾಡುವುದಕ್ಕೆ ನೀವು ಹೋಗುತ್ತೀರಿ. ಮೆಡಿಕಲ್ ಕಾಲೇಜಾಗಲಿ, ಇಂಜಿನೀಯರಿಂಗ್ ಕಾಲೇಜಾಗಲಿ ಈ ಸಂಸ್ಥೆಗಳು ಏನು ಇವೆ ವಿದ್ಯಾರ್ಥಿಗಳಿಗೆ ಹೆಚ್ಚು ವಿದ್ಯಾರ್ಜನೆ ಮತ್ತು ಜ್ಞಾನಾರ್ಜನೆ ಕೊಡತಕ್ಕಂಥಾ ಸಂಸ್ಥೆಗಳಾಗಿರುವುದರಿಂದ ಇದನ್ನು ಒಂದು ವ್ಯಾಪಾರದ ರೀತಿಯಲ್ಲಿ, ಅಂಗಡಿಯ ರೀತಿಯಲ್ಲಿ ನೋಡುವುದು ಸರಿಯಲ್ಲ. ಆದುದರಿಂದ ನಾನು ಹೇಳುವುದು ಇಷ್ಟೆ, ಅವರ ಲೆಕ್ಕವನ್ನು ನೋಡುವುದಕ್ಕೆ ಎರಡು ಗಂಟೆ ಮುಂಚಿತವಾಗಿ ನಿಮ್ಮಲ್ಲಿಗೆ ಬರುತ್ತೇನೆಂದು ನೋಟೀಸ್ ಕೊಡಿ ಸಾಕು, ಇಲ್ಲವೇ ಒಂದು ಗಂಟೆ ಮುಂಚಿತವಾಗಿಯಾದರೂ ಬರುತ್ತೇವೆ ಎಂದು ಹೇಳಿ. ಅಷ್ಟು ಅವಕಾಶ ಕೊಡಿ ಸಾಕು. ಇದ್ದಕ್ಕಿದ್ದ ಹಾಗೆ ಹೋಗುವುದು ಅದು ಸೌಜನ್ಯವಾದ ಕ್ರಮವಲ್ಲ. ಆದುದರಿಂದ ನಾನು ತಂದಿರತಕ್ಕಂಥಾ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕು ಎಂದು ಹೇಳುತ್ತೇನೆ ಹಾಗೆಯೇ ಈ ಸದನವೂ ಕೂಡ ಈ ತಿದ್ದುಪಡಿಗೆ ಅನುಮತಿ ಮನಸ್ಸು ಕೊಡಬೇಕು ಎಂದು ಹೇಳುತ್ತೇನೆ.

ಡಾ॥ ವಿ.ಎಸ್. ಆಚಾರ್ಯ. ಶ್ರೀಮಾನ್ ಕೆ.ಹೆಚ್. ರಂಗನಾಥ್‌ರವರು ಮೂವ್ ಮಾಡಿವಂಥಾ ಕ್ಲಾಸ್ 9 ನನ್ನ ಅನುಮೋದನೆಯೂ ಇದೆ. ಕ್ಲಾಸ್ ಒನ್ ಸೀನಿಯರ್ ಸ್ಕೇಲ್ ಆಫೀರ್‌ನ್ನು ಇಂತಹ ದೊಡ್ಡ ಸಂಸ್ಥೆಗಳಿಗೆ, ಬಹಳ ಜವಾಬ್ದಾರಿಯುತವಾದಂಥಾ ಈ ಸಂಸ್ಥೆಗಳಿಗೆ ಹಾಕುವುದು ಒಳ್ಳೆಯದು, ಬಿಲೋ ದಿ ರ್‍ಯಾಂಕ್ ಆಫ್ ಎ ಗೆಜಿಟೆಡ್ ಆಫೀಸರ್ ಅನ್ನು ಹಾಕಬಾರದು. ಕ್ಲಾಸ್ ಒನ್ ಸೀನಿಯರ್ ಸ್ಕೇಲ್ ಆಫೀಸರನ್ನು ಹಾಕಬೇಕಾದ್ದು ಅಗತ್ಯ ಇದೆ ಎಂದು ನನಗೆ ಅನಿಸುತ್ತದೆ.

ಶ್ರೀ ಬಿ. ರಾಚಯ್ಯ.— ಮೊದಲನೆ ತಿದ್ದುಪಡಿ ಅವರು ಏನು ಹೇಳಿದ್ದಾರೋ, ಈ ಸಂಸ್ಥೆಗಳಿಗೆ ಸೀನಿಯರ್ ಸ್ಕೇಲ್ ಆಫೀಸರ್ ಹಾಕಬೇಕು ಅಂತ ಏನು ಹೇಳಿದ್ದಾರೋ ಅದನ್ನು ಬೇಕಾದರೆ ಒಪ್ಪಿಕೊಳ್ಳಬಹುದು. ಆದರೆ ಎರಡನೇ ತಿದ್ದುಪಡಿ ಏನು ಇದೆ, ಪ್ರಿಯರ್ ಇಂಟಿಮೇಷನ್ ಅಂತ ಏನು ಇದೆ, ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ

Mr. Speaker—Now, I will put amendment No. 22 to the vote of the House. The question is

"That in sub-clause (a) (1) for the words "Gazetted officer" the words "Class I Senior Scale Officer" shall be substituted."

The motion was adopted.

Mr Speaker.— Now, I will put amendment No. 23 to the vote of the House. The question is :

"That in sub-clause (a) (1) line 5 after the words "enter" the words "with the prior intimation to" shall be inserted."

The amendment was negatived

Mr. Speaker.— The question is :

"That Clause-9 as amended do stand part of the Bill."

The motion was adopted

Clause-9 as amended was added to the Bill.

Clauses 10 to 12

Mr Speaker.— Now, since there are no amendements to Clauses 10, 11 and 12, I will put them to the vote of the House. The question is :

"That Clauses 10 to 12 (both inclusive) do stand part of the Bill.

The motion was adopted

Clauses 10 to 12 (both inclusive) were added to the Bill.

Clause 13

Sri K.H. Ranganath.— Sir, I have given amendment.

Mr. Speaker.— It is not an amendment. You have given notice for the deletion of the whole Clause.

I will put Clause-13 to the vote of the House. The question is "That Clause 13 do stand part of the Bill.

Clause 13 was added to the Bill.

Clauses 14 to 16

Mr. Speaker.— Now, I will put Clauses 14, 15 and 16 to the vote of the House. The question is:

"That Clauses 14 to 16 (both inclusive) do stand part of the Bill".

The motion was adopted

Clauses 14 to 16 (both inclusive) were added to the Bill.

Clause 1 Etc.

Mr. Speaker.— The question is:

"That Clause 1, the Long Title the preamble and the Enacting formula do stand part of the Bill."

The motion was adopted

Clause 1, the Long Title the preamble and the Enacting formula were added to the Bill.

Motion to pass

Sri B. Rachaiah.— Sir, I beg to move:

"That the Karnataka Educational Institutions (Prohibition of Capitation Fee) Bill, 1984 as amended be passed.

Mr. Speaker.— The question is:

"That the Karnataka Educational Institutions (Prohibition of Capitation Fee) Bill, 1984 as amended be passed."

The motion was adopted and the Bill was passed

Mr. Speaker.— The House now stands adjourned to meet again tomorrow at 11-00 AM.

(The House adjourned at Thirty-five Minutes past Seven of the Clock to meet again at Eleven of the Clock on Wednesday, the 8th February, 1984).